SISTERS
FOR CHANGE



# ನ್ಯಾಯದತ್ತ ನಡಿಗೆ

ಮಹಿಳೆಯರು ಮತ್ತು ಹುಡುಗಿಯರ

ಮೇಲಿನ ಹಿಂಸೆಯನ್ನು ಎದುರಿಸುವ

ಕಾಯಿದೆಗಳ ಕಾನೂನು ಕೈಪಿಡಿ

# ACCESSING JUSTICE

A legal manual on laws to combat violence against women and girls

[redacted]

# ನ್ಯಾಯದತ್ತ ನಡಿಗೆ:

## ಮಹಿಳೆಯರು ಮತ್ತು ಹುಡುಗಿಯರ ಮೇಲಾಗುವ

## ಹಿಂಸೆಯನ್ನು ಎದುರಿಸುವ ಕಾಯಿದೆಗಳ

## ಕಾನೂನು ಕೈಪಿಡಿ

[redacted]

# ನ್ಯಾಯದತ್ತ ನಡಿಗೆ: ಮಹಿಳೆಯರು ಮತ್ತು ಹುಡುಗಿಯರ ಮೇಲಾಗುವ ಹಿಂಸೆಯನ್ನು ಎದುರಿಸುವ ಕಾಯಿದೆಗಳ ಕಾನೂನು ಕೈಪಿಡಿ

ಭಾರತದ ಸಂವಿಧಾನದ ಪರಿಚ್ಛೇದ 14ರ ಅಡಿಯಲ್ಲಿ

*ಪ್ರಭುತ್ವವು ದೇಶದ ಒಳಗೆ ಯಾವುದೇ ವ್ಯಕ್ತಿಗೆ ಕಾನೂನಿನ ಎದುರು ಸಮಾನತೆಯನ್ನು*

*ಅಥವಾ ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸಲಾಗದು*

ಕಾನೂನಿನ ಸಮಾನ ರಕ್ಷಣೆಯ ಹಕ್ಕು ಎಂದರೆ ನ್ಯಾಯಕ್ಕೆ ಒಂದೇ ರೀತಿಯ ಲಭ್ಯತೆಯನ್ನು ಹೊಂದುವ ಮತ್ತು ಕಾನೂನಿನಿಂದ ಸಮಾನ ರೀತಿಯಲ್ಲಿ ನಡೆಸಿಕೊಳ್ಳುವುದನ್ನು ಹೊಂದುವ ಹಕ್ಕು ಎಂದರ್ಥ. ನ್ಯಾಯಕ್ಕೆ ಲಭ್ಯತೆಯು ಕಾನೂನಿನ ಆಳ್ವಿಕೆಗೆ ಅಡಿಪಾಯವಾಗಿದೆ. ಕಾನೂನಿಗೆ ಲಭ್ಯತೆಯ ಗೈರುಹಾಜರಿಯಲ್ಲಿ, ಜನರು ತಮ್ಮ ಧ್ವನಿಯನ್ನು ಕೇಳಿಸಲು, ಅವರ ಹಕ್ಕುಗಳನ್ನು ಅನುಭವಿಸಲು, ತಾರತಮ್ಯಕ್ಕೆ ಸವಾಲು ಎಸೆಯಲು ಅಥವಾ ನಿರ್ಧಾರ-ರೂಪಕರನ್ನು ಹೊಣೆಯಾಗಿಸಲು ಅಸಮರ್ಥರಾಗುತ್ತಾರೆ.

ಮಹಿಳೆಯರು ಮತ್ತು ಹುಡುಗಿಯರಿಗೆ ಕಾನೂನಿನ ಸಮಾನ ರಕ್ಷಣೆಯನ್ನು ಗಳಿಸಿಕೊಡಲು ಒಂದು ಅಗತ್ಯವಾದ ಪೂರ್ವಕರಾರು ಎಂದರೆ ಮಹಿಳೆಯರ ಮಾನವ ಹಕ್ಕುಗಳು ಮತ್ತು ಮಹಿಳೆಯರ ವಿರುದ್ಧ ಹಿಂಸೆಯ ಮೇಲಿನ ಕೌಟುಂಬಿಕ ಕಾನೂನುಗಳ ಕುರಿತು ಮಾಹಿತಿಯು ಉಚಿತವಾಗಿ ಸಿಗುವಂತೆ ಮತ್ತು ಸುಲಭವಾಗಿ ಲಭ್ಯವಾಗುವಂತೆ ಮಾಡುವುದು. ನಮ್ಮ ದೇಶದಲ್ಲಿ ಅನೇಕ ಕಾಯಿದೆಗಳು, ಕಾರ್ಯವಿಧಾನಗಳು, ಅಧಿನಿಯಮಗಳು ಮತ್ತು ನ್ಯಾಯಾಲಯದ ತೀರ್ಪುಗಳು ಕೇವಲ ಇಂಗ್ಲಿಶ್‌ನಲ್ಲಿ ಲಭ್ಯವಿದ್ದು, ಅವು ದೇಶದ ಬಹುಸಂಖ್ಯಾತ ಮಹಿಳೆಯರು ಹಾಗೂ ಹುಡುಗಿಯರಿಗೆ, ಜೊತೆಗೆ ಹೆಚ್ಚಿನ ತಳಮಟ್ಟದ ಕಾರ್ಯಕರ್ತರಿಗೆ ಮತ್ತು ಸಮುದಾಯ-ಆಧರಿತ ಸಂಸ್ಥೆಗಳಿಗೆ ಲಭ್ಯವಾಗುವುದಿಲ್ಲ. ಸ್ಥಳೀಯ ಭಾಷೆಗಳಲ್ಲಿ ಪ್ರಕಟವಾದ ಕೆಲವು ಕೂಡ ಸಂಕೀರ್ಣ ಭಾಷೆಯಲ್ಲಿ ಮತ್ತು ಕಾನೂನಿನ ಪರಿಭಾಷೆಯನ್ನು ಹೊಂದಿರುವುದರಿಂದ, ಅವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅನ್ವಯಿಸುವುದು ಕಠಿಣವಾಗುತ್ತದೆ.

ಕಳೆದ ಮೂರು ವರ್ಷಗಳಿಂದ, ಸಿಸ್ಟರ್ಸ್ ಫಾರ್ ಚೇಂಜ್ ಸಂಸ್ಥೆಯು ಭಾರತದ ಆರು ರಾಜ್ಯಗಳಲ್ಲಿ ತಳಮಟ್ಟದ ಮಹಿಳಾ ಕಾರ್ಯಕರ್ತರು, ಸಮುದಾಯ ನಾಯಕರು ಮತ್ತು ಮಾನವ ಹಕ್ಕುಗಳ ಪ್ರತಿಪಾದಕರಿಗೆ ಕಾನೂನು ಕಾರ್ಯಕರ್ತರು ಮತ್ತು ಕಾನೂನು ಸಹವರ್ತಿ ಶಿಕ್ಷಕರಾಗಿ ತರಬೇತಿಗೊಳಿಸಿದ್ದು, ಅವರು ಹಿಂಸೆಯ ಸಂತ್ರಸ್ತರಾದ ಮಹಿಳೆಯರು ಮತ್ತು ಹುಡುಗಿಯರಿಗೆ ಬೆಂಬಲಿಸುವುದು, ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಲಭ್ಯತೆ ಪಡೆಯಲು ಸಹಾಯ ಮಾಡುವುದು, ಮಹಿಳೆಯರು ಮತ್ತು ಹುಡುಗಿಯರ ಮೇಲಾಗುವ ಹಿಂಸೆಯ (ವಿಎಡಬ್ಲ್ಯುಜಿ) ಅಪರಾಧಗಳನ್ನು ವರದಿ ಮಾಡುವುದು ಮತ್ತು ಬದುಕುಳಿದವರಿಗೆ ನ್ಯಾಯದಾನದ ಫಲಿತಾಂಶವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ನಮ್ಮ ಕೆಲಸದ ಮೂಲಕ, ನಾವು ವಿವರಣಾತ್ಮಕವಾದ ಕಾನೂನು ತರಬೇತಿ ಸಾಮಗ್ರಿಗಳನ್ನು, ತಪಶೀಲುಪಟ್ಟಿಗಳನ್ನು ಮತ್ತು ಸಾಧನಗಳನ್ನು ಸರಳವಾದ, ಅರ್ಥವಾಗುವಂತಹ ಭಾಷೆಯಲ್ಲಿ ಸಿದ್ಧಪಡಿಸಿದ್ದು, ಕನ್ನಡ, ಹಿಂದಿ, ಮರಾಠಿ ಮತ್ತು ತೆಲುಗು, ಈ ನಾಲ್ಕು ಮುಖ್ಯ ಭಾಷೆಗೆ ಅನುವಾದಿಸಿದ್ದೇವೆ.

ಈ ಕಾನೂನು ಕೈಪಿಡಿಯಲ್ಲಿ ಆ ಎಲ್ಲ ಕಾನೂನು ಸಾಹಿತ್ಯವನ್ನು ಒಂದು ಕಡೆ ಸುಲಭಲಭ್ಯವಾಗುವಂತೆ, ಉಚಿತ ಪ್ರಕಟಣೆಯಾಗಿ ದೊರೆಯುವಂತೆ ಸಂಗ್ರಹಿಸಲಾಗಿದೆ. ಕಾನೂನು ಕೈಪಿಡಿಯು ಕೌಟುಂಬಿಕ ಹಿಂಸೆ, ಲೈಂಗಿಕ ಹಿಂಸೆ, ಕೆಲಸದ ಸ್ಥಳದಲ್ಲಿ ಮಹಿಳೆಯ ಮೇಲೆ ಲೈಂಗಿಕ ಕಿರುಕುಳ, ಮಹಿಳೆಯ ವಿರುದ್ಧ ಜಾತಿ-ಆಧಾರಿತ ಹಿಂಸೆ ಮತ್ತು ಮಕ್ಕಳ ಲೈಂಗಿಕ ಶೋಷಣೆ, ಇದೆಲ್ಲದರೊಂದಿಗೆ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಮಹಿಳೆಯರ ವಿರುದ್ಧ ಹಿಂಸೆಯ ಅಪರಾಧಗಳು, ಈ ಎಲ್ಲದರ ಮೇಲಿನ ಮುಖ್ಯವಾದ ಕೌಟುಂಬಿಕ ಕಾಯಿದೆಗಳನ್ನು ವಿವರಿಸುತ್ತದೆ. ನಾವು ಅಂತರ್ಜಾಲದ ಸೀಮಿತ ಲಭ್ಯತೆ ಅಥವಾ ಯಾವುದೇ ಲಭ್ಯತೆಯಿಲ್ಲದ ಸಮಾಜದ ಅಂಚಿನಲ್ಲಿರುವ ಗುಂಪುಗಳಿಗೆ ಕಾನೂನು ಕೈಪಿಡಿಯ ಮುದ್ರಿತ ಪ್ರತಿಯನ್ನು ಮತ್ತು ಅಂತರ್ಜಾಲದ ಲಭ್ಯತೆ ಇರುವ ಗುಂಪುಗಳಿಗೆ ಆನ್‌ಲೈನ್‌ನಲ್ಲಿ ಸಾಫ್ಟ್ ಪ್ರತಿಯನ್ನು ಪ್ರಕಟಿಸುತ್ತಿದ್ದೇವೆ.

© ಸಿಸ್ಟರ್ಸ್ ಫಾರ್ ಚೇಂಜ್ 2017 ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಕೈಪಿಡಿಯನ್ನು ಪುನಃಮುದ್ರಿಸಲು ಅನುಮತಿ ಪಡೆಯಲು ಕೋರಿಕೆಯನ್ನು ಇಲ್ಲಿಗೆ ಕಳುಹಿಸಿ *info@sistersforchange.uk*



[redacted]

ಕಾನೂನು ಮಾಹಿತಿಯನ್ನು ಹಾಗೂ ಮಾರ್ಗದರ್ಶನವನ್ನು ನಮ್ಮ ಸದ್ಯದ ತರಬೇತಿ ಕಾರ್ಯಕ್ರಮಗಳು ತಲುಪುತ್ತಿರುವ ಸಂಖ್ಯೆಗಿಂತ ಹೆಚ್ಚು ಸಂಖ್ಯೆಯ ಮಹಿಳೆಯರು, ಸಮುದಾಯ ನಾಯಕರು, ಕಾರ್ಯಕರ್ತರು ಮತ್ತು ಮಾನವ ಹಕ್ಕುಗಳ ಪ್ರತಿಪಾದಕರೊಂದಿಗೆ ಹಂಚಿಕೊಳ್ಳಬೇಕು ಎನ್ನುವುದು ನಮ್ಮ ಗುರಿಯಾಗಿದೆ. ಹಾಗೆ ಮಾಡುವ ಮೂಲಕ, ದೇಶಾದ್ಯಂತ ಇರುವ ಮಹಿಳಾ ಸಂಪರ್ಕಜಾಲಗಳು ಅಥವಾ ನೆಟ್‌ವರ್ಕ್‌ಗಳು, ತಳಮಟ್ಟದ ಕಾರ್ಯಕರ್ತರು, ಮಾನವ ಹಕ್ಕುಗಳ ಪ್ರತಿಪಾದಕರು ಮತ್ತು ಸಮುದಾಯ-ಆಧಾರಿತ ಸಂಸ್ಥೆಗಳು, ಮಹಿಳೆಯರು ಮತ್ತು ಹುಡುಗಿಯರ ಮೇಲೆ ನಡೆಯುವ ಹಿಂಸೆಯನ್ನು ಎದುರಿಸಲು ಕೌಟುಂಬಿಕ ಕಾನೂನುಗಳನ್ನು ಹೆಚ್ಚು ಅರ್ಥೈಸಿಕೊಂಡು, ಈ ಕಾನೂನುಗಳನ್ನು ಬಳಸಿಕೊಳ್ಳುವ ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುತ್ತಾರೆ ಮತ್ತು ದೇಶದಲ್ಲಿ ಮಹಿಳೆಯರು ಹಾಗೂ ಹುಡುಗಿಯರಿಗೆ ಉತ್ತಮ ನ್ಯಾಯದಾನದ ಫಲಿತಾಂಶಗಳನ್ನು ಖಾತ್ರಿಪಡಿಸುತ್ತಾರೆ ಎಂದು ನಾವು ಆಶಿಸುತ್ತೇವೆ.

**ಸಿಸ್ಟರ್ಸ್ ಫಾರ್ ಚೇಂಜ್**

**ನವೆಂಬರ್ 2017**

## ಸಿಸ್ಟರ್ಸ್ ಫಾರ್ ಚೇಂಜ್ ಕುರಿತು

2014ರಲ್ಲಿ ಹುಟ್ಟುಹಾಕಿದ ಒಂದು ಅಂತಾರಾಷ್ಟ್ರೀಯ ಎನ್‌ಜಿಒ ಆಗಿದ್ದು, ವಿಶ್ವಾದ್ಯಂತ ಮಹಿಳೆಯರ ಮೇಲೆ ನಡೆಯುವ ಹಿಂಸೆಯನ್ನು ಕಾನೂನು ಸಬಲೀಕರಣ ಮತ್ತು ಸಾಮಾಜಿಕ ಹೊಣೆಗಾರಿಕೆ ಮೂಲಕ ಎದುರಿಸಲು ಪ್ರಯತ್ನಿಸುತ್ತಿದೆ. ಸಿಸ್ಟರ್ಸ್ ಫಾರ್ ಚೇಂಜ್ ಸಂಸ್ಥೆಯು ಸಮಾಜದ ಅಂಚಿನಲ್ಲಿರುವ ಮಹಿಳೆಯರ ನ್ಯಾಯಕ್ಕೆ ಲಭ್ಯತೆಯನ್ನು ಮತ್ತು ಕಾನೂನಿನ ಸಮಾನ ರಕ್ಷಣೆಯ ಅವರ ಹಕ್ಕನ್ನು ಗಳಿಸಿಕೊಡಲು, ನ್ಯಾಯದಾನದ ಫಲಿತಾಂಶಗಳನ್ನು ಉತ್ತಮಪಡಿಸಲು ಮತ್ತು ಸಿಸ್ಟರ್ಸ್ ಫಾರ್ ಚೇಂಜ್ ಹಿಂಸೆಯ ಸಂತ್ರಸ್ತರಾದ ಮಹಿಳೆಯರಿಗೆ (ಔಪಚಾರಿಕ ಹಾಗೂ ಅನೌಪಚಾರಿಕ ನ್ಯಾಯದಾನ ವ್ಯವಸ್ಥೆಗಳ ಮೂಲಕ) ಪರಿಹಾರಗಳನ್ನು ಮತ್ತು ನ್ಯಾಯದಾನವನ್ನು ಜಾರಿಮಾಡುವಲ್ಲಿ ಇರುವ ರಾಚನಿಕ ಲಿಂಗ ತಾರತಮ್ಯಗಳಿಗೆ ಸವಾಲು ಎಸೆಯುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಾನೂನುಗಳನ್ನು ತಳಮಟ್ಟದಲ್ಲಿ ವಾಸ್ತವವಾಗಿಸುವುದು ಮತ್ತು ಅಂಚಿನಲ್ಲಿರುವ ಮಹಿಳೆಯರು ಹಾಗೂ ಹುಡುಗಿಯರಿಗೆ ನ್ಯಾಯದಾನದ ವ್ಯವಸ್ಥೆಯು ಹೆಚ್ಚು ಉತ್ತಮವಾಗಿ ಕೆಲಸ ಮಾಡುವಂತೆ ಮಾಡುವುದು ನಮ್ಮ ಧ್ಯೇಯವಾಗಿದೆ.

### ಸಿಸ್ಟರ್ಸ್ ಫಾರ್ ಚೇಂಜ್ ಧ್ಯೇಯ

- ಮಹಿಳೆಯರು ಮತ್ತು ಹುಡುಗಿಯರ ವಿರುದ್ಧದ ಹಿಂಸೆಗೆ (ವಿಎಡಬ್ಲ್ಯುಜಿ) ಸಂಬಂಧಿಸಿದಂತೆ ಮಹಿಳೆಯರ ಹಕ್ಕುಗಳು ಹಾಗೂ ಕೌಟುಂಬಿಕ ಕಾನೂನುಗಳ ಬಗ್ಗೆ ಅಂಚಿನಲ್ಲಿರುವ ಮಹಿಳೆಯರಿಗೆ ಮಾಹಿತಿಯು ಲಭ್ಯವಾಗುವಂತೆ ಮಾಡುವುದು.
- ಹಿಂಸೆಗೆ ಗುರಿಯಾದ ಮಹಿಳೆ ಮತ್ತು ಹುಡುಗಿ ಸಂತ್ರಸ್ತೆಯರಿಗೆ ಬೆಂಬಲ ನೀಡಲು ಮತ್ತು ವಿಎಡಬ್ಲ್ಯುಜಿ ಪ್ರಕರಣಗಳನ್ನು ವರದಿ ಮಾಡಲು ಸಮುದಾಯ ಕಾನೂನು ಕಾರ್ಯಕರ್ತರಿಗೆ (ಕಮ್ಯುನಿಟಿ ಪ್ಯಾರಾಲೀಗಲ್ಸ್) ತರಬೇತಿ ನೀಡಲು ಪಾಲುದಾರ ಸಂಸ್ಥೆಗಳೊಂದಿಗೆ ಕೆಲಸ ಮಾಡುವುದು.
- ವಿಎಡಬ್ಲುಜಿಗೆ 'ಸರ್ಕಾರಿ ಸಂಸ್ಥೆಗಳ' ಪ್ರತಿಕ್ರಿಯೆಗಳ ಕುರಿತು ನಿಗಾವಹಿಸಲು ಮತ್ತು ವಿಎಡಬ್ಲ್ಯುಜಿಯನ್ನು ತಡೆಗಟ್ಟಲು, ಅದರ ವಿರುದ್ಧ ರಕ್ಷಣೆ ಒದಗಿಸಲು, ತನಿಖೆ ನಡೆಸಲು, ಶಿಕ್ಷಿಸಲು ಮತ್ತು ಪರಿಹಾರಗಳನ್ನು ಒದಗಿಸುವ ನಿಟ್ಟಿನಲ್ಲಿ ಅವರ ಬಾಧ್ಯತೆಗಳನ್ನು ಈಡೇರಿಸಲು ವಿಫಲವಾದಲ್ಲಿ ಅಧಿಕಾರಿಗಳು/ಸಂಸ್ಥೆಗಳನ್ನು ಹೊಣೆಗಾರರನ್ನಾಗಿಸುವುದು.
- ವಿಎಡಬ್ಲುಜಿಯ ಸಾಮಾಜಿಕ ಸ್ವೀಕೃತಿಯನ್ನು ಕೊನೆಗಾಣಿಸಲು ಸಮುದಾಯಗಳೇ ಈ ಕುರಿತು ಮಾತನಾಡುವಂತೆ ಅವರನ್ನು ಒಗ್ಗೂಡಿಸುವುದು.

ಸಿಸ್ಟರ್ಸ್ ಫಾರ್ ಚೇಂಜ್ ಸಂಸ್ಥೆಯು ಮಹಿಳಾ ಸಮುದಾಯ ಸಂಸ್ಥೆಗಳು, ಸಮುಷ್ಟಿಗಳು ಹಾಗೂ ಯೂನಿಯನ್‌ಗಳು, ಮಾನವ ಹಕ್ಕುಗಳ ಪ್ರತಿಪಾದಕರು ಹಾಗೂ ಕಾರ್ಯಕರ್ತರ ನೆಟ್‌ವರ್ಕ್‌ಗಳ ಜೊತೆಗೆ ಭಾಗೀದಾರಿಕೆಯಲ್ಲಿ ಕೆಲಸ ಮಾಡುತ್ತದೆ. ನಾವು ವಿಎಡಬ್ಲ್ಯುಜಿಗೆ ಸಂಬಂಧಿಸಿದ ಕೌಟುಂಬಿಕ ಕಾನೂನುಗಳ ಕುರಿತಾಗಿ ಸಾವಿರಾರು ಮಹಿಳೆಯರಲ್ಲಿ ಜಾಗೃತಿಯನ್ನು ಮೂಡಿಸಲು ತಳಮಟ್ಟದಲ್ಲಿ ಕಾನೂನು ಸಾಕ್ಷರತೆ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ. ನಾವು *ವಿಎಡಬ್ಲ್ಯುಜಿ ಪ್ಯಾರಾಲೀಗಲ್ಸ್ ಅಥವಾ ಕಾನೂನು ಕಾರ್ಯಕರ್ತರಿಗೆ* ತರಬೇತಿ ಕೊಡುತ್ತೇವೆ; ಆ ಮೂಲಕ ಅವರಿಗೆ ತಾಂತ್ರಿಕ, ಕಾನೂನಾತ್ಮಕ ಮತ್ತು ಪ್ರಕರಣ–ನಿರ್ವಹಣೆ ಜ್ಞಾನ ಮತ್ತು ಸಾಧನವನ್ನು ಒದಗಿಸಿ ಸಜ್ಜುಗೊಳಿಸಿ, ಹಿಂಸೆಯ ಮಹಿಳಾ ಸಂತ್ರಸ್ತರಿಗೆ ಸಲಹೆ ನೀಡಿ, ಬೆಂಬಲಿಸಲು ಮತ್ತು ವಿಎಡಬ್ಲ್ಯುಜಿ ಅಪರಾಧಗಳಿಗೆ ಸರ್ಕಾರಿ ಸಂಸ್ಥೆಗಳ ಪ್ರತಿಕ್ರಿಯೆಗಳ ಮೇಲೆ ನಿಗಾವಹಿಸಲು ಅವರನ್ನು ಸಮರ್ಥರನ್ನಾಗಿಸುತ್ತೇವೆ.

ಮಹಿಳೆಯರು ಮತ್ತು ಅವರ ಸಮುದಾಯಗಳನ್ನು ಮಹಿಳೆಯರು ಅನುಭವಿಸುವ ಹಿಂಸೆಯ ಕುರಿತು ಮಾತನಾಡುವಂತೆ, ಮಹಿಳೆಯರ ಮೇಲೆ ನಡೆದ ಹಿಂಸೆಯ ಪ್ರಕರಣಗಳ ಕುರಿತು ವರದಿ ಮಾಡಿ, ದಾಖಲಿಸುವುದನ್ನು ಹೆಚ್ಚಿಸಲು ಮತ್ತು ವಿಎಡಬ್ಲ್ಯುಜಿಎನ್ನು ಎದುರಿಸಲು ಕೌಟುಂಬಿಕ ಕಾನೂನುಗಳ ಅನುಷ್ಠಾನವನ್ನು ಉತ್ತಮಪಡಿಸಲು ನಾವು ಬೆಂಬಲಿಸುತ್ತೇವೆ.

### ಪರಿಭಾಷೆಗಳ ಕುರಿತು ಟಿಪ್ಪಣಿ

ನಾವು ಹಿಂಸೆಯನ್ನು ಅನುಭವಿಸಿದ ಮಹಿಳೆಯರು ಮತ್ತು ಹುಡುಗಿಯರಿಗೆ ಸಂಬಂಧಿಸಿ ಹೇಳುವಾಗ ನಿರ್ದಿಷ್ಟವಾಗಿ 'ಸಹಿಸಿ ಪಾರಾದವರು' (ಸರ್‌ವೈವರ್ಸ್) ಪರಿಭಾಷೆಯ ಬದಲಿಗೆ 'ಸಂತ್ರಸ್ತ' (ವಿಕ್ಟಿಮ್) ಪರಿಭಾಷೆಯನ್ನು ಬಳಸಿಕೊಂಡಿದ್ದೇವೆ; ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯ ಒಳಗೇ ಅವರು ಹೊಂದಿರುವ ವಿಶೇಷ ಹಕ್ಕುಗಳು ಮತ್ತು ಕಾನೂನು ಸ್ಥಾನಮಾನಗಳ ಮಹತ್ವವನ್ನು ಸೂಚಿಸಲು ಹೀಗೆ ಬಳಸಿಕೊಂಡಿದ್ದೇವೆ. ಆದಾಗ್ಯೂ, ಹಿಂಸೆಯನ್ನು ಅನುಭವಿಸಿದ ಎಲ್ಲ ಮಹಿಳೆಯರು ಮತ್ತು ಹುಡುಗಿಯರನ್ನು ಹಿಂಸೆಯನ್ನು ಸಹಿಸಿ ಪಾರಾದವರು ಎಂದು ನಾವು ಗುರುತಿಸುತ್ತೇವೆ.

### ಅನುವಾದದ ಕುರಿತು ಟಿಪ್ಪಣಿ

ನಾವು ಈ ಕಾನೂನು ಕೈಪಿಡಿಯನ್ನು ಸಿದ್ಧಪಡಿಸುವಲ್ಲಿ ನಮ್ಮೊಂದಿಗೆ ಕೆಲಸ ಮಾಡಿದ ದುಭಾಷಿ ಮತ್ತು ಅನುವಾದಕರ ತಂಡಕ್ಕೆ ಆಭಾರಿಯಾಗಿದ್ದೇವೆ.


### ಕೃತಜ್ಞತೆಗಳು

ಜೊತೆಗೆ ಈ ಕಾನೂನು ಕೈಪಿಡಿಯ ಪ್ರಕಟಣೆಗೆ ಎಲ್ಲ ರೀತಿಯ ಬೆಂಬಲ ಒದಗಿಸಿದ ನವದೆಹಲಿಯ ಬ್ರಿಟಿಶ್ ಹೈ ಕಮಿಶನ್‌ಗೆ ಕೃತಜ್ಞರಾಗಿದ್ದೇವೆ.


British
High Commission
New Delhi



[redacted]

| | ವಿಭಾಗ 1: ವಿಎಡಬ್ಲ್ಯುಜಿ ಕಾನೂನುಗಳು | ಪುಟ |
|---|---|---|
| 1 | ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಮತ್ತು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಬುಡಕಟ್ಟುಗಳು (ದೌರ್ಜನ್ಯ ತಡೆ) ಕಾಯಿದೆ 1989 & 2015 ಅಡಿಯಲ್ಲಿ ವಿಎಡಬ್ಲ್ಯುಜಿ ಅಪರಾಧಗಳು | 7 |
| 2 | ಭಾರತೀಯ ದಂಡ ಸಂಹಿತೆ: ಅತ್ಯಾಚಾರ – ವ್ಯಾಖ್ಯಾನಗಳು ಮತ್ತು ಕ್ರಿಮಿನಲ್ ಪ್ರಕ್ರಿಯೆ | 16 |
| 3 | ಮದುವೆಯ ಸುಳ್ಳು ಆಶ್ವಾಸನೆ ನೀಡಿ ಅತ್ಯಾಚಾರ: ಸುಪ್ರೀಂ ಕೋರ್ಟ್ ತೀರ್ಪು 2013 | 22 |
| 4 | ಪ್ರಥಮ ಮಾಹಿತಿ ವರದಿಗಳು: ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–2017 | 24 |
| 5 | ಸಂತ್ರಸ್ತರ ಮತ್ತು ಸಾಕ್ಷಿಗಳ ಹೇಳಿಕೆಗಳು: ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–2017 | 26 |
| 6 | ದೌರ್ಜನ್ಯಗಳಿಂದ ದಲಿತ ಮಹಿಳೆಯರ ರಕ್ಷಣೆ | 28 |
| 7 | ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಬುಡಕಟ್ಟುಗಳು (ದೌರ್ಜನ್ಯ ತಡೆ) ಕಾಯಿದೆ ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–2017 | 36 |
| 8 | ಕೌಟುಂಬಿಕ ಹಿಂಸೆಯಿಂದ ಮಹಿಳೆಯರು ಮತ್ತು ಹುಡುಗಿಯರ ರಕ್ಷಣೆ | 37 |
| 9 | ಕೌಟುಂಬಿಕ ಹಿಂಸೆಗಳಿಂದ ಮಹಿಳೆಯರು ಮತ್ತು ಹುಡುಗಿಯರ ರಕ್ಷಣೆ: ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–2017 | 44 |
| 10 | ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದಿಂದ ಮಹಿಳೆಯರ ರಕ್ಷಣೆ | 46 |
| 11 | ಹಿಂಸೆ ಮತ್ತು ಶೋಷಣೆಯಿಂದ ಮಕ್ಕಳ ರಕ್ಷಣೆ | 51 |
| 12 | 18 ವರ್ಷ ಕೆಳಗಿನ ಹುಡುಗಿಯೊಂದಿಗೆ ಲೈಂಗಿಕ ಕ್ರಿಯೆಯು ಅತ್ಯಾಚಾರ: ಸುಪ್ರೀಂ ಕೋರ್ಟ್ ತೀರ್ಪು ಅಕ್ಟೋಬರ್ 2017 | 62 |
| 13 | ವಿಎಡಬ್ಲ್ಯುಜಿಗೆ ಸಂಬಂಧಿಸಿದ ಹೈಕೋರ್ಟಿನ ಮಹತ್ವದ ತೀರ್ಪುಗಳು | 64 |
| | ವಿಭಾಗ 2: ಸಾಧನಗಳು ಮತ್ತು ತಪಶೀಲು ಪಟ್ಟಿ | |
| 14 | ವಿಎಡಬ್ಲ್ಯುಜಿ ಅಪರಾಧಗಳನ್ನು ವರದಿ ಮಾಡಲು ತಪಶೀಲು ಪಟ್ಟಿ (ಚೆಕ್‌ಲಿಸ್ಟ್) | 71 |
| 15 | ಪ್ರಕರಣ ದಾಖಲೀಕರಣ ಮತ್ತು ಸಾಕ್ಷ್ಯಗಳ ಸಂಗ್ರಹ | 72 |
| 16 | ವಿಎಡಬ್ಲ್ಯುಜಿ ಪ್ರಕರಣಗಳ ಪೊಲೀಸ್ ತನಿಖೆಯ ಮೇಲೆ ನಿಗಾವಹಿಸಲು ತಪಶೀಲು ಪಟ್ಟಿ | 75 |


- ವಿಎಡಬ್ಲ್ಯುಜಿ – ಮಹಿಳೆಯರು ಮತ್ತು ಹುಡುಗಿಯರ ಮೇಲಾಗುವ ಹಿಂಸೆ



[redacted]

# ವಿಭಾಗ 1

## ವಿಎಡಬ್ಲ್ಯುಜಿ ಕಾನೂನುಗಳು



[redacted]

## ಭಾರತೀಯ ದಂಡ ಸಂಹಿತೆ ಮತ್ತು ದೌರ್ಜನ್ಯ ತಡೆ ಕಾಯಿದೆ, 1989 &2015ರ ಅಡಿಯಲ್ಲಿ ವಿಎಡಬ್ಲ್ಯುಜಿಯ ಅಪರಾಧಗಳು

| ಭಾರತೀಯ ದಂಡ ಸಂಹಿತೆ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ 1989 (ಪಿಒಎ) ಮತ್ತು ಪಿಒಎ ತಿದ್ದುಪಡಿ ಕಾಯಿದೆ 2015 |
|---|---|
| ಎಸ್.300 ಕೊಲೆ (ಎಸ್.302 ಕೊಲೆಗೆ ಶಿಕ್ಷೆ)<br><br>ಎಸ್.307 ಕೊಲೆಗೆ ಪ್ರಯತ್ನ | ಎಸ್.3(2)(V) ಅಪರಾಧಗಳು (ಕೆಳಗೆ ನೋಡಿ) |
| ಎಸ್.304ಬಿ ವರದಕ್ಷಿಣೆ ಸಾವು<br>ವ್ಯಾಖ್ಯಾನ: ಮದುವೆಯಾದ ಏಳು ವರ್ಷಗಳ ಒಳಗೆ ಸುಟ್ಟಗಾಯಗಳಿಂದ ಅಥವಾ ದೇಹಕ್ಕಾದ ಗಾಯಗಳಿಂದ ಅಥವಾ ಅಸಹಜ ಸ್ಥಿತಿಗತಿಯಲ್ಲಿ ಮಹಿಳೆಯ ಸಾವು ಸಂಭವಿಸಿದರೆ ಮತ್ತು ಆಕೆ ಸತ್ತ ಕೂಡಲೇ ಆಕೆಯು ಗಂಡ ಅಥವಾ ಗಂಡನ ಕಡೆಯ ಸಂಬಂಧಿಗಳಿಂದ ವರದಕ್ಷಿಣೆಯ ಯಾವುದೇ ಬೇಡಿಕೆಗೆ ಸಂಬಂಧಿಸಿದಂತೆ ಕ್ರೌರ್ಯಕ್ಕೆ ಅಥವಾ ಕಿರುಕುಳಕ್ಕೆ ಒಳಗಾಗಿದ್ದಾಳೆ ಎಂದು ರುಜುವಾತುಪಡಿಸಿದರೆ, ಅದು ವರದಕ್ಷಿಣೆ ಸಾವು. | ಎಸ್.3(2)( V) ಅಪರಾಧಗಳು |
| ಐಪಿಸಿ ಎಸ್.304ಬಿ<br>ವ್ಯಾಖ್ಯಾನ: ಯಾವುದೇ ವ್ಯಕ್ತಿಗೆ ದೈಹಿಕ ನೋವು, ಕಾಯಿಲೆ ಅಥವಾ ದೇಹದೌರ್ಬಲ್ಯವನ್ನು ಉಂಟುಮಾಡುವುದು. | ಎಸ್.3(2) (Vಎ) ಶೆಡ್ಯೂಲ್ ಅಪರಾಧ (ಕೆಳಗೆ ನೋಡಿ) |
| ಎಸ್.320 ಘೋರ ಹಾನಿ<br>ವ್ಯಾಖ್ಯಾನ: ಕಣ್ಣಿನ ದೃಷ್ಟಿಯನ್ನು ಅಥವಾ ಎರಡೂ ಅಥವಾ ಒಂದು ಕಿವಿಯ ಶ್ರವಣಶಕ್ತಿಯನ್ನು ಶಾಶ್ವತವಾಗಿ ಊನ ಮಾಡುವುದು; ಕಾಲು, ಕೈ ಅಥವಾ ಮಂಡಿಯನ್ನು ಶಾಶ್ವತವಾಗಿ ಊನ ಮಾಡುವುದು; ಮುಖ ಅಥವಾ ತಲೆಯನ್ನು ಶಾಶ್ವತವಾಗಿ ವಿರೂಪಗೊಳಿಸುವುದು; ಮೂಳೆ ಅಥವಾ ಹಲ್ಲಿನ ಮುರಿತ ಅಥವಾ ಪಲ್ಲಟ; ಪ್ರಾಣಕ್ಕೆ ಸಂಚಕಾರ ಒಡ್ಡುವ ಅಥವಾ 20 ದಿನಗಳಿಗೂ ಹೆಚ್ಚು ಕಾಲ ತೀವ್ರತರನಾದ ದೈಹಿಕ ನೋವು ಉಂಟುಮಾಡುವ ಯಾವುದೇ ರೀತಿಯ ಗಾಯ | ಎಸ್.3(2) (Vಎ) ಶೆಡ್ಯೂಲ್ ಅಪರಾಧ |
| ಎಸ್.324 ಅಪಾಯಕಾರಿ ಶಸ್ತ್ರಗಳು ಅಥವಾ ಬೇರೆ ರೀತಿಯಿಂದ ಉದ್ದೇಶಪೂರ್ವಕವಾಗಿ ತೀವ್ರ ಗಾಯವುಂಟು ಮಾಡುವುದು<br>ವ್ಯಾಖ್ಯಾನ: ಯಾವುದೇ ಸಾಧನದಿಂದ ಶೂಟ್ ಮಾಡುವುದು, ತಿವಿಯುವುದು ಅಥವಾ ಕತ್ತರಿಸುವುದು ಅಥವಾ ಸಾಯಿಸಬಹುದಾದ ಬೇರೆ ಯಾವುದೇ ಸಾಧನದಿಂದ; ಬೆಂಕಿ ಅಥವಾ ಕಾದ ವಸ್ತುವಿನಿಂದ; ವಿಷ ಅಥವಾ ವಿನಾಶಕಾರಿ ವಸ್ತುವಿನಿಂದ; ಯಾವುದೇ ಆಸ್ಫೋಟಕದಿಂದ; ಮನುಷ್ಯ ದೇಹಕ್ಕೆ ಉಸಿರಾಟಕ್ಕೆ, ನುಂಗಲು ಅಥವಾ ರಕ್ತದಲ್ಲಿ ಸೇರಿದರೆ ಹಾನಿಕಾರಕವಾದ ಯಾವುದೇ ವಸ್ತುವಿನಿಂದ; ಬೇರೆ ಯಾವುದೇ ಪ್ರಾಣಿಯಿಂದ; ಘೋರ ಗಾಯವುಂಟು ಮಾಡುವುದು. | ಎಸ್.3(2) (Vಎ) ಶೆಡ್ಯೂಲ್ ಅಪರಾಧ<br><br>ಎಸ್.3(1)(ಎ) ಎಸ್‌ಸಿ ಅಥವಾ ಎಸ್‌ಟಿ ವ್ಯಕ್ತಿಯ ಬಾಯಿಯಲ್ಲಿ ತಿನ್ನಬಾರದ ಅಥವಾ ಹೇಸಿಕೆಯ ವಸ್ತುವನ್ನು ತುರುಕುವುದು ಅಥವಾ ತಿನ್ನಬಾರದ ಅಥವಾ ಹೇಸಿಕೆಯ ವಸ್ತುವನ್ನು ತಿನ್ನಲು ಅಥವಾ ಕುಡಿಯಲು ಅವರಿಗೆ ಬಲವಂತ ಮಾಡುವುದು. |

| | |
|---|---|
| **ಎಸ್.326ಎ ಆಸಿಡ್ ಹಾಕಿ ಉದ್ದೇಶಪೂರ್ವಕವಾಗಿ ತೀವ್ರ ಗಾಯವುಂಟು ಮಾಡುವುದು** ವ್ಯಾಖ್ಯಾನ: ಆಸಿಡ್‌ಅನ್ನು ವ್ಯಕ್ತಿಯ ಮೇಲೆ ಎರಚಿ, ಅಥವಾ ವ್ಯಕ್ತಿಗೆ ಆಸಿಡ್ ಕುಡಿಸಿ, ಅಥವಾ ಬೇರೆ ಯಾವುದೇ ರೀತಿಯಿಂದ ತಾವು ಅಂತಹ ಗಾಯ ಅಥವಾ ನೋವನ್ನು ಉಂಟುಮಾಡುತ್ತಿದ್ದೇವೆ ಎಂಬುದು ಗೊತ್ತಿದ್ದೂ ಬೇಕೆಂದೇ ಉದ್ದೇಶಪೂರ್ವಕವಾಗಿ, ಶಾಶ್ವತ ಅಥವಾ ಭಾಗಶಃ ಹಾನಿ ಅಥವಾ ಅಂಗವಿಕಲತೆ ಅಥವಾ ಸುಡುವುದು, ಊನಗೊಳಿಸುವುದು, ವಿರೂಪಗೊಳಿಸುವುದು ಅಥವಾ ಅಶಕ್ತಗೊಳಿಸುವುದು, ವ್ಯಕ್ತಿಯ ದೇಹದ ಯಾವುದೇ ಭಾಗಕ್ಕೆ ಅಥವಾ ಭಾಗಗಳಿಗೆ ಘೋರ ರೀತಿಯ ಗಾಯವುಂಟುಮಾಡುವುದು. | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್.326ಬಿ ಉದ್ದೇಶಪೂರ್ವಕವಾಗಿ ಆಸಿಡ್ ಎರಚುವುದು ಅಥವಾ ಎರಚಲು ಪ್ರಯತ್ನಿಸುವುದು** ವ್ಯಾಖ್ಯಾನ: ಶಾಶ್ವತ ಅಥವಾ ಭಾಗಶಃ ಹಾನಿ ಅಥವಾ ಅಂಗವಿಕಲತೆ ಅಥವಾ ಸುಡುವುದು, ಊನಗೊಳಿಸುವುದು, ವಿರೂಪಗೊಳಿಸುವುದು ಅಥವಾ ಅಂಗವಿಕಲತೆ ಅಥವಾ ತೀವ್ರತೆರನಾದ ಗಾಯವುಂಟುಮಾಡುವ ಉದ್ದೇಶದಿಂದ ಯಾವುದೇ ವ್ಯಕ್ತಿಯ ಮೇಲೆ ಆಸಿಡ್ ಎರಚುವುದು ಅಥವಾ ಎರಚಲು ಪ್ರಯತ್ನಿಸುವುದು ಅಥವಾ ಹಾಕಲು ಪ್ರಯತ್ನಿಸುವುದು ಅಥವಾ ಬೇರೆ ಯಾವುದೇ ರೀತಿಯನ್ನು ಬಳಸಲು ಯತ್ನಿಸುವುದು. | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್.328 ವಿಷ ಬಳಸಿ ವ್ಯಕ್ತಿಗೆ ಹಾನಿಯುಂಟು ಮಾಡುವುದು** ವ್ಯಾಖ್ಯಾನ: ಹಾನಿಯುಂಟು ಮಾಡುವ ಉದ್ದೇಶದಿಂದ ಅಥವಾ ಅಪರಾಧವನ್ನು ಮಾಡುವ ಅಥವಾ ಅಪರಾಧಕ್ಕೆ ಆಸ್ಪದ ನೀಡುವ ಉದ್ದೇಶದ ಅಥವಾ ಆ ಮೂಲಕ ಹಾನಿಯುಂಟು ಮಾಡುತ್ತೇನೆಂದು ಗೊತ್ತಿದ್ದೂ, ಯಾವುದೇ ಬಗೆಯ ವಿಷ ಅಥವಾ ಮಂಕುಗೊಳಿಸುವ ವಸ್ತು, ಮತ್ತೇರಿಸುವ ಅಥವಾ ಯಾವುದೇ ಡ್ರಗ್ ಅಥವಾ ಇನ್ನಾವುದೇ ಈ ಬಗೆಯ ವಸ್ತುವನ್ನು ಉಣ್ಣಿಸಲು ಅಥವಾ ಬಲವಂತದಿಂದ ತೆಗೆದುಕೊಳ್ಳುವಂತೆ ಮಾಡುವುದು. | ಎಸ್.3(2) (vಎ) ಶೆಡ್ಯೂಲ್ ಅಪರಾಧ<br><br>ಎಸ್.3(1)(ಎ) ಎಸ್‌ಸಿ ಅಥವಾ ಎಸ್‌ಟಿ ವ್ಯಕ್ತಿಯ ಬಾಯಿಯಲ್ಲಿ ತಿನ್ನಬಾರದ ಅಥವಾ ಹೇಸಿಕೆಯ ವಸ್ತುವನ್ನು ತುರುಕುವುದು ಅಥವಾ ತಿನ್ನಬಾರದ ಅಥವಾ ಹೇಸಿಕೆಯ ವಸ್ತುವನ್ನು ತಿನ್ನಲು ಅಥವಾ ಕುಡಿಯಲು ಅವರಿಗೆ ಬಲವಂತ ಮಾಡುವುದು. |
| **ಎಸ್.329 ತಪ್ಪು ನಿರ್ಬಂಧ ಹೇರುವುದು** ವ್ಯಾಖ್ಯಾನ: ಯಾವುದೇ ವ್ಯಕ್ತಿಯ ಮೇಲೆ ಉದ್ದೇಶಪೂರ್ವಕ ಪ್ರತಿಬಂಧ ಹೇರಿ, ಆ ಮೂಲಕ ಆ ವ್ಯಕ್ತಿಗೆ ಹೋಗಲು ಹಕ್ಕಿರುವ ಮಾರ್ಗದಲ್ಲಿ ಹೋಗುವುದನ್ನು ತಡೆಯುವುದು. | ಎಸ್.3(2) (vಎ) ಶೆಡ್ಯೂಲ್ ಅಪರಾಧ<br><br>ಎಸ್.3(1) (ಜಡ್‌ಎ) (ಎ) ಎಸ್.ಸಿ. ಅಥವಾ ಎಸ್.ಟಿ. ಸಮುದಾಯದ ಯಾವುದೇ ಸದಸ್ಯರನ್ನು ಯಾವುದೇ ರೀತಿಯಲ್ಲಿ ಸಾರ್ವಜನಿಕ ಆಸ್ತಿ ಸಂಪನ್ಮೂಲ ಅಥವಾ ಸ್ಮಶಾನ ಅಥವಾ ರುದ್ರಭೂಮಿಯನ್ನು ಬೇರೆಯವರೊಂದಿಗೆ ಸಮಾನವಾಗಿ ಬಳಸುವುದನ್ನು ಅಥವಾ ಯಾವುದೇ ನದಿ, ನಲ್ಲಿ ನೀರು ಅಥವಾ ಯಾವುದೇ ನೀರಿನ ಸ್ಥಳ, ಅಥವಾ ಯಾವುದೇ ಸ್ನಾನದ ಸ್ಥಳದ, ಸಾರ್ವಜನಿಕ ಸಾರಿಗೆ, ಯಾವುದೇ ರಸ್ತೆ ಅಥವಾ ಕಾಲುದಾರಿಯನ್ನು ಬಳಸುವುದನ್ನು ನಿರ್ಬಂಧಿಸುವುದು ಅಥವಾ ತಡೆಯುವುದು. |



[redacted]

| | |
|---|---|
| | ಎಸ್.3(1) (ಜಡ್ಎ) (ಎ) ಎಸ್.ಸಿ. ಅಥವಾ ಎಸ್.ಟಿ. ಸಮುದಾಯದ ಯಾವುದೇ ಸದಸ್ಯರು ಯಾವುದೇ ಶೈಕ್ಷಣಿಕ ಸಂಸ್ಥೆ, ಆಸ್ಪತ್ರೆ, ಔಷಧಾಲಯ, ಆರೋಗ್ಯ ಕೇಂದ್ರ, ಅಂಗಡಿ ಅಥವಾ ಸಾರ್ವಜನಿಕ ಮನೋರಂಜನೆಯ ಸ್ಥಳ ಅಥವಾ ಯಾವುದೇ ಸಾರ್ವಜನಿಕ ಸ್ಥಳವನ್ನು ಪ್ರವೇಶಿಸುವುದನ್ನು ನಿರ್ಬಂಧಿಸುವುದು ಅಥವಾ ತಡೆಯುವುದು. |
| ಎಸ್.340 ಅನ್ಯಾಯವಾಗಿ ಬಂಧಿಸಿಡುವುದು<br>ವ್ಯಾಖ್ಯಾನ: ವ್ಯಕ್ತಿಯೊಬ್ಬರನ್ನು ಕಾನೂನುಬಾಹಿರವಾಗಿ ಬಂಧಿಸಿಟ್ಟುಕೊಂಡು, ಅವರು ಹೊರಗೆ ಹೋಗುವುದನ್ನು ನಿರ್ಬಂಧಿಸುವುದು. | |
| ಎಸ್.350 ಕ್ರಿಮಿನಲ್ ಬಲಪ್ರಯೋಗ<br>ವ್ಯಾಖ್ಯಾನ: ಯಾವುದೇ ವ್ಯಕ್ತಿಯ ವಿರುದ್ಧ ಅವರ ಒಪ್ಪಿಗೆಯಿಲ್ಲದೇ ಉದ್ದೇಶಪೂರ್ವಕವಾಗಿ ಅಪರಾಧವೊಂದನ್ನು ಎಸಗುವ ಉದ್ದೇಶದಿಂದ ಅಥವಾ ಬಲಪ್ರಯೋಗದ ಬಳಕೆಯ ಉದ್ದೇಶದಿಂದ ಅಥವಾ ಅಂತಹ ಬಲಪ್ರಯೋಗದ ಬಳಕೆಯಿಂದ ಗಾಯ, ಹಾನಿ, ಭಯ ಅಥವಾ ಕಿರಿಕಿರಿ ಉಂಟುಮಾಡುವುದು. | ಎಸ್.3(1)(ಇ) ಎಸ್.ಸಿ. ಅಥವಾ ಎಸ್.ಟಿ. ಸಮುದಾಯದ ಯಾವುದೇ ಸದಸ್ಯರ ಮೇಲೆ ಮಾನವ ಘನತೆಯನ್ನು ಕುಂದಿಸುವ, ಅಂದರೆ ಬಟ್ಟೆ ತೆಗೆಯುವುದು, ಬಲವಂತವಾಗಿ ಕೂದಲು ಕತ್ತರಿಸುವುದು ಅಥವಾ ಬೋಳು ಮಾಡಿಸುವುದು, ಮುಖ ಅಥವಾ ದೇಹಕ್ಕೆ ಬಣ್ಣ ಹಚ್ಚುವುದು ಅಥವಾ ಇನ್ನಾವುದೇ ಅಂತಹ ಕೃತ್ಯಗಳನ್ನು ಬಲವಂತವಾಗಿ ಎಸಗುವುದು |
| ಎಸ್.351 ಹಲ್ಲೆ<br>ವ್ಯಾಖ್ಯಾನ: ವ್ಯಕ್ತಿಗೆ ತನ್ನ ವಿರುದ್ಧ ಕ್ರಿಮಿನಲ್ ಬಲಪ್ರಯೋಗ ಮಾಡಲಾಗುತ್ತಿದೆ ಎಂದು ಅನ್ನಿಸುವಂತೆ ಮಾಡುವ ಉದ್ದೇಶದ ಯಾವುದೇ ದೇಹಭಂಗಿ ಅಥವಾ ಕ್ರಿಯೆ. | |
| ಎಸ್.354 ಮಹಿಳೆಯ ಮರ್ಯಾದೆಯನ್ನು ಕಳೆಯುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಅಥವಾ ಕ್ರಿಮಿನಲ್ ಬಲಪ್ರಯೋಗ ಮಾಡುವುದು<br>ವ್ಯಾಖ್ಯಾನ: ಮಹಿಳೆಯ ಮರ್ಯಾದೆಯನ್ನು ಕಳೆಯುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಅಥವಾ ಬಲಪ್ರಯೋಗದ ಬಳಕೆ ಮಾಡುವುದು. | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| ಎಸ್.354ಎ ಲೈಂಗಿಕ ಕಿರುಕುಳ<br>ವ್ಯಾಖ್ಯಾನ: ವ್ಯಕ್ತಿಯೊಬ್ಬ ಮಾಡುವ ಈ ಕೆಳಗಿನ ಯಾವುದೇ ಕ್ರಿಯೆಗಳು –<br>1. ಅನಪೇಕ್ಷಿತ ಮತ್ತು ಎದ್ದುಕಾಣುವ ಲೈಂಗಿಕ ಪ್ರಸ್ತಾಪಗಳನ್ನು ಒಳಗೊಂಡಂತೆ ದೈಹಿಕ ಸಂಪರ್ಕ ಹಾಗೂ ಮುಂದುವರೆಯುವಿಕೆ;<br>2. ಲೈಂಗಿಕ ಅನುಕೂಲಗಳಿಗಾಗಿ ಬೇಡಿಕೆ ಅಥವಾ ಕೋರಿಕೆ ಇಡುವುದು<br>3. ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಅಶ್ಲೀಲಚಿತ್ರಗಳನ್ನು ತೋರಿಸುವುದು<br>4. ಲೈಂಗಿಕ ಭಂಗಿಯನ್ನು ತೋರುವ ಸಂಕೇತಗಳನ್ನು ಮಾಡುವುದು, ಲೈಂಗಿಕ ಕಿರುಕುಳ ಅಪರಾಧದ ತಪ್ಪಿತಸ್ಥರಾಗುತ್ತಾರೆ. | ಎಸ್.3(2) (vಎ) ಶೆಡ್ಯೂಲ್ ಅಪರಾಧ<br>ಎಸ್.3(1)(ಎ) ಎಸ್‌ಸಿ ಅಥವಾ ಎಸ್‌ಟಿ ವ್ಯಕ್ತಿಗೆ ಚಪ್ಪಲಿ ಹಾರ ಹಾಕುವುದು ಅಥವಾ ಬೆತ್ತಲೆ ಅಥವಾ ಅರೆಬೆತ್ತಲೆ ಮೆರವಣಿಗೆ ಮಾಡುವುದು<br>ಎಸ್.3(1)(ಇ) ಎಸ್.ಸಿ. ಅಥವಾ ಎಸ್.ಟಿ. ಸಮುದಾಯದ ಯಾವುದೇ ಸದಸ್ಯರ ಮೇಲೆ ಮಾನವ ಘನತೆಯನ್ನು ಕುಂದಿಸುವ, ಅಂದರೆ ಬಟ್ಟೆ ತೆಗೆಯುವುದು, ಬಲವಂತವಾಗಿ ಕೂದಲು ಕತ್ತರಿಸುವುದು ಅಥವಾ ಬೋಳು ಮಾಡಿಸುವುದು, ಮುಖ ಅಥವಾ ದೇಹಕ್ಕೆ ಬಣ್ಣ ಹಚ್ಚುವುದು ಅಥವಾ ಇನ್ನಾವುದೇ ಅಂತಹ ಕೃತ್ಯಗಳನ್ನು ಬಲವಂತವಾಗಿ ಎಸಗುವುದು<br>ಎಸ್.3 (1)(ಡಬ್ಲ್ಯು)(i) ಪ.ಜಾ. ಮತ್ತು ಪ.ಪಂ.ದ ಮಹಿಳೆಯು ಪ.ಜಾ. ಮತ್ತು ಪ.ಪಂ.ಕ್ಕೆ ಸೇರಿದವರು ಎಂದು ತಿಳಿದೂ ಉದ್ದೇಶಪೂರಿತವಾಗಿ ಒಪ್ಪಿಗೆಯಿಲ್ಲದೇ ಮಾಡುವ ಲೈಂಗಿಕ ಲಕ್ಷಣದ ಸ್ಪರ್ಶ |

| | |
|---|---|
| ವ್ಯಾಖ್ಯಾನ: (i) ಮಹಿಳೆಯನ್ನು ಆಕೆಯ ಇಚ್ಛೆಯ ವಿರುದ್ಧ ಮದುವೆಯಾಗಲು ಅಥವಾ ಕಾನೂನುಬಾಹಿರ ಲೈಂಗಿಕ ಸಂಭೋಗಕ್ಕಾಗಿ ಬಲವಂತ ಮಾಡಿ ಅಥವಾ ಹಾಗೆ ಮಾಡೆಂದು ಪ್ರಲೋಭನವೊಡ್ಡುವ ಉದ್ದೇಶದಿಂದ ಆಕೆಯನ್ನು ಅಪಹರಿಸುವುದು ಅಥವಾ ಹೊತ್ತೊಯ್ಯುವುದು; ಮತ್ತು (ii) ಆಕೆಗೆ ತಾನು ಕಾನೂನುಬಾಹಿರ ಲೈಂಗಿಕ ಸಂಭೋಗ ಹೊಂದಲು ಬಲವಂತ ಅಥವಾ ಪ್ರಲೋಭನೆಗೊಳಗಾಗುತ್ತೇನೆ ಎಂದು ಅನ್ನಿಸುವ ರೀತಿಯಲ್ಲಿ ಆಕೆಯ ಮೇಲೆ ಕ್ರಿಮಿನಲ್ ಬೆದರಿಕೆಯಿಂದ ಅಥವಾ ಅಧಿಕಾರ ದುರುಪಯೋಗದಿಂದ ಅಥವಾ ಇನ್ನಾವುದೇ ನಿರ್ಬಂಧಿಸುವ ರೀತಿಯಿಂದ ಬಲವಂತ ಮಾಡುವುದು | |
| **ಎಸ್. ಎಸ್. 375 ಅತ್ಯಾಚಾರ + ಅತ್ಯಾಚಾರಕ್ಕೆ ಶಿಕ್ಷೆ**<br><br>*ವ್ಯಾಖ್ಯಾನ ಮತ್ತು ಕಾರ್ಯವಿಧಾನದ ಕುರಿತ ಪ್ರತ್ಯೇಕ ಟಿಪ್ಪಣಿಯನ್ನು ನೋಡಿ* | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್. 376ಎ ಸಾವು ಅಥವಾ ಜೀವಚ್ಛವ ಸ್ಥಿತಿಯನ್ನು ಉಂಟುಮಾಡುವ ಅತ್ಯಾಚಾರ** | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್. 376ಬಿ ಪ್ರತ್ಯೇಕಗೊಳ್ಳುವ ಸಮಯದಲ್ಲಿ ಗಂಡನಿಂದ ಹೆಂಡತಿಯ ಮೇಲೆ ಅತ್ಯಾಚಾರ** | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್. 376ಸಿ ಅಧಿಕಾರದಲ್ಲಿರುವ ವ್ಯಕ್ತಿಯಿಂದ ಅತ್ಯಾಚಾರ** | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್. 376ಡಿ ಗುಂಪು ಅತ್ಯಾಚಾರ/ಗ್ಯಾಂಗ್ ರೇಪ್**<br>ವ್ಯಾಖ್ಯಾನ: ಮಹಿಳೆಯನ್ನು ಗುಂಪಿನಲ್ಲಿರುವ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಅಥವಾ ಒಂದೇ ಸಾಮಾನ್ಯ ಉದ್ದೇಶವಿಟ್ಟುಕೊಂಡ ವ್ಯಕ್ತಿಗಳು ಅತ್ಯಾಚಾರ ಮಾಡಿದಲ್ಲಿ, ಆ ಪ್ರತಿಯೊಬ್ಬ ವ್ಯಕ್ತಿಯೂ ಅತ್ಯಾಚಾರದ ಅಪರಾಧ ಎಸಗಿದ್ದಾರೆ ಎಂದು ಪರಿಗಣಿತವಾಗುತ್ತದೆ. | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್. 376ಡಿ ಗುಂಪು ಅತ್ಯಾಚಾರ/ಗ್ಯಾಂಗ್ ರೇಪ್**<br>ವ್ಯಾಖ್ಯಾನ: ಮಹಿಳೆಯನ್ನು ಗುಂಪಿನಲ್ಲಿರುವ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಅಥವಾ ಒಂದೇ ಸಾಮಾನ್ಯ ಉದ್ದೇಶವಿಟ್ಟುಕೊಂಡ ವ್ಯಕ್ತಿಗಳು ಅತ್ಯಾಚಾರ ಮಾಡಿದಲ್ಲಿ, ಆ ಪ್ರತಿಯೊಬ್ಬ ವ್ಯಕ್ತಿಯೂ ಅತ್ಯಾಚಾರದ ಅಪರಾಧ ಎಸಗಿದ್ದಾರೆ ಎಂದು ಪರಿಗಣಿತವಾಗುತ್ತದೆ. | ಎಸ್.3(2) (vಎ) ಶೆಡ್ಯೂಲ್ ಅಪರಾಧ |
| **ಎಸ್. 377 ಅಸ್ವಾಭಾವಿಕ ಅಪರಾಧಗಳು**<br>ವ್ಯಾಖ್ಯಾನ: ಯಾವುದೇ ಪುರುಷ, ಮಹಿಳೆ ಅಥವಾ ಪ್ರಾಣಿಯ ಮೇಲೆ ನಿಸರ್ಗದ ನಿಯಮಗಳಿಗೆ ವಿರುದ್ಧವಾಗಿ ನಡೆಸುವ ಕಾಮುಕ ಲೈಂಗಿಕಕ್ರಿಯೆ. | ಎಸ್.3(2) (vಎ) ಶೆಡ್ಯೂಲ್ ಅಪರಾಧ |



[redacted]

| | |
|---|---|
| ಎಸ್. 509 ಮಹಿಳೆಯ ಘನತೆಗೆ ಅವಮಾನವುಂಟು ಮಾಡುವ ಉದ್ದೇಶದ ಮಾತು, ದೇಹಭಂಗಿ ಅಥವಾ ಕ್ರಿಯೆ | ಎಸ್.3(2) (vಎ) ಶೆಡ್ಯೂಲ್ ಅಪರಾಧ<br><br>ಎಸ್.3(1)(ಇ) ಎಸ್.ಸಿ. ಅಥವಾ ಎಸ್.ಟಿ. ಸಮುದಾಯದ ಯಾವುದೇ ಸದಸ್ಯರ ಮೇಲೆ ಮಾನವ ಘನತೆಯನ್ನು ಕುಂದಿಸುವ, ಅಂದರೆ ಬಟ್ಟೆ ತೆಗೆಯುವುದು, ಬಲವಂತವಾಗಿ ಕೂದಲು ಕತ್ತರಿಸುವುದು ಅಥವಾ ಬೋಳು ಮಾಡಿಸುವುದು, ಮುಖ ಅಥವಾ ದೇಹಕ್ಕೆ ಬಣ್ಣ ಹಚ್ಚುವುದು ಅಥವಾ ಇನ್ನಾವುದೇ ಅಂತಹ ಕೃತ್ಯಗಳನ್ನು ಬಲವಂತವಾಗಿ ಎಸಗುವುದು<br><br>ಎಸ್.3(1)(ಡಿ) ಎಸ್‌ಸಿ ಅಥವಾ ಎಸ್‌ಟಿ ವ್ಯಕ್ತಿಗೆ ಚಪ್ಪಲಿ ಹಾರ ಹಾಕುವುದು ಅಥವಾ ಬೆತ್ತಲೆ ಅಥವಾ ಅರೆಬೆತ್ತಲೆ ಮೆರವಣಿಗೆ ಮಾಡುವುದು.<br><br>ಎಸ್.3 (1)(ಆರ್) ಪ.ಜಾ. ಮತ್ತು ಪ.ಪಂ.ದ ಸದಸ್ಯರನ್ನು ಸಾರ್ವಜನಿಕರ ಎದುರಿನಲ್ಲಿ ತೋಜೋವಧೆ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಉದ್ದೇಶಪೂರಿತವಾಗಿ ಅವಮಾನಿಸುವುದು ಅಥವಾ ಬೆದರಿಸುವುದು<br><br>ಎಸ್.3 (1)(ಎಸ್) ಪ.ಜಾ. ಮತ್ತು ಪ.ಪಂ.ದ ಸದಸ್ಯರನ್ನು ಸಾರ್ವಜನಿಕರ ಎದುರಿನಲ್ಲಿ ಜಾತಿಯ ಹೆಸರಿನಿಂದ ಯಾವುದೇ ಸ್ಥಳದಲ್ಲಿ ನಿಂದಿಸುವುದು |
| ಎಸ್.153(1) ಧರ್ಮ, ಜನಾಂಗ, ಹುಟ್ಟಿದ ಸ್ಥಳ, ವಾಸಸ್ಥಳ, ಭಾಷೆ ಇತ್ಯಾದಿಗಳ ಆಧಾರದಲ್ಲಿ ಗುಂಪುಗಳ ನಡುವೆ ದ್ವೇಷ ಉತ್ತೇಜಿಸುವುದು ಮತ್ತು ಸಾಮರಸ್ಯಕ್ಕೆ ಧಕ್ಕೆ ಬರುವಂತಹ ಕೃತ್ಯಗಳನ್ನು ಮಾಡುವುದು | ಎಸ್.3 (1)(ಯು) ಪ.ಜಾ. ಮತ್ತು ಪ.ಪಂ.ದ ಸದಸ್ಯರ ವಿರುದ್ಧ ದ್ವೇಷದ ಅಥವಾ ದುರುದ್ದೇಶದ ಭಾವನೆಗಳನ್ನು ಉತ್ತೇಜಿಸಲು ಲಿಖಿತ ಅಥವಾ ಮಾತುಗಳು ಅಥವಾ ಚಿಹ್ನೆಗಳನ್ನು ಬಳಸುವುದು |
| | ಎಸ್.3 (1)(ಝಡ್ ಬಿ) ಪ.ಜಾ. ಮತ್ತು ಪ.ಪಂ.ದ ಸದಸ್ಯರೊಬ್ಬರು ಮಾಟಮಂತ್ರ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಅವರಿಗೆ ದೈಹಿಕ ಹಾನಿ ಮಾಡುವುದು ಅಥವಾ ಮಾನಸಿಕ ಕ್ಷೋಭೆ ಉಂಟು ಮಾಡುವುದು: |
| ಎಸ್.374 ಕಾನೂನುಬಾಹಿರ ಕಡ್ಡಾಯ ಜೀತ | ಎಸ್.3(1)(ಎಚ್) ಪ.ಜಾ. ಮತ್ತು ಪ.ಪಂ.ದ ವ್ಯಕ್ತಿಯೊಬ್ಬರನ್ನು ಕಡ್ಡಾಯ, ಬಲವಂತದ ಅಥವಾ ಜೀತದ ಆಳಾಗಿ ಮಾಡುವುದು |
| ಎಸ್.367 ವ್ಯಕ್ತಿಗೆ ತೀವ್ರ ಗಾಯ, ಜೀತದಾಳು ಇತ್ಯಾದಿಗಳಿಗೆ ಒಳಪಡಿಸುವ ಸಲುವಾಗಿ ಅಪಹರಿಸುವುದು ಅಥವಾ ಹೊತ್ತುಕೊಂಡು ಹೋಗುವುದು<br>ವ್ಯಕ್ತಿಯನ್ನು ತೀವ್ರ ಗಾಯ, ಜೀತದಾಳು ಅಥವಾ ಯಾವುದೇ ವ್ಯಕ್ತಿಯ ಅಸ್ವಾಭಾವಿಕ ಕಾಮುಕತೆಗೆ ಒಳಪಡಿಸುವ ಅಥವಾ ಒಳಪಡಿಸುವ ಅಪಾಯದಲ್ಲಿರಿಸಲು ವ್ಯಕ್ತಿಯನ್ನು ಅಪಹರಿಸುವುದು ಅಥವಾ ಹೊತ್ತುಕೊಂಡು ಹೋಗುವುದು | ಎಸ್.3(1)(ಕೆ) ಪ.ಜಾ. ಮತ್ತು ಪ.ಪಂ.ದ ಮಹಿಳೆಯರನ್ನು ದೇವರಿಗೆ, ಪೂಜಾ ಮೂರ್ತಿಗೆ, ದೇವಸ್ಥಾನಕ್ಕೆ ಅಥವಾ ಯಾವುದೇ ಧಾರ್ಮಿಕ ಸಂಸ್ಥೆಗೆ ದೇವದಾಸಿಯಾಗಿ ಅಥವಾ ಇನ್ನಾವುದೇ ಅದೇ ರೀತಿಯ ಪದ್ಧತಿಗಳನ್ನು ನಡೆಸುವುದು, ಉತ್ತೇಜಿಸುವುದು ಅಥವಾ ಅದಕ್ಕೆ ಆಸ್ಪದ ಕೊಡುವುದು |



[redacted]

| | |
|---|---|
| | ಎಸ್.3(1) (ಝಡ್ ಸಿ) ಪ.ಜಾ. ಮತ್ತು ಪ.ಪಂ.ದ ವ್ಯಕ್ತಿ ಅಥವಾ ಕುಟುಂಬ ಅಥವಾ ಗುಂಪಿಗೆ ಸಾಮಾಜಿಕ ಅಥವಾ ಆರ್ಥಿಕ ಬಹಿಷ್ಕಾರವನ್ನು ಹೇರುವುದು ಅಥವಾ ಹೇರುವುದಾಗಿ ಬೆದರಿಸುವುದು<br>ವ್ಯಾಖ್ಯಾನ: ಆರ್ಥಿಕ ಬಹಿಷ್ಕಾರ ಎಂದರೆ:<br>(i) ಆ ವ್ಯಕ್ತಿಯೊಂದಿಗೆ ಕೆಲಸ ಮಾಡಲು, ವ್ಯವಹರಿಸಲು ಅಥವಾ ವ್ಯಾಪಾರ ಮಾಡಲು ನಿರಾಕರಿಸುವುದು;<br>(ii) ಸೇವೆಗಳನ್ನು ಪಡೆಯಲು ಅಥವಾ ಸೇವೆಗಳನ್ನು ಒದಗಿಸುವ ಗುತ್ತಿಗೆ ಅವಕಾಶಗಳನ್ನು ಪಡೆದುಕೊಳ್ಳುವುದೂ ಸೇರಿದಂತೆ ಹಲವು ಬಗೆಯ ಅವಕಾಶಗಳನ್ನು ನಿರಾಕರಿಸುವುದು;<br>(iii) ಸಾಮಾನ್ಯ ವ್ಯಾಪಾರ ವಹಿವಾಟಿನಲ್ಲಿ ಸಹಜವಾಗಿ ಮಾಡುವ ಯಾವುದೇ ಬಗೆಯ ಕೆಲಸವನ್ನಾದರೂ ಮಾಡಲು ನಿರಾಕರಿಸುವುದು<br>(iv) ವೃತ್ತಿಪರ ಅಥವಾ ವ್ಯಾಪಾರದ ಸಂಬಂಧಗಳಿಂದ ದೂರವಿರಿಸುವುದು<br>ವ್ಯಾಖ್ಯಾನ: ಸಾಮಾಜಿಕ ಬಹಿಷ್ಕಾರ ಎಂದರೆ ವ್ಯಕ್ತಿಗೆ ವಾಡಿಕೆಯ ಯಾವುದೇ ಸೇವೆಗಳನ್ನು ಪಡೆಯಲು ಅಥವಾ ಒದಗಿಸಲು ಒಪ್ಪಿಗೆಯನ್ನು ನಿರಾಕರಿಸುವುದು ಅಥವಾ ಸಹಜ ಸಾಮಾಜಿಕ ಸಂಬಂಧಗಳಿಂದ ನಿರ್ಬಂಧಿಸುವುದು ಅಥವಾ ಬೇರೆಯವರಿಂದ ವ್ಯಕ್ತಿಯನ್ನು ದೂರವಿರಿಸುವುದು |
| ಎಸ್. 211 ಹಾನಿ/ಗಾಯಗೊಳಿಸುವ ಉದ್ದೇಶದಿಂದ ಅಪರಾಧದ ಸುಳ್ಳು ಮೊಕದ್ದಮೆ ಹೂಡುವುದು: ವ್ಯಕ್ತಿಯೊಬ್ಬರ ಮೇಲೆ ಅಂತಹ ಆಪಾದನೆಗೆ ಯಾವುದೇ ಕಾನೂನುಬದ್ಧ ಆಧಾರವಿಲ್ಲ ಎಂದು ತಿಳಿದೂ, ವ್ಯಕ್ತಿಗೆ ಹಾನಿ/ಗಾಯಗೊಳಿಸುವ ಉದ್ದೇಶದಿಂದ ಅಪರಾಧದ ಯಾವುದೇ ಕ್ರಿಮಿನಲ್ ಪ್ರೊಸೀಡಿಂಗ್ಸ್ ಜರುಗಿಸುವುದು ಅಥವಾ ಸುಳ್ಳು ಮೊಕದ್ದಮೆ ಹೂಡುವುದು | ಎಸ್.3 (1)(ಪಿ) ಪ.ಜಾ. ಮತ್ತು ಪ.ಪಂ.ದ ಸದಸ್ಯರ ವಿರುದ್ಧ ಸುಳ್ಳು, ದ್ವೇಷಭರಿತ ಅಥವಾ ಕೆರಳಿಸುವ ಹೇಳಿಕೆಗಳು, ಕ್ರಿಮಿನಲ್ ಅಥವಾ ಬೇರೆ ಕಾನೂನು ಕ್ರಮಗಳನ್ನು ಹೂಡುವುದು: |
| ಎಸ್. 192 ಸುಳ್ಳು ಸಾಕ್ಷ್ಯವನ್ನು ಹುಟ್ಟುಹಾಕಿ ಹೇಳುವುದು: ಯಾವುದೇ ರೀತಿಯ ಸುಳ್ಳು ನೋಂದಣಿ ಅಥವಾ ಸುಳ್ಳು ಹೇಳಿಕೆಗಳನ್ನು ಹುಟ್ಟುಹಾಕಿ, ಕತೆಕಟ್ಟುವುದು, ಅಂತಹ ಸುಳ್ಳು ಮಾಹಿತಿಯನ್ನು ನ್ಯಾಯಾಂಗ ವಿಚಾರಣೆಗಳಿಗೆ ಅಥವಾ ಸಾರ್ವಜನಿಕ ಅಧಿಕಾರಿಯ ಎದುರು ವಿಚಾರಣೆಗಳಿಗೆ ಬಳಸಿಕೊಳ್ಳುವ ಉದ್ದೇಶದಿಂದ ಹುಟ್ಟುಹಾಕುವುದು | ಎಸ್.3(1)(ಕ್ಯು) ಪ.ಜಾ. ಮತ್ತು ಪ.ಪಂ.ದ ಸದಸ್ಯರಿಗೆ ಹಾನಿಯುಂಟು ಮಾಡಲು ಸುಳ್ಳು ಅಥವಾ ತುಚ್ಛ ಮಾಹಿತಿಯನ್ನು ತಮ್ಮ ಕಾನೂನುಬದ್ಧ ಅಧಿಕಾರವನ್ನು ಬಳಸುವ ಯಾರಾದರೂ ಸಾರ್ವಜನಿಕ ಅಧಿಕಾರಿಗೆ (ಉದಾ: ಪೊಲೀಸ್ ಅಧಿಕಾರಿ) ಕೊಡುವುದು |
| ಎಸ್.191 ಸುಳ್ಳು ಸಾಕ್ಷ್ಯವನ್ನು ಕೊಡುವುದು<br><br>ಎಸ್.191 ಸುಳ್ಳು ಸಾಕ್ಷ್ಯವನ್ನು ಹುಟ್ಟುಹಾಕುವುದು | ಎಸ್.3(2) ಆಪಾದಿತರನ್ನು ಶಿಕ್ಷೆಯಿಂದ ರಕ್ಷಿಸಲು ಅಥವಾ ಅಪರಾಧದ ಕುರಿತು ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಕೊಡುವ ಸಲುವಾಗಿ ಪಿಒಎಗೆ ಸಂಬಂಧಿಸಿದ ಸಾಕ್ಷ್ಯವನ್ನು ನಾಶಪಡಿಸುವುದು ಅಥವಾ ಅಳಿಸಿಹಾಕುವುದು |



[redacted]

| | |
|---|---|
| | ಎಸ್.3(2)(v) ಅಪರಾಧ + ಶಿಕ್ಷೆ<br>ವ್ಯಕ್ತಿಯೊಬ್ಬ ಎಸ್.ಸಿ ಅಥವಾ ಎಸ್.ಟಿ. ಸಮುದಾಯಕ್ಕೆ ಸೇರಿದವರು ಅಥವಾ ಅಂತಹ ಆಸ್ತಿಯು ಎಸ್.ಸಿ ಅಥವಾ ಎಸ್.ಟಿ. ಸಮುದಾಯದ ಸದಸ್ಯರಿಗೆ ಸೇರಿದ್ದು ಎಂದು ತಿಳಿದೂ, ಅಂತಹ ವ್ಯಕ್ತಿ ಅಥವಾ ಆಸ್ತಿಯ ವಿರುದ್ಧ, ಐಪಿಸಿ ಅಡಿಯಲ್ಲಿ 10+ ವರ್ಷಗಳ ಜೈಲು ಶಿಕ್ಷೆಯಿರುವಂತಹ ಯಾವುದೇ ಅಪರಾಧ ಎಸಗುವ ವ್ಯಕ್ತಿಗೆ, ಜೀವಮಾನ ಜೈಲು ಮತ್ತು ದಂಡವನ್ನು ವಿಧಿಸಿ ಶಿಕ್ಷಿಸಬಹುದು. |
| | ಎಸ್.3(2)(vಎ) ಪಿಓಎ ತಿದ್ದುಪಡಿ ಕಾಯಿದೆ 2015 (ಈ ಕೆಳಗೆ ಇರುವಂತೆ)ಗೆ ಶೆಡ್ಯೂಲ್‌ನಲ್ಲಿರುವ ಅಪರಾಧಗಳನ್ನು ಪ.ಜಾ. ಮತ್ತು ಪ.ಪಂ.ದ ವ್ಯಕ್ತಿ ಅಥವಾ ಆಸ್ತಿಯ ವಿರುದ್ಧ ಅವರು ಅಥವಾ ಆ ಆಸ್ತಿಯು ಪ.ಜಾ. ಮತ್ತು ಪ.ಪಂ.ಕ್ಕೆ ಸೇರಿದ್ದು ಎಂದು ತಿಳಿದೂ ಎಸಗಿದರೆ, ಅವರು ಐಪಿಸಿಯಲ್ಲಿ ನಿರ್ದಿಷ್ಟ ಪಡಿಸಿದಂತೆ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುವುದು.<br>ಶೆಡ್ಯೂಲ್ ಅಪರಾಧಗಳು – ವಿಎಡಬ್ಲ್ಯುಜಿ:<br>• ಐಪಿಸಿ ಎಸ್.319 ಗಾಯ<br>• ಐಪಿಸಿ ಎಸ್.320 ಘೋರವಾದ ಗಾಯ<br>• ಐಪಿಸಿ ಎಸ್.324 ಉದ್ದೇಶಪೂರ್ವಕವಾಗಿ ಅಪಾಯಕಾರಿ ಶಸ್ತ್ರಗಳು ಅಥವಾ ಬೇರೆ ವಿಧದಿಂದ ಗಾಯವುಂಟು ಮಾಡುವುದು<br>• ಐಪಿಸಿ ಎಸ್.326 ಉದ್ದೇಶಪೂರ್ವಕವಾಗಿ ಆಸಿಡ್ ಎರಚುವುದು ಅಥವಾ ಎರಚಲು ಪ್ರಯತ್ನಿಸುವುದು<br>• ಐಪಿಸಿ ಎಸ್.341 ಅನ್ಯಾಯದಿಂದ ಬಂಧಿಸಿಡುವುದು<br>• ಐಪಿಸಿ ಎಸ್.354 ಮಹಿಳೆಯ ತೋಜೋವಧೆ ಮಾಡುವ ಉದ್ದೇಶದಿಂದ ಹಲ್ಲೆ ಅಥವಾ ಕ್ರಿಮಿನಲ್ ಬಲಪ್ರಯೋಗ ಮಾಡುವುದು<br>• ಐಪಿಸಿ ಎಸ್. 354ಎ ಲೈಂಗಿಕ ಕಿರುಕುಳ,<br>• ಐಪಿಸಿ ಎಸ್.354ಬಿ ಮಹಿಳೆಯ ಬಟ್ಟೆ ಕಳಚುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಅಥವಾ ಕ್ರಿಮಿನಲ್ ಬಲಪ್ರಯೋಗ<br>• ಐಪಿಸಿ ಎಸ್.354ಸಿ ಲೈಂಗಿಕದರ್ಶನ ತೃಪ್ತಿ<br>• ಐಪಿಸಿ ಎಸ್.354ಡಿ ಬೆನ್ನಟ್ಟುವುದು<br>• ಐಪಿಸಿ ಎಸ್.359 ಅಪಹರಣ<br>• ಐಪಿಸಿ ಎಸ್.365 ಗೌಪ್ಯವಾಗಿ ಮತ್ತು ಅನ್ಯಾಯಯುತವಾಗಿ ಬಂಧನದಲ್ಲಿಡುವ ಉದ್ದೇಶದಿಂದ ವ್ಯಕ್ತಿಯನ್ನು ಅಪಹರಿಸುವುದು ಅಥವಾ ಹೊತ್ತೊಯ್ಯುವುದು<br>• ಐಪಿಸಿ ಎಸ್.376ಬಿ ಪ್ರತ್ಯೇಕಗೊಳ್ಳುವ ಸಮಯದಲ್ಲಿ ಗಂಡನಿಂದ ಹೆಂಡತಿಯ ಮೇಲೆ ಅತ್ಯಾಚಾರ<br>• ಐಪಿಸಿ ಎಸ್.376ಸಿ ಅಧಿಕಾರದಲ್ಲಿರುವ ವ್ಯಕ್ತಿಯಿಂದ ಅತ್ಯಾಚಾರ<br>• ಐಪಿಸಿ ಎಸ್. 447 ಕ್ರಿಮಿನಲ್ ಅತಿಕ್ರಮಣ<br>• ಎಸ್ 506 ಕ್ರಿಮಿನಲ್ ಬೆದರಿಕೆ<br>• ಐಪಿಸಿ ಎಸ್.509 ಮಹಿಳೆಯ ಘನತೆಗೆ ಅವಮಾನವುಂಟು ಮಾಡುವ ಉದ್ದೇಶದ ಮಾತು, ದೇಹಭಂಗಿ ಅಥವಾ ಕ್ರಿಯೆ |

# ಭಾರತೀಯ ದಂಡ ಸಂಹಿತೆ: ಲೈಂಗಿಕ ಅಪರಾಧಗಳು

## ಅತ್ಯಾಚಾರ: ವ್ಯಾಖ್ಯಾನಗಳು ಮತ್ತು ಕ್ರಿಮಿನಲ್ ಪ್ರಕ್ರಿಯೆ

### ಎ. ಮಹಿಳೆಯರು ಮತ್ತು ಹುಡುಗಿಯರ ವಿರುದ್ಧ ಹಿಂಸೆಯ ಕುರಿತು ಅಂತಾರಾಷ್ಟ್ರೀಯ ಕಾನೂನು ಬಾಧ್ಯತೆಗಳು

1. ಮಹಿಳೆಯರು ಮತ್ತು ಹುಡುಗಿಯರ ವಿರುದ್ಧದ ಎಲ್ಲ ರೀತಿಯ ಹಿಂಸೆಗಳು ಮಹಿಳೆಯ ವಿರುದ್ಧ ಎಲ್ಲ ರೀತಿಯ ತಾರತಮ್ಯದ ನಿವಾರಣೆ ಕುರಿತ ಯುಎನ್ ಸನ್ನದಿನ (ಸಿಎಡಿಅಡಬ್ಲ್ಯು) ವ್ಯಾಖ್ಯಾನದ ಕೆಳಗೆ ಬರುತ್ತವೆ.[1] ಎಲ್ಲ ರಾಷ್ಟ್ರಗಳು ಮಹಿಳೆಯರು ಮತ್ತು ಹುಡುಗಿಯರ ವಿರುದ್ಧದ ಹಿಂಸೆಯನ್ನು ತಡೆಯುವ, ಅದಕ್ಕೆ ಪ್ರತಿಕ್ರಿಯಿಸುವ, ಅದರ ವಿರುದ್ಧ ರಕ್ಷಣೆ ನೀಡುವ ಮತ್ತು ಅದರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ, ಅಂತಹ ಕೆಲಸಗಳನ್ನು ಸರ್ಕಾರ ಅಥವಾ ಖಾಸಗಿ ವ್ಯಕ್ತಿಗಳು ಯಾರೇ ಮಾಡಿದ್ದರೂ ಕೂಡ, ನಿರ್ದಿಷ್ಟ ಕಾರ್ಯತತ್ಪರತೆ ಬಾಧ್ಯತೆಗಳನ್ನು ಹೊಂದಿವೆ. ಭಾರತವು ಸಿಇಡಿಎಡಬ್ಲ್ಯುವನ್ನು(CEDAW) 1993ರ ಜುಲೈ 9ರಂದು ಅನುಮೋದಿಸಿದೆ. ಹೀಗಾಗಿ ಮಹಿಳೆಯರು ಮತ್ತು ಹುಡುಗಿಯರ ವಿರುದ್ಧದ ಹಿಂಸೆಯನ್ನು ತಡೆಯುವ, ಅದರ ವಿರುದ್ಧ ರಕ್ಷಣೆ ನೀಡುವ, ಅದನ್ನು ತನಿಖೆ ಮಾಡುವ, ಶಿಕ್ಷೆ ನೀಡುವ ಹಾಗೂ ಪರಿಹಾರದ ಕ್ರಮಗಳನ್ನು ತೆಗೆದುಕೊಳ್ಳುವ ದಿಕ್ಕಿನಲ್ಲಿ ಈ ನಿರ್ದಿಷ್ಟ ಕಾರ್ಯತತ್ಪರತೆ ಬಾಧ್ಯತೆಗಳನ್ನು ಈಡೇರಿಸಬೇಕು.

### ಬಿ. ಭಾರತೀಯ ದಂಡ ಸಂಹಿತೆ ಅಡಿಯಲ್ಲಿ (ಐಪಿಸಿ) ಅತ್ಯಾಚಾರದ ವ್ಯಾಖ್ಯಾನ

2. ಐಪಿಸಿ ಎಸ್. 75 ಅಡಿಯಲ್ಲಿ, ಪುರುಷನೊಬ್ಬ ಈ ಕೆಳಗಿನದನ್ನು ಮಾಡಿದಾಗ ಅದು ಅತ್ಯಾಚಾರವಾಗುತ್ತದೆ –

   (ಎ) ಮಹಿಳೆಯೊಬ್ಬಳ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ, ಯಾವುದೇ ಪ್ರಮಾಣದಲ್ಲಿ ತನ್ನ ಶಿಶ್ನವನ್ನು ತೂರಿಸುವುದು ಮತ್ತು ಆಕೆಯು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು; ಅಥವಾ

   (ಬಿ) ಮಹಿಳೆಯೊಬ್ಬಳ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ, ಯಾವುದೇ ಪ್ರಮಾಣದಲ್ಲಿ ಶಿಶ್ನವಲ್ಲದೇ, ಬೇರೆ ಏನಾದರೂ ವಸ್ತುವನ್ನು ಅಥವಾ ದೇಹದ ಒಂದು ಭಾಗವನ್ನು ತೂರಿಸುವುದು ಮತ್ತು ಆಕೆಯು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು; ಅಥವಾ

   (ಸಿ) ಮಹಿಳೆಯ ದೇಹದ ಯಾವುದಾದರೂ ಭಾಗವನ್ನು ಉತ್ತೇಜಿಸಿ, ಮಹಿಳೆಯೊಬ್ಬಳ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ ತೂರುವಂತೆ ಮಾಡುವುದು ಮತ್ತು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು; ಅಥವಾ

   (ಡಿ) ತನ್ನ ಬಾಯಿಯನ್ನು ಮಹಿಳೆಯ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ ತೂರುವಂತೆ ಮಾಡುವುದು ಮತ್ತು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು.

ಈ ಕೆಳಗಿನ ಏಳು ವಿವರಣೆಗಳ ಅಡಿಯಲ್ಲಿ ಬರುವ ಯಾವುದೇ ಸನ್ನಿವೇಶದಲ್ಲಿ, ಅದು ಅತ್ಯಾಚಾರವಾಗುತ್ತದೆ.:

1. ಆಕೆಯ ಇಚ್ಛೆಗೆ ವಿರುದ್ಧವಾಗಿ.
2. ಆಕೆಯ ಒಪ್ಪಿಗೆ ಇಲ್ಲದೆಯೇ.
3. ಆಕೆಯನ್ನು ಅಥವಾ ಆಕೆಗೆ ಕಾಳಜಿ ಇರುವ ವ್ಯಕ್ತಿಯನ್ನು ಸಾವಿನ ಭಯ ಅಥವಾ ಘಾಸಿಯುಂಟು ಮಾಡುವ ಭಯದಲ್ಲಿಟ್ಟು, ಒತ್ತಾಯದಿಂದ ಪಡೆದ ಒಪ್ಪಿಗೆ.
4. ಆಕೆಯ ಒಪ್ಪಿಗೆಯಿಂದ, ಆದರೆ ಆತನಿಗೆ ತಾನು ಆಕೆಯ ಗಂಡನಲ್ಲ ಮತ್ತು ತಾನು ಕಾನೂನುಬದ್ಧವಾಗಿ ಮದುವೆಯಾಗಲಿರುವ ವ್ಯಕ್ತಿ ಈತ ಎಂದು ಆಕೆ ನಂಬಿ ಒಪ್ಪಿಗೆ ನೀಡಿದ್ದಾಳೆ ಎಂದು ಗೊತ್ತಿರುತ್ತದೆ.

---

[1] CEDAW General Recommendation No. 19 (1992), Declaration on the Elimination of Violence Against Women 1993. CEDAW defines discrimination against women as "... any distinction, exclusion or restriction made on the basis of sex which has the effect or purpose of impairing or nullifying the recognition, enjoyment or exercise by women, irrespective of their marital status, on a basis of equality of men and women, of human rights and fundamental freedoms in the political, economic, social, cultural, civil or any other field" (Article 1).



[redacted]

5. ಆಕೆಯ ಒಪ್ಪಿಗೆಯಿಂದ, ಆದರೆ ಅಂತಹ ಒಪ್ಪಿಗೆ ನೀಡುವ ಸಮಯದಲ್ಲಿ ಮನಸ್ಸು ಸ್ವಸ್ಥವಾಗಿಲ್ಲದೇ ಅಥವಾ ಮತ್ತೇರಿದ ಸ್ಥಿತಿ ಅಥವಾ ಡ್ರಗ್ ಅಥವಾ ಇನ್ನಾವುದೇ ವಸ್ತುವನ್ನು ಆತನಿಂದ ಅಥವಾ ಬೇರೆಯವರಿಂದ ನೀಡಿ, ಆಕೆ ತಾನು ನಿಡಲಿರುವ ಒಪ್ಪಿಗೆಯ ಲಕ್ಷಣ ಮತ್ತು ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ಆಕೆ ಅಸಮರ್ಥಳಾದಾಗ.
6. ಆಕೆ 18 ವರ್ಷದ ಕೆಳಗಿದ್ದು, ಒಪ್ಪಿಗೆಯೊಂದಿಗೆ ಅಥವಾ ಒಪ್ಪಿಗೆಯಿಲ್ಲದೆಯೇ.
7. ಆಕೆ ಒಪ್ಪಿಗೆಯನ್ನು ಸಂವಹನ ಮಾಡಲು ಸಾಧ್ಯವಾಗದೇ ಇದ್ದಾಗ.

**ಒಪ್ಪಿಗೆಯ ಅರ್ಥ**

3. ಒಪ್ಪಿಗೆ ಎಂದರೆ ಮಹಿಳೆಯು ತನ್ನ ಮಾತುಗಳು, ದೇಹಭಂಗಿ ಅಥವಾ ಬೇರೆ ಯಾವುದೇ ರೀತಿಯ ಮೌಖಿಕ ಅಥವಾ ಮೌಖಿಕವಲ್ಲದ ಸಂವಹನದ ಮೂಲಕ, ನಿರ್ದಿಷ್ಟ ಲೈಂಗಿಕ ಕ್ರಿಯೆಯಲ್ಲಿ ಭಾಗವಹಿಸುವ ಇಚ್ಛೆಯನ್ನು ವ್ಯಕ್ತಪಡಿಸುವ ನಿಸ್ಸಂದಿಗ್ಧ – ಅಂದರೆ ಒಂದು ಸ್ಪಷ್ಟ ಹಾಗೂ ಗೊಂದಲವಿಲ್ಲದ – ಸ್ವಯಂಪ್ರೇರಿತ ಒಪ್ಪಿಗೆ ನೀಡುವುದು.
4. ಒಪ್ಪಿಗೆಯು ಇಲ್ಲ ಎನ್ನುವುದನ್ನು ಸಾಬೀತುಪಡಿಸಲು ದೈಹಿಕ ಪ್ರತಿರೋಧದ ಅಗತ್ಯ ಇಲ್ಲ: ಒಬ್ಬ ಮಹಿಳೆ ದೈಹಿಕವಾಗಿ ಪ್ರತಿರೋಧ ಮಾಡಿಲ್ಲ ಎನ್ನುವುದು ಲೈಂಗಿಕ ಚಟುವಟಿಕೆಗೆ ಆಕೆ ನೀಡಿದ ಒಪ್ಪಿಗೆ ಎಂದು ಪರಿಗಣಿಸಲು ಏಕೈಕ ಕಾರಣವಾಗಲಾರದು.
5. ಆಪಾದಿತ ಲೈಂಗಿಕ ಸಂಭೋಗ ನಡೆಸಿರುವುದು ಸಾಬೀತಾದರೆ ಮತ್ತು ಮಹಿಳೆ ತಾನು ಒಪ್ಪಿಗೆ ಕೊಟ್ಟಿರಲಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿಕೆ ನೀಡಿದರೆ: ನ್ಯಾಯಾಲಯವು ಆಕೆ ಒಪ್ಪಿಗೆ ಕೊಟ್ಟಿರಲಿಲ್ಲ ಎಂದು ಭಾವಿಸಬೇಕು: ಭಾರತೀಯ ಸಾಕ್ಷ್ಯ ಕಾಯಿದೆ ಎಸ್. 114ಎ.

**ತೂರಿಸುವಿಕೆಯ ಅರ್ಥ:**

6. ಸ್ವಲ್ಪ ಪ್ರಮಾಣದ ತೂರಿಸುವಿಕೆ ಅಥವಾ ತೂರಿಸಲು ನಡೆಸಿದ ಪ್ರಯತ್ನವೂ ಸಾಕು. ಲೈಂಗಿಕ ಅಂಗಗಳಿಗೆ ಗಾಯವನ್ನುಂಟು ಮಾಡದೆಯೇ ಅಥವಾ ವೀರ್ಯದ ಕಲೆ ಉಳಿಸದೆಯೇ ಅತ್ಯಾಚಾರವನ್ನು ಮಾಡಿರಲು ಸಾಧ್ಯವಿದೆ. ಸರ್ವೋಚ್ಚ ನ್ಯಾಯಾಲಯವು ಅತ್ಯಾಚಾರದಲ್ಲಿ ಯೋನಿಪೊರೆ ಹರಿದಿರುವುದು ಅಗತ್ಯ ಎಂದೇನಿಲ್ಲ ಎಂಬ ಅಂಶವನ್ನು ಸ್ಪಷ್ಟವಾಗಿಯೇ ಹೇಳಿದೆ. ಭಾಗಶಃವಾದರೂ ಸರಿ, ತೂರಿಸುವಿಕೆ ನಡೆದಿದೆ ಎಂಬುದು ಸ್ಪಷ್ಟವಾದರೆ, ಯೋನಿಪೊರೆಯು ಹರಿಯದೇ ಇರಬಹುದು.

**ಸಿ. ಅತ್ಯಾಚಾರದ ಪ್ರಕರಣಗಳ ಹೇಳಿಕೆ ನೀಡುವುದು ಮತ್ತು ತನಿಖೆ ಮಾಡುವುದಕ್ಕೆ ಇರುವ ಕ್ರಿಮಿನಲ್ ಕಾರ್ಯವಿಧಾನ**

**ಹಂತ 1: ಸಂತ್ರಸ್ತೆಯು ನೀಡಿದ ಮಾಹಿತಿಯನ್ನು ಪೊಲೀಸರು ದಾಖಲಿಸಿಕೊಳ್ಳ ತಕ್ಕದ್ದು**

7. ಲೈಂಗಿಕ ಅಪರಾಧ (= ಒಂದು ವಿಚಾರಣಾರ್ಹ ಅಪರಾಧ) ನಡೆದಿದೆ ಎಂಬುದಕ್ಕೆ ಸಂಬಂಧಿಸಿ ಪೊಲೀಸರಿಗೆ ಹೇಳಿಕೆ ನೀಡಿದ ಎಲ್ಲ ಮಾಹಿತಿಯನ್ನು, ಪೊಲೀಸ್ ಠಾಣೆಯಲ್ಲಿ ಮೌಖಿಕವಾಗಿ ನೀಡಿದ್ದರೆ, ಪೊಲೀಸ್ ಅಧಿಕಾರಿಯು ಅದನ್ನು ಲಿಖಿತವಾಗಿ ಬರೆಯಲೇ ಬೇಕು, ಅದನ್ನು ಓದಿ ಹೇಳಿಬೇಕು ಮತ್ತು ಮಾಹಿತಿ ನೀಡುತ್ತಿರುವ ವ್ಯಕ್ತಿಯಿಂದ ಸಹಿ ಹಾಕಿಸಿಕೊಳ್ಳಬೇಕು. ಮಾಹಿತಿಯ ಎಲ್ಲ ವಿವರಗಳನ್ನು ಪೊಲೀಸ್ ಠಾಣೆಯ ಕಡತದಲ್ಲಿ ದಾಖಲಿಸಬೇಕು: ಅಪರಾಧ ಪ್ರಕ್ರಿಯೆ ಸಂಹಿತೆ (ಸಿ.ಆರ್.ಪಿ.ಸಿ.)ಎಸ್.154.

**ಹಂತ 2: ಸಂತ್ರಸ್ತೆಯು ನೀಡಿದ ಲೈಂಗಿಕ ಅಪರಾಧದ ಮಾಹಿತಿಯನ್ನು ಮಹಿಳಾ ಪೊಲೀಸ್ ಅಧಿಕಾರಿ ದಾಖಲಿಸಿಕೊಳ್ಳಬೇಕು**

8. ಸಂತ್ರಸ್ತೆಯು ಪೊಲೀಸ್ ಠಾಣೆಗೆ ಲೈಂಗಿಕ ಅಪರಾಧದ ಕುರಿತು (ಅಂದರೆ ಐಪಿಸಿ ಎಸ್‌ಎಸ್. 326ಎ, 326ಃ, 354, 354ಎ, 354ಬಿ, 354ಸಿ, 354ಡಿ, 376, 376ಎ, 376ಬಿ, 376ಸಿ, 376ಡಿ, 376ಇ, 509) ಹೇಳಿಕೆ ನೀಡಲು ಹೋದಾಗ, ಆಕೆಯು ನೀಡಿದ ಮಾಹಿತಿಯನ್ನು ಮಹಿಳಾ ಪೊಲೀಸ್ ಅಧಿಕಾರಿಯು ದಾಖಲೆ ಮಾಡಿಕೊಳ್ಳತಕ್ಕದ್ದು ಮತ್ತು ಸಂತ್ರಸ್ತೆಗೆ ಕಾನೂನು ಸಹಾಯವನ್ನು ಮತ್ತು ಆರೋಗ್ಯ ಕಾರ್ಯಕರ್ತೆಯ ಮತ್ತು/ಅಥವಾ ಮಹಿಳಾ ಸಂಸ್ಥೆಯ ಸಹಾಯವನ್ನು ಒದಗಿಸುವುದು: ಸಿ.ಆರ್.ಪಿ.ಸಿ. 154.

9. ಸಂತ್ರಸ್ತೆಯು ಅಸಮರ್ಥತೆ ಇರುವ ವ್ಯಕ್ತಿಯಾಗಿದ್ದರೆ, ಅವರಿಗೆ ಅನುಕೂಲವಾಗುವ ಸ್ಥಳದಲ್ಲಿ ವಿಶೇಷ ಶಿಕ್ಷಕ/ಕಿ ಅಥವಾ ವ್ಯಾಖ್ಯಾನಕಾರರ ಸಮ್ಮುಖದಲ್ಲಿ ಮ್ಯಾಜಿಸ್ಟ್ರೇಟರು ಎಲ್ಲ ಮಾಹಿತಿಯನ್ನು ದಾಖಲಿಸಿಕೊಂಡು, ವಿಡಿಯೋ ಮಾಡಬೇಕು: ಸಿ.ಆರ್.ಪಿ.ಸಿ. ಎಸ್ 154.



[redacted]

10. ಸಾಧ್ಯವಿರುವ ಮಟ್ಟಿಗೆ, ಲೈಂಗಿಕ ಅಪರಾಧಕ್ಕೀಡಾದ ಸಂತ್ರಸ್ತೆಯು ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸುವುದು ಒಳ್ಳೆಯದು.

11. ತುರ್ತು ಸಂದರ್ಭಗಳಲ್ಲಿ, ಲೈಂಗಿಕ ಅಪರಾಧಕ್ಕೀಡಾದ ಸಂತ್ರಸ್ತೆಯು ಹತ್ತಿರವಿರುವ ಪೊಲೀಸ್ ಠಾಣೆಗೆ ಹೋಗಬೇಕು ಮತ್ತು ಪ್ರಕರಣವನ್ನು ವರದಿ ಮಾಡಬೇಕು ಅಥವಾ ಹೇಳಿಕೆ ಕೊಡಬೇಕು. ಪೊಲೀಸರು ಯಾವುದೇ ವಿಚಾರಣಾರ್ಹ ಪ್ರಕರಣವನ್ನು = ಮಹಿಳೆಯ ವಿರುದ್ಧ ಯಾವುದೇ ಲೈಂಗಿಕ ಹಿಂಸೆಯನ್ನು ದಾಖಲಿಸಿಕೊಳ್ಳುವುದು ಅಗತ್ಯವಿದೆ: ಸಿ.ಆರ್.ಪಿ.ಸಿ. ಎಸ್ 154(1).

12. ಎಫ್‌ಐಆರ್ ದಾಖಲಿಸಿಕೊಂಡ ನಂತರ, ಪ್ರಕರಣವು ಇನ್ನೊಂದು ಪೊಲೀಸ್ ಠಾಣೆಯ ಜವಾಬ್ದಾರಿಯ ವ್ಯಾಪ್ತಿಯ ಅಡಿಯಲ್ಲಿ ಬರುತ್ತದೆ ಎಂದು ಕಂಡುಬಂದರೆ, ಆಗ ಪ್ರಕರಣವನ್ನು ಆ ಪೊಲೀಸ್ ಠಾಣೆಗೆ ವರ್ಗಾಯಿಸಬೇಕು: ಸಿಆರ್.ಪಿ.ಸಿ ಎಸ್ 170. ಘಟನೆಯ ಸ್ಥಳದ ಕಾರಣದಿಂದಾಗಿ ಆ ಪೊಲೀಸ್ ಅಧಿಕಾರಿಗೆ ಯಾವುದೇ ಅಧಿಕಾರವಿಲ್ಲ ಎಂಬ ಆಧಾರದ ಮೇಲೆ ಪೊಲೀಸ್ ಅಧಿಕಾರಿ ತೆಗೆದುಕೊಂಡ ಯಾವುದೇ ಕ್ರಮವನ್ನು ಯಾರೂ ಸವಾಲು ಮಾಡು ವುದಿಲ್ಲ: ಸಿಆರ್.ಪಿ.ಸಿ ಎಸ್ 154(2).

**ಹಂತ 3: ಪೊಲೀಸರು ಮಾಹಿತಿಯನ್ನು ದಾಖಲಿಸಿಕೊಳ್ಳಲು ವಿಫಲವಾದರೆ ತೆಗೆದುಕೊಳ್ಳಬೇಕಾದ ಕ್ರಮಗಳು**

13. ಸಂತ್ರಸ್ತೆಯು ನೀಡಿದ ಮಾಹಿತಿಯನ್ನು ದಾಖಲಿಸಿಕೊಳ್ಳಲು ಪೊಲೀಸ್ ಠಾಣೆಯ ಉಸ್ತುವಾರಿಯಲ್ಲಿರುವ ಪೊಲೀಸ್ ಅಧಿಕಾರಿಯು ನಿರಾಕರಿಸಿದರೆ, ಸಂತ್ರಸ್ತೆಯು ಪೊಲೀಸ್ ಸೂಪರಿಂಟೆಂಡೆಂಟ್ ಅವರಿಗೆ ಒಂದು ಲಿಖಿತ ಟಿಪ್ಪಣಿಯನ್ನು ಕಳುಹಿಸಬೇಕು, ಅಂತಹ ಮಾಹಿತಿಯು ಲೈಂಗಿಕ ಅಪರಾಧ ನಡೆದಿದ್ದನ್ನು ವಿವರಿಸಿದೆ ಎಂದು ಅವರಿಗೆ ತೃಪ್ತಿಯಾದರೆ, ಪ್ರಕರಣವನ್ನು ಅವರೇ ಖುದ್ದು ತನಿಖೆ ಮಾಡಬೇಕು ಅಥವಾ ತನಿಖೆಯನ್ನು ಮಾಡುವಂತೆ ನಿರ್ದೇಶನ ನೀಡಬೇಕು: ಸಿಆರ್.ಪಿ.ಸಿ ಎಸ್ 154(3).

14. ಪೊಲೀಸ್ ಅಧಿಕಾರಿಗಳು ಲೈಂಗಿಕ ಅಪರಾಧದ ಹೇಳಿಕೆ ಪಡೆದ ನಂತರ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸದಿದ್ದರೆ, ಅವರನ್ನು ಶಿಕ್ಷಿಸಬಹುದು ಅಥವಾ ಶಿಸ್ತುಕ್ರಮ ಜರುಗಿಸಬಹುದು: ಐಪಿಸಿ ಎಸ್.166 ಎ)

**ಹಂತ 4: ಪೊಲೀಸರು ಅತ್ಯಾಚಾರದ ಸಂತ್ರಸ್ತೆಯನ್ನು ತಕ್ಷಣವೇ ವೈದ್ಯಕೀಯ ಪರೀಕ್ಷೆಗಾಗಿ ಕರೆದೊಯ್ಯಬೇಕು**

15. ತನಿಖಾಧಿಕಾರಿಗಳು (ಇನ್ಸ್‌ಪೆಕ್ಟರ್ ಶ್ರೇಣಿಯ ಅಥವಾ ಅದಕ್ಕಿಂತ ಮೇಲಿನ) ಅತ್ಯಾಚಾರದ ಸಂತ್ರಸ್ತೆಯನ್ನು ತಕ್ಷಣವೇ ವೈದ್ಯಕೀಯ ಪರೀಕ್ಷೆಗಾಗಿ ಕರೆದೊಯ್ಯಬೇಕು: ಸಿಆರ್.ಪಿ.ಸಿ ಎಸ್ 164 ಎ ವೈದ್ಯಕೀಯ ವರದಿಯ ಒಂದು ಪ್ರತಿಯನ್ನು ಮ್ಯಾಜಿಸ್ಟ್ರೇಟರಿಗೆ ನೀಡಬೇಕು.

16. ವೈದ್ಯಕೀಯ ಪರೀಕ್ಷೆಗಳನ್ನು ಸರ್ಕಾರಿ ಅಥವಾ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವ, ನೋಂದಾಯಿತ ವೈದ್ಯಕೀಯ ಸಿಬ್ಬಂದಿಯಿಂದ ಅಥವಾ ಅಂತಹ ವೈದ್ಯರು ಇಲ್ಲದಿದ್ದರೆ, ಯಾರಾದರೂ ನೋಂದಾಯಿತ ವೈದ್ಯರಿಂದ ಸಂತ್ರಸ್ತೆಯು ವ್ಯಕ್ತಪಡಿಸಿದ ಒಪ್ಪಿಗೆ ಪಡೆದು ಮಾಡಬೇಕು: ಸಿ.ಆರ್.ಪಿ.ಸಿ. ಎಸ್ 164 ಎ. ಸಂತ್ರಸ್ತೆಯು ಭಾಗಶಃ ಒಪ್ಪಿಗೆಯನ್ನು ಕೊಡಲು, ಅಂದರೆ ಕೆಲವು ಪರೀಕ್ಷೆಗಳಿಗೆ ಒಪ್ಪಿ, ಇನ್ನು ಕೆಲವನ್ನು ನಿರಾಕರಿಸಲು ಆಸ್ಪದ ನೀಡಬೇಕು.

17. ವೈದ್ಯಕೀಯ ಪರೀಕ್ಷೆಗಳು 2014ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಜಾರಿಗೊಳಿಸಿದ ಲೈಂಗಿಕ ಹಿಂಸೆಯ ಸಂತ್ರಸ್ತರು/ಪಾರಾಗಿ ಉಳಿದವರಿಗೆ ವೈದ್ಯಕೀಯ–ಕಾನೂನು ಕಾಳಜಿ, ಮಾರ್ಗದರ್ಶನಗಳು ಮತ್ತು ಪ್ರೋಟೋಕಾಲ್‌ಗಳು, ಇವನ್ನು ಪಾಲಿಸತಕ್ಕದ್ದು. (ಅದು ಇಲ್ಲಿ ಲಭ್ಯವಿದೆ: http://mohfw.nic.in/reports/guidelines-and-protocols-medico-legal-care-survivors-victims-sexual-violence)

18. ನೋಂದಾಯಿತ ವೈದ್ಯರು ಸಂತ್ರಸ್ತೆಯನ್ನು ಪರೀಕ್ಷಿಸಿ, ಈ ಕೆಳಕಂಡ ಮಾಹಿತಿಯನ್ನು ಒಳಗೊಂಡಂತೆ ಒಂದು ವರದಿಯನ್ನು ಸಿದ್ಧಪಡಿಸಬೇಕು: (ಸಿ.ಆರ್.ಪಿ.ಸಿ. ಎಸ್ 164 ಎ (2)):

ಎ) ಸಂತ್ರಸ್ತೆ (ಅಥವಾ ಸಂತ್ರಸ್ತೆಯು ಅಸಮರ್ಥರಾದರೆ, ಸಂತ್ರಸ್ತೆಯನ್ನು ಪ್ರತಿನಿಧಿಸುವ ವ್ಯಕ್ತಿ) ಪರೀಕ್ಷೆಗೆ ಒಪ್ಪಿಗೆ ನೀಡಿದ್ದಾರೆ ಎನ್ನುವುದು ಇರಬೇಕು (ಸಿ.ಆರ್.ಪಿ.ಸಿ. ಎಸ್ 164 ಎ (4))



[redacted]

ಬಿ) ಪರೀಕ್ಷೆ ಮಾಡಿದ ದಿನಾಂಕ ಮತ್ತು ಸಮಯ. (ಸಿಆರ್.ಪಿ.ಸಿ. ಎಸ್ 164 ಎ (5)).

ಸಿ) ಸಂತ್ರಸ್ತೆಯ ಅಥವಾ ಅವರ ಜೊತೆಗೆ ಬಂದಿರುವವರ ಹೆಸರು ಮತ್ತು .ವಿಳಾಸ

ಡಿ) ಸಂತ್ರಸ್ತೆಯ ವಯಸ್ಸು

ಇ) ಸಂತ್ರಸ್ತೆಯಿಂದ ವಿಧಿವಿಧಾನ ಪರೀಕ್ಷೆಗೆ ತೆಗೆದುಕೊಂಡ ವಸ್ತುಗಳ ವಿವರಗಳು

ಎಫ್) ಏನಾದರೂ ಗಾಯಗಳಿದ್ದರೆ, ಅದರ ಗುರುತುಗಳು

ಜಿ) ಸಂತ್ರಸ್ತೆಯ ಸಾಮಾನ್ಯ ಮಾನಸಿಕ ಸ್ಥಿತಿಗತಿಯ ವಿವರಗಳು

ಎಚ್) ಸಂಬಂಧಿತ ಮಾಹಿತಿಗಳು, ಸಾಕಷ್ಟು ವಿವರವಾಗಿರಬೇಕು

ಐ) ಪ್ರತಿಯೊಂದೂ ನಿರ್ಣಯಕ್ಕೆ ಬರಲು ಸಕಾರಣಗಳನ್ನು ವರದಿಯು ವಿವರವಾಗಿ ಉಲ್ಲೇಖಿಸಬೇಕು (ಸಿಆರ್.ಪಿ.ಸಿ ಎಸ್ 164 ಎ (3)).

ಜೆ) ನೋಂದಾಯಿತ ವೈದ್ಯರು ತನಿಖಾ ಪೊಲೀಸ್ ಅಧಿಕಾರಿಗೆ ಈ ವರದಿಯನ್ನು ಸಲ್ಲಿಸಬೇಕಿದ್ದು, ಅವರು ಅದನ್ನು ಮ್ಯಾಜಿಸ್ಟ್ರೇಟರ್‌ಗೆ ಕಳಿಸಬೇಕು (ಸಿಆರ್.ಪಿ.ಸಿ ಎಸ್ 164 ಎ (6)).

19. ವೈದ್ಯಕೀಯ ಪರೀಕ್ಷಕರು ವರದಿಯಲ್ಲಿ ಸಂತ್ರಸ್ತೆಯ ನಡತೆ ಅಥವಾ ಲೈಂಗಿಕ ಪೂರ್ವಾಪರಗಳ ಕುರಿತು ಅಥವಾ ಗಾಯಗಳು ಇಲ್ಲದಿರುವ ಕುರಿತು ಯಾವುದೇ ರೀತಿಯ ಟಿಪ್ಪಣಿಗಳನ್ನು/ಹೇಳಿಕೆಗಳನ್ನು ಮಾಡಬಾರದು.

20. ಅತ್ಯಾಚಾರವು ಒಂದು ಅಪರಾಧ ಮತ್ತು ಅದು ಒಂದು ವೈದ್ಯಕೀಯ ಸ್ಥಿತಿಯಲ್ಲ. ವೈದ್ಯಕೀಯ ಅಧಿಕಾರಿಯು ಅತ್ಯಾಚಾರವಾಗಿದೆಯೇ ಇಲ್ಲವೇ ಎಂದು ತಾನು ಆಲೋಚಿಸುತ್ತೇನೆ ಎಂಬುದರ ಕುರಿತು ಯಾವುದೇ ಅಭಿಪ್ರಾಯವನ್ನು ನೀಡಬಾರದು. ಇದು ನ್ಯಾಯಾಲಯದ ಕಾನೂನು ನಿರ್ಣಯವಾಗಿರುತ್ತದೆ.

**ಟಿಪ್ಪಣಿ: ವೈದ್ಯಕೀಯ ಅಧಿಕಾರಿಯು ಲೈಂಗಿಕ ಅಪರಾಧದ ಸಂತ್ರಸ್ತೆಯ ಪರೀಕ್ಷೆಯ ಒಂದು ಭಾಗವಾಗಿ "ಎರಡು ಬೆರಳಿನ ಪರೀಕ್ಷೆ'ಯನ್ನು ಮಾಡುವುದು ಕಾನೂನುಬಾಹಿರವಾಗಿದೆ.**

**ಹಂತ 5: ಪೊಲೀಸರು ಒಬ್ಬರು (ಮಹಿಳಾ) ಮ್ಯಾಜಿಸ್ಟ್ರೇಟರ್ ಬಳಿ ಅತ್ಯಾಚಾರದ ಸಂತ್ರಸ್ತೆಯ ಹೇಳಿಕೆ ದಾಖಲಿಸಿಕೊಳ್ಳಲು ಆಕೆಯನ್ನು ಕರೆದುಕೊಂಡು ಹೋಗಲು ತತ್‌ಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಬೇಕು**

21. ಒಮ್ಮೆ ಪೊಲೀಸರು ಅತ್ಯಾಚಾರದ ಅಪರಾಧ ನಡೆದಿದ್ದರ ಕುರಿತು ಮಾಹಿತಿಯನ್ನು ಪಡೆದುಕೊಂಡೊಡನೆ, ತನಿಖಾಧಿಕಾರಿಯು (ಐ.ಒ) ಸಂತ್ರಸ್ತೆಯನ್ನು ಮ್ಯಾಜಿಸ್ಟ್ರೇಟರ್ (ಸಾಧ್ಯವಿದ್ದಷ್ಟೂ ಮಹಿಳಾ ಮ್ಯಾಜಿಸ್ಟ್ರೇಟ್) ಬಳಿ ಆಕೆಯ ಹೇಳಿಕೆಯನ್ನು ಸಿ.ಆರ್.ಪಿ.ಸಿ.ಎಸ್. 164 ಅಡಿಯಲ್ಲಿ ದಾಖಲಿಸಿಕೊಳ್ಳುವ ಉದ್ದೇಶಕ್ಕಾಗಿ ಕರೆದುಕೊಂಡು ಹೋಗಲು ತತ್‌ಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಬೇಕು.

22. ತನಿಖಾಧಿಕಾರಿಯು ತನಗೆ ಅತ್ಯಾಚಾರದ ಅಪರಾಧದ ಕುರಿತು ತಿಳಿಸಿದ ದಿನಾಂಕ ಹಾಗೂ ಸಮಯ ಮತ್ತು ತಾನು ಸಂತ್ರಸ್ತೆಯನ್ನು ಮ್ಯಾಜಿಸ್ಟ್ರೇಟರಲ್ಲಿಗೆ ಕರೆದುಕೊಂಡು ಹೋದ ದಿನಾಂಕ ಹಾಗೂ ಸಮಯವನ್ನು ದಾಖಲಿಸಿಕೊಳ್ಳಬೇಕು.

23. ಎಸ್.164 ಅಡಿಯಲ್ಲಿ ಮಾಡಿದ ಹೇಳಿಕೆಯ ಒಂದು ಪ್ರತಿಯನ್ನು ತನಿಖಾಧಿಕಾರಿಗೆ ಕೊಡಬೇಕು ಮತ್ತು ಪೊಲೀಸರು ಸಿ.ಆರ್.ಪಿ.ಸಿ.ಎಸ್ 173 ಅಡಿಯಲ್ಲಿ ದೋಷಾರೋಪ ಪಟ್ಟಿಯನ್ನು ದಾಖಲಿಸುವವರೆಗೂ ಅವರು ಇದರ ವಿವರಗಳನ್ನು ಯಾರಿಗೂ ಬಹಿರಂಗಪಡಿಸಬಾರದು.

24. ಸಂತ್ರಸ್ತೆಯನ್ನು ಮ್ಯಾಜಿಸ್ಟ್ರೇಟ್ ಅವರಲ್ಲಿಗೆ ಕರೆದೊಯ್ಯಲು 24 ಘಂಟೆಗಳಿಗಿಂತ ಹೆಚ್ಚು ತಡವಾದರೆ, ತನಿಖಾಧಿಕಾರಿಯು ತಮ್ಮ ಪ್ರಕರಣದ ಡೈರಿಯಲ್ಲಿ ವಿಳಂಬಕ್ಕೆ ಕಾರಣಗಳನ್ನು ದಾಖಲಿಸಿಕೊಂಡಿರಬೇಕು ಮತ್ತು ಮ್ಯಾಜಿಸ್ಟ್ರೇಟರಿಗೆ ತಮ್ಮ ಟಿಪ್ಪಣಿಯ ಒಂದು ಪ್ರತಿಯನ್ನು ನೀಡಬೇಕು.

**ಹಂತ 6: ಪೊಲೀಸರು ಒಬ್ಬ ಶಂಕಿತ ಅತ್ಯಾಚಾರಿಗೆ ಜಾಮೀನು ಅಥವಾ ಬೇಲ್ ಕೊಡಲು ಸಾಧ್ಯವಿಲ್ಲ**

25. ಒಬ್ಬ ಪೊಲೀಸ್ ಅಧಿಕಾರಿ ಅತ್ಯಾಚಾರ ಅಥವಾ ಬೇರೆ ಲೈಂಗಿಕ ಅಪರಾಧಗಳಿಗೆ ಬಂಧಿಸಿದ ಯಾರಿಗೇ ಆದರೂ ಜಾಮೀನು ನೀಡಲು ಸಾಧ್ಯವಿಲ್ಲ. ನ್ಯಾಯಾಲಯಕ್ಕೆ ಮಾತ್ರ ಬೇಲ್ ನೀಡುವ ಅಧಿಕಾರವಿದೆ.



[redacted]

**ಹಂತ 7: ಪೊಲೀಸರು ತನಿಖೆ ಪೂರ್ಣಗೊಂಡ ನಂತರ ಮ್ಯಾಜಿಸ್ಟ್ರೇಟರಿಗೆ ದೋಷಾರೋಪ ಪಟ್ಟಿಯನ್ನು ಸಲ್ಲಿಸತಕ್ಕದ್ದು**

26. ಪೊಲೀಸ್ ಸೂಪರಿಂಟೆಂಡೆಂಟ್ (ಪೊಲೀಸ್ ಠಾಣೆಯ ಉಸ್ತುವಾರಿಯಲ್ಲಿರುವ ಅಧಿಕಾರಿ) ಮ್ಯಾಜಿಸ್ಟ್ರೇಟರ್‌ಗೆ ಈ ಕೆಳಕಂಡ ಮಾಹಿತಿಯನ್ನು ಒಳಗೊಂಡ ಕಡತವನ್ನು ಸಿದ್ಧಗೊಳಿಸಿ, ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಬೇಕು (ಸಿ.ಆರ್.ಪಿ.ಸಿ.ಎಸ್.173).

ಅ) ಸಂತ್ರಸ್ತೆಯ(ಗಳ) ಮತ್ತು ಆಪಾದಿತರ(ಗಳ) ಹೆಸರುಗಳು

ಬಿ) ಮಾಹಿತಿಯ ಲಕ್ಷಣ

ಸಿ) ಪ್ರಕರಣದೊಂದಿಗೆ ಸಂಬಂಧ ಹೊಂದಿರುವ ಸಾಕ್ಷಿಗಳ ಮತ್ತು ವ್ಯಕ್ತಿಗಳ ಹೆಸರುಗಳು

ಡಿ) ಅಪರಾಧವು ನಡೆದಿರುವ ಹಾಗೆ ಕಾಣುತ್ತದೆಯೇ

ಇ) ಆಪಾದಿತರನ್ನು ಬಂಧಿಸಲಾಗಿದೆಯೇ, ಹಾಗಿದ್ದರೆ ಆಪಾದಿತರನ್ನು ಬಂಧನದಲ್ಲಿ ಇರಿಸಲಾಗಿದೆಯೇ ಅಥವಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆಯೇ

ಎಫ್) ಪ್ರಕರಣವು ಐಪಿಸಿ ಎಸ್‌ಎಸ್.376, 376ಎ, 376ಬಿ, 376ಸಿ, 376ಡಿ, 376ಇ ಅಡಿಯ ಅಪರಾಧಕ್ಕೆ ಸಂಬಂಧಿಸಿದ್ದಾಗಿದ್ದರೆ, ಮಹಿಳೆಯ ವೈದ್ಯಕೀಯ ಪರೀಕ್ಷೆಯ ವರದಿಯನ್ನು ಲಗತ್ತಿಸಲಾಗಿದೆಯೇ. ವೈದ್ಯಕೀಯ ವರದಿಯನ್ನು ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಬೇಕು.

ಜಿ) ಆ ಪೊಲೀಸ್ ಅಥವಾ ದೂರನ್ನು ಮೊದಲು ಪಡೆದುಕೊಂಡ ಅಧಿಕಾರಿಯು ತೆಗೆದುಕೊಂಡ ಕ್ರಮಗಳು

**ಹಂತ 8: ಮಗುವಿನ ಮೇಲೆ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಪೊಲೀಸರ ತನಿಖೆ**

27. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ (ಪೋಸ್ಕೋ)ಯನ್ನು 2012ರಲ್ಲಿ ಜಾರಿಗೊಳಿಸಲಾಯಿತು. ಅದು ಲೈಂಗಿಕ ದೌರ್ಜನ್ಯದಿಂದ ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳನ್ನು ರಕ್ಷಿಸುತ್ತದೆ. ಪೋಸ್ಕೋ ಅಡಿಯ ಪ್ರಕರಣಗಳಿಗೆ ಮಗುವಿನ ಒಪ್ಪಿಗೆ ಅಪ್ರಸ್ತುತವಾಗುತ್ತದೆ.

28. ಪೊಲೀಸರು ಮಗು (18 ವರ್ಷದ ಒಳಗಿನ) ಅತ್ಯಾಚಾರಕ್ಕೊಳಗಾಗಿದೆ ಎಂದು ಹೇಳಲಾದ ಪ್ರಕರಣದ ತನಿಖೆಯನ್ನು ಪೊಲೀಸ್ ಠಾಣೆಯ ಉಸ್ತುವಾರಿಯಲ್ಲಿದ್ದ ಪೊಲೀಸರು ಅಪರಾಧದ ಮಾಹಿತಿಯನ್ನು ದಾಖಲಿಸಿಕೊಂಡ ದಿನಾಂಕದಿಂದ ಮೂರು ತಿಂಗಳ ಒಳಗೆ ಪೂರ್ಣಗೊಳಿಸಬೇಕಿದೆ: ಸಿ.ಆರ್.ಪಿ.ಸಿ.ಎಸ್.173 (1ಎ).

29. ತನಿಖೆ ಪೂರ್ಣಗೊಂಡ ನಂತರ, ಉಸ್ತುವಾರಿ ಅಧಿಕಾರಿಯು ಮೇಲೆ ಪ್ಯಾರಾ 25ರಲ್ಲಿ ಉಲ್ಲೇಖಿಸಿದ ಮಾಹಿತಿಯನ್ನು ಒಳಗೊಂಡಂತೆ ಮ್ಯಾಜಿಸ್ಟ್ರೇಟರಿಗೆ ವರದಿಯೊಂದನ್ನು ಕಳಿಸಿಕೊಡಬೇಕು.

**ಡಿ. ವಿಎಡಬ್ಲ್ಯು ಪ್ರಕರಣಗಳ ವಿಚಾರಣೆ**

**ನಿಯಮ 1: ಲೈಂಗಿಕ ಹಿಂಸೆಯ ಅಪರಾಧಿಯ ಅಪರಾಧ ನಿರ್ಣಯವು ಸಂತ್ರಸ್ತೆಯ ಸಾಕ್ಷ್ಯಗಳ ಆಧಾರ ಮಾತ್ರದಿಂದಲೇ ಆಗಬಹುದು.**

30. ಲೈಂಗಿಕ ಹಿಂಸೆಯ ಅಪರಾಧಿಯ ಅಪರಾಧ ನಿರ್ಣಯವು ಸಂತ್ರಸ್ತೆಯ ಸಾಕ್ಷ್ಯಗಳ ಆಧಾರ ಮಾತ್ರದಿಂದಲೇ ಆಗಬಹುದು. ಧೃಡೀಕರಣ ಪಡೆಯಲು ಎದ್ದುಕಾಣುವ ಕಾರಣಗಳು ಇರದಿದ್ದರ ಹೊರತು ಅತ್ಯಾಚಾರದ ಸಂತ್ರಸ್ತೆಯ ಹೇಳಿಕೆಯ ಜೊತೆ ಸಕಾರಣವಾಗಿ ತಾಳೆಯಾಗುವುದು ಕಾನೂನಿಗೆ ಅಗತ್ಯ ಇಲ್ಲ, (ಹಿಮಾಚಲ ಪ್ರದೇಶ ರಾಜ್ಯ ವಿರುದ್ಧ ಆಶಾ ರಾಮ್ ಎಐಆರ್ 2006 ಎಸ್ಸಿ 381)

31. ಸಂಪೂರ್ಣ ವಿಶ್ವಾಸಾರ್ಹರಾಗಿರುವ ಸಂತ್ರಸ್ತೆಯು "ನ್ಯಾಯಾಲಯದ ವಾತಾವರಣದಿಂದ ಭಯಕ್ಕೆ ಈಡಾಗುವ ಸಾಧ್ಯತೆ ಇದೆ..." ಎಂದು ಮತ್ತು ಕೆಲವೊಮ್ಮೆ ಸತ್ಯಾಂಶಗಳನ್ನು ಸಮ್ಮಿಶ್ರಗೊಳಿಸುತ್ತಾರೆ ಅಥವಾ ಗಲಿಬಿಲಿಯಿಂದ ಘಟನೆಗಳ ಅನುಕ್ರಮತೆ ಬಗ್ಗೆ ಗೊಂದಲಗೊಳ್ಳುತ್ತಾರೆ ಎಂದು ನ್ಯಾಯಾಲಯವು ಗುರುತಿಸುತ್ತದೆ. ನ್ಯಾಯಾಲಯವು ಪ್ರಕರಣದ ಬೇರುಗಳಿಗೆ ಇಳಿಯದ ಸಂತ್ರಸ್ತೆಯ ಸಾಕ್ಷಿಯಲ್ಲಿ ಚಿಕ್ಕ ಪುಟ್ಟ ವ್ಯತ್ಯಾಸಗಳಿಗೆ ಅನಗತ್ಯ ಮಹತ್ವವನ್ನು ಕೊಡುವುದಿಲ್ಲ. (ಹಿರ್ಜಿಬಾಯಿ ವಿರುದ್ಧ ಗುಜರಾತ್ ಸಿಟೇಶನ್ಸ್ 1983 ಎಐಆರ್ 753):

[ಸಂತ್ರಸ್ತೆಯ] ಸಾಕ್ಷ್ಯವನ್ನು ಚಿಕ್ಕಪುಟ್ಟ ವ್ಯತ್ಯಾಸಗಳು ಮತ್ತು ವಿರೋಧಾಭಾಸಗಳ ಆಧಾರದಲ್ಲಿ ತಿರಸ್ಕರಿಸಬಾರದು. ಅತ್ಯಾಚಾರದ ಸಂತ್ರಸ್ತೆಯು ತನ್ನನ್ನು ಬಲವಂತವಾಗಿ ಲೈಂಗಿಕ ಸಂಭೋಗಕ್ಕೆ ಒಳಪಡಿಸಲಾಯಿತು ಎಂದು ತನ್ನ

ಪ್ರಮಾಣದಲ್ಲಿ ಹೇಳಿದರೆ, ಅವಳ ಹೇಳಿಕೆಯನ್ನು ಸಾಮಾನ್ಯವಾಗಿ ಅದಕ್ಕೆ ದೃಢೀಕರಣವಿಲ್ಲದಿದ್ದರೂ, ಸ್ವೀಕರಿಸಲಾಗುವುದು. (ರಾಧು ವಿರುದ್ಧ ಮಧ್ಯ ಪ್ರದೇಶ ರಾಜ್ಯ 2007 ಸಿ.ಆರ್ಐ.ಎಲ್.ಜೆ. 4704)

**ನಿಯಮ 2: ಸಂತ್ರಸ್ತೆಯ ಸಾಕ್ಷ್ಯಕ್ಕೆ ಹೆಚ್ಚಿನ ಮಹತ್ವ ನೀಡಬೇಕು.**

32. ಸರ್ವೋಚ್ಚ ನ್ಯಾಯಾಲಯವು ಹಲವಾರು ಸಲ ಲೈಂಗಿಕ ಅಪರಾಧದ ಸಂತ್ರಸ್ತೆಗೆ ಹೆಚ್ಚಿನ ತೂಕ ಅಥವಾ ಮಹತ್ವ ನೀಡಬೇಕು ಎಂದು ಸ್ಪಷ್ಟಪಡಿಸಿದೆ: "ಲೈಂಗಿಕ ಹಲ್ಲೆಯ ಸಂತ್ರಸ್ತೆಯು ಓರ್ವ ಗಾಯಗೊಂಡ ಸಾಕ್ಷಿಯ ಪುರಾವೆಗೆ ಸಮನಾಗಿದ್ದಾರೆ... ಗಾಯವನ್ನು ಸಹಿಸಿಕೊಂಡ ಓರ್ವ ಸಾಕ್ಷಿಯ ಹಾಗೆಯೇ... ನೈಜ ಆಪಾದಿತನನ್ನು ಕ್ಷಮಿಸುವ ಸಾಧ್ಯತೆ ತೀರಾ ಕಡಿಮೆ ಇರುತ್ತದೆ ಎಂಬರ್ಥದಲ್ಲಿ ಅತ್ಯುತ್ತಮ ಸಾಕ್ಷಿ" (ಹಿರ್ಜಿಬಾಯಿ ವಿರುದ್ಧ ಗುಜರಾತ್ ಸಿಟೇಶನ್ಸ್ 1983 ಎಐಆರ್ 753).

33. ಗಾಯಗೊಂಡಿರುವ ಸಾಕ್ಷಿಯ ಪುರಾವೆಗೆ ಹೆಚ್ಚಿನ ತೂಕವನ್ನು ಅಥವಾ ಮಹತ್ವವನ್ನು ಕೊಡಬೇಕು ಮತ್ತು ಆಕೆಯ ಸಾಕ್ಷ್ಯವನ್ನು ವಿಶ್ವಾಸಾರ್ಹ ಹಾಗೂ ಟೀಕೆಗಳನ್ನು ಮೀರಿದ್ದು ಎಂದು ಪರಿಗಣಿಸಬೇಕು. ಓರ್ವ ಗಾಯಗೊಂಡ ಸಾಕ್ಷಿಯ ಪುರಾವೆಗಳನ್ನು ತಿರಸ್ಕರಿಸಲು ತುಂಬ ಬಲವಾದ ಮತ್ತು ಮನವರಿಕೆಯಾಗುವಂತಹ ನೆಲೆ ಇರಬೇಕು. (ಮುಖೇಶ್ ಮತ್ತು ಇನ್ನೊಬ್ಬರು ವಿರುದ್ಧ ದೆಹಲಿ ಎನ್‌ಸಿಟಿ ರಾಜ್ಯ ಮತ್ತು ಇತರರು, ಕ್ರಿಮಿನಲ್ ಮೇಲ್ಮನವಿ 2017ರ ಸಂಖ್ಯೆ 607–610)

34. ಸರಿಯಾಗಿ ತನಿಖೆ ಮಾಡುವಲ್ಲಿ ಪೊಲೀಸ್ ವೈಫಲ್ಯವನ್ನು ಲೈಂಗಿಕ ಅಪರಾಧದ ಸಂತ್ರಸ್ತೆಯನ್ನು ಅಪನಂಬಿಕೆಯಿಂದ ಕಾಣಲು ಒಂದು ಕಾರಣವಾಗಿ ಬಳಸಿಕೊಳ್ಳಲಾಗದು, (ಪಂಜಾಬ್ ರಾಜ್ಯ ವಿರುದ್ಧ ಗುರುಮಿತ್ ಸಿಂಗ್ ಮತ್ತು ಇತರರು, ಸುಪ್ರೀಂ ಕೋರ್ಟ್ 1996 ಎಐಆರ್ 1393).

35. ಯೋನಿಪೊರೆ ಹರಿಯದೇ ಇರುವುದು ಅಥವಾ ಗಾಯಗಳು ಇಲ್ಲದೇ ಇರುವುದು ಅತ್ಯಾಚಾರವನ್ನು ಅಲ್ಲಗೆಳೆಯುವುದಿಲ್ಲ. (ರಾಧು ವಿರುದ್ಧ ಮಧ್ಯ ಪ್ರದೇಶ ರಾಜ್ಯ 2007 ಸಿಆರ್ಐ.ಎಲ್.ಜೆ. 4704; ರಂಜಿತ್ ಹಜಾರಿಕಾ ವಿರುದ್ಧ ಅಸ್ಸಾಂ ರಾಜ್ಯ (1998) 8 ಎಸ್‌ಸಿಸಿ 635)

**ನಿಯಮ 3: ಸಂತ್ರಸ್ತೆಯ ಚಾರಿತ್ರ್ಯ ಅಥವಾ ಹಿಂದಿನ ಲೈಂಗಿಕ ಅನುಭವದ ಕುರಿತ ಪುರಾವೆಗಳು ಪ್ರಸ್ತುತವಲ್ಲ.**

36. ಐಪಿಸಿ ಎಸ್‌ಎಸ್ 354, 354ಎ, 354ಬಿ, 354ಸಿ, 354ಡಿ, 376, 376ಎ, 376ಬಿ, 376ಸಿ ಅಥವಾ 376ಡಿ, 376ಇ ಅಡಿಯ ಲೈಂಗಿಕ ಅಪರಾಧಗಳು ಅಥವಾ ಈ ರೀತಿಯ ಅಪರಾಧಗಳನ್ನು ಎಸಗಲು ನಡೆಸುವ ಯಾವುದೇ ಪ್ರಯತ್ನಗಳ ಪ್ರಾಸಿಕ್ಯೂಶನ್ನಿನಲ್ಲಿ, ಒಪ್ಪಿಗೆಯು ಒಂದು ಸಮಸ್ಯೆಯಾಗಿರುವ ಈ ಯಾವುದೇ ರೀತಿಯ ಪ್ರಕರಣಗಳಲ್ಲಿ, ಸಂತ್ರಸ್ತೆಯ ಚಾರಿತ್ರ್ಯ ಅಥವಾ ಹಿಂದಿನ ಲೈಂಗಿಕ ಅನುಭವದ ಕುರಿತ ಪುರಾವೆಗಳು ಒಪ್ಪಿಗೆಯ ಸಮಸ್ಯೆಗೆ ಅಥವಾ ಒಪ್ಪಿಗೆಯ ಗುಣಮಟ್ಟಕ್ಕೆ ಪ್ರಸ್ತುತ ಅಲ್ಲ: ಭಾರತೀಯ ಸಾಕ್ಷ್ಯ ಕಾಯಿದೆ ಎಸ್ 53ಎ. ಪಾಟಿ–ಸವಾಲಿನಲ್ಲಿ, ಸಂತ್ರಸ್ತೆಯ ಸಾಮಾನ್ಯ ಅನೈತಿಕ ನಡವಳಿಕೆ ಕುರಿತು ಯಾವುದೇ ಪ್ರಶ್ನೆಗೆ ಆಸ್ಪದವಿಲ್ಲ: ಭಾರತೀಯ ಸಾಕ್ಷ್ಯ ಕಾಯಿದೆ ಎಸ್ 146.

**ನಿಯಮ 4: ಕುಟುಂಬ ಸದಸ್ಯರ ಸಾಕ್ಷ್ಯವನ್ನು ಅವರು ಸಂಬಂಧಿಗಳು ಎಂಬ ಒಂದೇ ಕಾರಣಕ್ಕೆ ತಿರಸ್ಕರಿಸಲಾಗದು.**

37. ಪ್ರತ್ಯಕ್ಷ ಸಾಕ್ಷಿಗಳ ಪುರಾವೆಗಳನ್ನು ಅವರು ಕುಟುಂಬದ ಸದಸ್ಯರು ಎಂಬ ಒಂದೇ ಕಾರಣಕ್ಕೆ ತಿರಸ್ಕರಿಸಲಾಗದು. ಅವರು ಸಂತ್ರಸ್ತೆಗೆ ಸಂಬಂಧಿಗಳಾಗಿದ್ದರಿಂದ ಆಪಾದಿತನನ್ನು ತಪ್ಪಾಗಿ ಸೂಚಿಸುವ ಸಾಧ್ಯತೆ ಇದೆ ಎಂಬ ವಾದವನ್ನು, ವಿಶ್ವಾಸಾರ್ಹ ಪುರಾವೆಯನ್ನು ತಿರಸ್ಕರಿಸಲು ಒಂದು ಕಾರಣವನ್ನಾಗಿ ಬಳಸಿಕೊಳ್ಳಲಾಗದು. (ದೌಲತ್‌ರಾಮ್ ಎಸ್/ಓ ಸದ್ರಾಮ್ ತೇಲಿ ವಿರುದ್ಧ ಛತ್ತೀಸ್‌ಘಡ್ ಸುಪ್ರೀಂ ಕೋರ್ಟ್ಸ್ 19 ಸೆಪ್ಟೆಂಬರ್ 2008; ಪಂಜಾಬ್ ರಾಜ್ಯ ವಿರುದ್ಧ ಜಾಗಿರ್ ಸಿಂಗ್ ಎಐಆರ್ 1973 ಎಸ್ಸಿ 2407).

**ನಿಯಮ 5: ಅತ್ಯಾಚಾರ ಸಂತ್ರಸ್ತೆಯರ ಗುರುತನ್ನು ಗೌಪ್ಯವಾಗಿ ಇಡತಕ್ಕದ್ದು.**

38. ಅತ್ಯಾಚಾರದ ಎಲ್ಲ ವಿಚಾರಣೆಗಳನ್ನು ಖಾಸಗಿಯಾಗಿ ನಡೆಸಬೇಕು: ಸಿ.ಆರ್.ಪಿ.ಸಿ. ಎಸ್ 327. ಐಪಿಸಿ ಎಸ್. 376, 376ಎ, 376ಬಿ, 376ಸಿ ಅಥವಾ 376ಡಿ ಅಡಿಯ ಅಪರಾಧಗಳ ಸಂತ್ರಸ್ತೆಯನ್ನು ಗುರುತಿಸಬಹುದಾದ ಹೆಸರು ಅಥವಾ ಮಾಹಿತಿಯನ್ನು ಮುದ್ರಿಸುವುದು ಅಥವಾ ಪ್ರಕಟಿಸುವುದನ್ನು ನಿಷೇಧಿಸಲಾಗಿದ್ದು, ಅದಕ್ಕಾಗಿ ಶಿಕ್ಷಿಸಬಹುದಾಗಿದೆ. (ಐಪಿಸಿ ಎಸ್ 228 ಎ).



[redacted]

# ಮದುವೆಯ ಸುಳ್ಳು ಆಶ್ವಾಸನೆ ನೀಡಿ ಅತ್ಯಾಚಾರ

## ಸುಪ್ರೀಂ ಕೋರ್ಟ್ ತೀರ್ಪು

## ದೀಪಕ್ ಗುಲಾಟಿ ವಿರುದ್ಧ ಹರ್ಯಾಣ ರಾಜ್ಯ, ಮೇ 2013

## ಕ್ರಿಮಿನಲ್ ಮೇಲ್ಮನವಿ 2010ರ ಸಂಖ್ಯೆ 2322

ಗೀತಾ, ದ್ವಿತೀಯ ಪಿಯುಸಿ ಓದುತ್ತಿರುವ 19 ವರ್ಷದ ಹುಡುಗಿ, ಮತ್ತು ದೀಪಕ್ ಕೆಲವು ಸಮಯದಿಂದ ಪರಸ್ಪರ ಪರಿಚಿತರಾಗಿದ್ದರು. ದೀಪಕ್ ಅವಳನ್ನು ಸರ್ಕಾರಿ ಸಂಯುಕ್ತ ಕಾಲೇಜಿನ ಮುಂದೆ ಭೇಟಿಯಾಗುತ್ತಿದ್ದ ಮತ್ತು ಅವಳ ಜೊತೆಗೆ ಆಪ್ತ ಸಂಬಂಧವನ್ನು ಹೊಂದಲು ಬಯಸಿದ್ದ. ದೀಪಕ್ ಗೀತಾಳಿಗೆ ತನ್ನೊಂದಿಗೆ ಪಕ್ಕದ ಹಳ್ಳಿಗೆ ಬಂದು, ಮದುವೆಯಾಗುವಂತೆ ಮನವೊಲಿಸಿದ. ಹಳ್ಳಿಗೆ ಹೋಗುವ ದಾರಿಯಲ್ಲಿ ದೀಪಕ್ ಗೀತಾಳನ್ನು ಕೆರೆಯ ಬಳಿ ಕರೆದೊಯ್ದು, ಲೈಂಗಿಕ ಸಂಪರ್ಕ ಬೆಳೆಸಿದ. ನಂತರ ಅವನು ಆಕೆಯನ್ನು ತನ್ನ ಬಂಧುಗಳ ಮನೆಗೆ ಕರೆದುಕೊಂಡು 3–4 ದಿನ ಇರಲು ಕರೆದುಕೊಂಡು ಹೋದ ಮತ್ತು ಅಲ್ಲಿ ಅವಳೊಂದಿಗೆ ಹಲವಾರು ಸಂದರ್ಭಗಳಲ್ಲಿ ಸಂಭೋಗವನ್ನು ಮಾಡಿದ. ನಾಲ್ಕು ದಿನಗಳ ನಂತರ ಗೀತಾಳನ್ನು ಮನೆಯಿಂದ ಆಚೆ ಹೊರನೂಕಿದ. ನಂತರ ಆಕೆ ಹತ್ತಿರದ ವಸತಿಗೃಹಕ್ಕೆ ಹೋದಳು. ವಸತಿಗೃಹದ ವಾರ್ಡನ್ ಅನುಮಾನಗೊಂಡು, ಗೀತಾಳನ್ನು ಪ್ರಶ್ನಿಸಿದರು. ಗೀತಾ ಅವರಿಗೆ ನಡೆದಿರುವುದನ್ನು ಹೇಳಿದಳು, ವಾರ್ಡನ್ ಆಕೆಯ ತಂದೆಯನ್ನು ಸಂಪರ್ಕಿಸಿದರು. ಗೀತಾ ಹಾಸ್ಟೆಲ್‌ಅನ್ನು ಬಿಟ್ಟು, ದೇವಸ್ಥಾನವೊಂದಕ್ಕೆ ಹೋದಳು. ಅಲ್ಲಿ ಅವಳಿಗೆ ಪುನಃ ದೀಪಕ್ ಭೇಟಿಯಾಗಿ, ಮತ್ತೆ ಮನವೊಲಿಸಿದ. ನಂತರ ಗೀತಾ ಅವನೊಂದಿಗೆ ಇನ್ನೊಂದು ಹಳ್ಳಿಗೆ ಹೋಗಲು ಒಪ್ಪಿದಳು. ಅವರು ಬಸ್ ನಿಲ್ದಾಣಕ್ಕೆ ಹೋದಾಗ, ಗೀತಾಳ ತಂದೆ ಪೊಲೀಸ್ ಅಧಿಕಾರಿಗಳೊಂದಿಗೆ ಕಾಯುತ್ತಿದ್ದರು ಮತ್ತು ಪೊಲೀಸರು ಕೊನೆಗೂ ಅವನನ್ನು ಬಂಧಿಸಿದರು.

ಎಫ್‌ಐಆರ್‌ಅನ್ನು ಐಪಿಸಿ ಎಸ್. 365 (ವ್ಯಕ್ತಿಯನ್ನು ಗುಪ್ತವಾಗಿ ಮತ್ತು ಕಾನೂನುಬಾಹಿರವಾಗಿ ಬಂಧಿಸಿಡುವ ಉದ್ದೇಶದಿಂದ ಅಪಹರಿಸುವುದು ಅಥವಾ ಕರೆದೊಯ್ಯುವುದು) ಮತ್ತು ಐಪಿಸಿ ಎಸ್.366 (ಮಹಿಳೆಯನ್ನು ಮದುವೆಯಾಗುವ ಅಥವಾ ಆಕೆಯನ್ನು ಬಲಾತ್ಕರಿಸುವ ಉದ್ದೇಶದಿಂದ ಒತ್ತಾಯಪೂರ್ವಕವಾಗಿ ಮಹಿಳೆಯರನ್ನು ಅಪಹರಿಸುವುದು ಅಥವಾ ಕರೆದೊಯ್ಯುವುದು) ಅಡಿಯಲ್ಲಿ ದಾಖಲಿಸಲಾಯಿತು.

ಈ ಪ್ರಕರಣದಲ್ಲಿ ಮುಖ್ಯ ಪ್ರಶ್ನೆ ಎಂದರೆ ದೀಪಕನು ಗೀತಾಳನ್ನು ತನ್ನೊಂದಿಗೆ ಬೇರೆ ಹಳ್ಳಿಗೆ ಬರುವಂತೆ, ಮದುವೆಯಾಗುವಂತೆ ಕೇಳಿಕೊಂಡಾಗಿನಿಂದ ಆರಂಭದಿಂದಲೇ ಆತನಿಗೆ ಆಕೆಯನ್ನು ವಂಚಿಸುವ ಉದ್ದೇಶವಿತ್ತೇ ಮತ್ತು ಮದುವೆಯ ಸುಳ್ಳು ಭರವಸೆಯ ಮೇರೆಗೆ ಲೈಂಗಿಕ ಸಂಪರ್ಕ ಬೆಳೆಸಲು ಗೀತಾಳ ಒಪ್ಪಿಗೆಯನ್ನು ಪಡೆಯಲಾಗಿತ್ತೇ ಎನ್ನುವುದು.

**ಫಲಿತಾಂಶಗಳು:**

- "ಅತ್ಯಾಚಾರ ಎನ್ನುವುದು ಸಮಾಜದಲ್ಲಿ ಅತ್ಯಂತ ನೈತಿಕವಾಗಿ ಮತ್ತು ದೈಹಿಕವಾಗಿ ಆಕ್ಷೇಪಾರ್ಹ, ನಿಂದನೀಯ ಅಪರಾಧವಾಗಿದೆ, ಏಕೆಂದರೆ ಅದು ಸಂತ್ರಸ್ತೆಯ ದೇಹ, ಮನಸ್ಸು ಮತ್ತು ಖಾಸಗೀತನದ ಮೇಲೆ ನಡೆಸುವ ಹಲ್ಲೆ... ಮತ್ತು ಅದು ಸಂತ್ರಸ್ತೆಯ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತದೆ."
- ಒಪ್ಪಿಗೆಯನ್ನು ವ್ಯಕ್ತಪಡಿಸಬಹುದು ಅಥವಾ ಸೂಚಿಸಬಹುದು, ಬಲವಂತಪಡಿಸಬಹುದು ಅಥವಾ ತಪ್ಪುದಾರಿಗೆಳೆಸಬಹುದು, ಇಚ್ಛೆಯಿಂದ ಅಥವಾ ಮೋಸದಿಂದ ಪಡೆದುಕೊಂಡಿರಬಹುದು.
- ಅತ್ಯಾಚಾರ ಮತ್ತು ಒಪ್ಪಿಗೆಯ ಲೈಂಗಿಕ ಸಂಪರ್ಕದ ನಡುವೆ ಸ್ಪಷ್ಟವಾದ ವ್ಯತ್ಯಾಸವಿದೆ, ಮತ್ತು ಇಂತಹ ಪ್ರಕರಣದ ವಿಚಾರದಲ್ಲಿ, ನ್ಯಾಯಾಲಯವು ಆಪಾದಿತರು ಸಂತ್ರಸ್ತೆಯನ್ನು ಮದುವೆಯಾಗಲು ನಿಜವಾಗಿಯೂ ಬಯಸಿದ್ದರೇ ಅಥವಾ ದುರುದ್ದೇಶದ ಪ್ರೇರಣೆಗಳಿದ್ದವೇ ಮತ್ತು ತನ್ನ ಕಾಮ ತೃಷೆಯನ್ನು ತಣಿಸಿಕೊಳ್ಳಲು ಆಕೆಗೆ ಮದುವೆಯಾಗುವ ಸುಳ್ಳು ಆಶ್ವಾಸನೆ ನೀಡಿದ್ದನೇ ಎಂಬುದನ್ನು ಎಚ್ಚರಿಕೆಯಿಂದ ಪರೀಕ್ಷಿಸುವ ಅಗತ್ಯವಿದೆ.



[redacted]

- ಐಪಿಸಿ ಎಸ್‌ಎಸ್.417, 375 ಮತ್ತು 376ನ ಉಪಬಂಧಗಳನ್ನು ಐಪಿಸಿ ಎಸ್.90ರ ಜೊತೆಗೆಯೇ ಪರಿಗಣಿಸುವ ಅಗತ್ಯವಿದೆ. ಐಪಿಸಿ ಎಸ್.90ಯನ್ನು ಅನ್ವಯಿಸಲು, ಈ ಕೆಳಗಿನ ಎರಡು ಪರೀಕ್ಷೆಗಳು ತೃಪ್ತಿಕರವಾಗಿರತಕ್ಕದ್ದು:

    1. ಲೈಂಗಿಕ ಕೃತ್ಯಕ್ಕೆ ಒಪ್ಪಿಗೆ ಕೊಡುವ ವ್ಯಕ್ತಿಯು ಹಾನಿ ಅಥವಾ ಅಪಾಯಕ್ಕೀಡಾಗುವ ಭಯದಿಂದಾಗಿ ಅಥವಾ ಸತ್ಯಾಂಶಗಳ ತಪ್ಪು ಗ್ರಹಿಕೆಯಿಂದಾಗಿ ಕೊಟ್ಟಿರಬಹುದು; ಮತ್ತು

    2. ಲೈಂಗಿಕ ಕೃತ್ಯವನ್ನು ಎಸಗುವ ವ್ಯಕ್ತಿಗೆ ಸತ್ಯಾಂಶದ ಕುರಿತು ಅರಿವಿರಬಹುದು ಅಥವಾ ಆದರೆ ಭಯ ಅಥವಾ ತಪ್ಪುಗ್ರಹಿಕೆಯಿಂದಾಗಿ ಲೈಂಗಿಕ ಕೃತ್ಯಕ್ಕೆ ಒಪ್ಪಿಗೆ ಕೊಡಲಿಕ್ಕಿಲ್ಲ ಎಂದು ಯೋಚಿಸಲು ಕಾರಣವನ್ನು ಹೊಂದಿರಬಹುದು. ಕೊಟ್ಟ ಆಶ್ವಾಸನೆಯನ್ನು ಮುರಿಯುವುದಕ್ಕೆ ಮತ್ತು ಒಂದು ಸುಳ್ಳು ಆಶ್ವಾಸನೆಯನ್ನು ಈಡೇರಿಸುವುದಕ್ಕೆ, ಎರಡಕ್ಕೂ ವ್ಯತ್ಯಾಸವಿದೆ.

- ನ್ಯಾಯಾಲಯವು ಆಪಾದಿತ ಮದುವೆಯ ಸುಳ್ಳು ಆಶ್ವಾಸನೆಯನ್ನು ಆರಂಭದ ಹಂತದಲ್ಲಿಯೇ ಕೊಟ್ಟಿದ್ದನೇ ಅಥವಾ ಲೈಂಗಿಕ ಸಂಬಂಧಗಳಲ್ಲಿ ತೊಡಗಿಸಿಕೊಳ್ಳುವುದರ ಲಕ್ಷಣ ಮತ್ತು ಪರಿಣಾಮಗಳನ್ನು ಸಂಪೂರ್ಣವಾಗಿ ಅರಿತುಕೊಂಡ ನಂತರ ಒಪ್ಪಿಗೆಯನ್ನು ನೀಡಲಾಯಿತೇ ಎಂಬುದನ್ನು ನ್ಯಾಯಾಲಯವು ಪರೀಕ್ಷಿಸುವ ಅಗತ್ಯವಿದೆ.

- ಮಹಿಳೆಯು ಆಪಾದಿತನು ಆಕೆಗೆ ಮಾಡಿದ ತಪ್ಪುಗ್ರಹಿಕೆಯ ಕಾರಣದಿಂದ ಮಾತ್ರವಲ್ಲದೇ, ಆಪಾದಿತನ ಕುರಿತಾಗಿ ತನ್ನ ಪ್ರೀತಿ ಮತ್ತು ಒಲವಿನ ಕಾರಣದಿಂದಾಗಿ ಮತ್ತು ಲೈಂಗಿಕ ಸಂಭೋಗ ನಡೆಸಲು ಒಪ್ಪುವ ಸನ್ನಿವೇಶಗಳೂ ಇರಬಹುದು. ಆಪಾದಿತನು ಮುಂದಿನ ಸನ್ನಿವೇಶಗಳನ್ನು ಕಾಣಲು ಸಾಧ್ಯವಾಗದೇ ಹೋದ ಕಾರಣದಿಂದಾಗಿ ಅಥವಾ ಆತನ ನಿಯಂತ್ರಣಕ್ಕೆ ಮೀರಿದ ಸನ್ನಿವೇಶಗಳಿಂದಾಗಿ, ಆತನಿಗೆ ಮಹಿಳೆಯನ್ನು ಮದುವೆಯಾಗುವ ಎಲ್ಲ ಉದ್ದೇಶವಿದ್ದಾಗಲೂ, ಆಕೆಯನ್ನು ಮದುವೆಯಾಗಲು ಅಸಮರ್ಥನಾಗಬಹುದು. ಅಂತಹ ಪ್ರಕರಣಗಳನ್ನು ಬೇರೆಯಾಗಿ ನೋಡುವ ಅಗತ್ಯವಿದೆ.

- ಆಪಾದಿತನ ಆಶ್ವಾಸನೆಯು ಸುಳ್ಳಲ್ಲ ಮತ್ತು ಮಹಿಳೆಯನ್ನು ಲೈಂಗಿಕ ಕೃತ್ಯದಲ್ಲಿ ತೊಡಗಿಸಲು ಆಕೆಯನ್ನು ತಪ್ಪುದಾರಿಗೆಳೆಸುವ ಏಕೈಕ ಉದ್ದೇಶದಿಂದ ಮಾತ್ರ ಮಾಡಿಲ್ಲ ಎಂಬ ಸನ್ನಿವೇಶದಲ್ಲಿ, ಅಂತಹ ಕೃತ್ಯಗಳು ಅತ್ಯಾಚಾರಕ್ಕೆ ಸಮನಾಗುವುದಿಲ್ಲ.

- ಮೊದಲಿನಿಂದಲೂ ಆಪಾದಿತನ ಉದ್ದೇಶವು ದುರುದ್ದೇಶದಿಂದ ಕೂಡಿತ್ತು ಎಂಬ ನಿರ್ಣಯಕ್ಕೆ ನ್ಯಾಯಾಲಯವು ಬಂದರೆ ಮಾತ್ರ ಆಪಾದಿತನಿಗೆ ಅತ್ಯಾಚಾರಕ್ಕಾಗಿ ಶಿಕ್ಷೆ ವಿಧಿಸಲಾಗುವುದು.

**ನಿರ್ಣಯಗಳು:**

> ಆಪಾದಿತನಿಗೆ ತುಂಬ ಆರಂಭದಿಂದಲೂ, ಮಹಿಳೆಯನ್ನು ಮದುವೆಯಾಗುವ ತನ್ನ ಆಶ್ವಾಸನೆಯನ್ನು ಈಡೇರಿಸುವ ಯಾವುದೇ ಉದ್ದೇಶವೂ ಇರಲಿಲ್ಲ ಎಂದು ಸಾಬೀತಾದಾಗ, ಐಪಿಸಿ ಎಸ್.90 ಆಪಾದಿತನ ಮೇಲಿನ ಅಪರಾಧದ ಹೊಣೆಯನ್ನು ತ್ವರಿತಗೊಳಿಸುತ್ತದೆ ಅಷ್ಟೆ.

ಮೇಲಿನ ಅಂಶಗಳ ದೃಷ್ಟಿಯಿಂದ ವಿಚಾರಣೆ ನಡೆಸಿ, ದೀಪಕ್‌ನ ಅಪರಾಧ ನಿರ್ಣಯ ಮಾಡಿ ಮತ್ತು ಶಿಕ್ಷೆಯನ್ನು ವಿಧಿಸಲಾಯಿತು.



[redacted]

# ವಿಎಡಬ್ಲ್ಯು ಅಪರಾಧಗಳನ್ನು ಪೊಲೀಸಿಗೆ ವರದಿ ಮಾಡುವುದು
# ಪ್ರಥಮ ಮಾಹಿತಿ ವರದಿಗಳು
# ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–17

## 1. ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸುವಲ್ಲಿ ವಿಳಂಬ

*ಮುಖೇಶ್ & ಇನ್ನೊಬ್ಬರು ವಿರುದ್ಧ ದೆಹಲಿ ಎನ್‌ಸಿಟಿ ರಾಜ್ಯ ಮತ್ತು ಇತರರು,* ಸುಪ್ರೀಂ ಕೋರ್ಟ್ ಕ್ರಿಮಿನಲ್ ಅಪೀಲ್ 2017ರ ಸಂಖ್ಯೆ 607–610

- ಒಂದು ಕ್ರಿಮಿನಲ್ ಅಪರಾಧ ನಡೆದ ನಂತರ ಎಷ್ಟು ಸಾಧ್ಯವಿದೆಯೋ ಅಷ್ಟು ಬೇಗನೆ (ನಡೆದ ತತ್‌ಕ್ಷಣವೇ) ಒಂದು ಪ್ರಥಮ ಮಾಹಿತಿ ವರದಿ (ಎಫ್‌ಐಆರ್)ಯನ್ನು ಪೊಲೀಸರೊಂದಿಗೆ ದಾಖಲಿಸುವುದು ಅಗತ್ಯವಾಗಿರುವಾಗ, ಎಫ್‌ಐಆರ್ ದಾಖಲಿಸುವಲ್ಲಿ ಆಗುವ ವಿಳಂಬಗಳು ದೂರನ್ನು ದುರ್ಬಲಗೊಳಿಸಬಾರದು ಅಥವಾ ವಿಳಂಬವನ್ನು ಸಮರ್ಥಿಸಿಕೊಳ್ಳಲು ಏನಾದರೂ ಒಳ್ಳೆಯ ಕಾರಣಗಳು ಇವೆಯೇ ಎಂದು ಅನುಮಾನವನ್ನು ಹುಟ್ಟುಹಾಕಬಾರದು.
- ಎಫ್‌ಐಆರ್ ಅನ್ನು ಅನಗತ್ಯ ವಿಳಂಬದ ನಂತರ ದಾಖಲಿಸಲಾಗಿದೆಯೇ ಎಂದು ನಿರ್ಧರಿಸುವಲ್ಲಿ ಒಂದು ಸಾಮಾನ್ಯ ಜ್ಞಾನದ ದೃಷ್ಟಿಕೋನದಿಂದ ನೋಡಬೇಕು.
- ಸಂತ್ರಸ್ತರು ಗಂಭೀರವಾಗಿ ಗಾಯಗೊಂಡಿದ್ದರೆ, ಎಫ್‌ಐಆರ್ ದಾಖಲಿಸುವ ಮೊದಲು ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವುದು ಘಟನೆಯ ಸ್ವಾಭಾವಿಕ ರೀತಿಯಾಗಿರುತ್ತದೆ. ಇದನ್ನು ಎಫ್‌ಐಆರ್ ದಾಖಲಿಸುವಲ್ಲಿ ಆದ ವಿಳಂಬವೆಂದು ಪರಿಗಣಿಸಲಾಗದು.

## 2. ಎಫ್‌ಐಆರ್‌ನ ಅಂಶಗಳು

*ಮುಖೇಶ್ & ಇನ್ನೊಬ್ಬರು ವಿರುದ್ಧ ದೆಹಲಿ ಎನ್‌ಸಿಟಿ ರಾಜ್ಯ ಮತ್ತು ಇತರರು,* ಸುಪ್ರೀಂಕೋರ್ಟ್ ಕ್ರಿಮಿನಲ್ ಅಪೀಲ್ ಸಂಖ್ಯೆ 2017ರ 607–610, ಸುಪ್ರೀಂಕೋರ್ಟ್ ಕ್ರಿಮಿನಲ್ ಮೇಲ್ಮನವಿ 2017ರ ಸಂಖ್ಯೆ 609–610

- ಎಫ್‌ಐಆರ್ 'ಸತ್ಯಾಂಶಗಳ ಒಂದು ಎನ್‌ಸೈಕ್ಲೋಪೀಡಿಯಾ" ಆಗಿರುವ ಅಗತ್ಯವಿಲ್ಲ. ಎಫ್‌ಐಆರ್ ನಡೆದಿರುವ ಘಟನೆಗಳ ಒಂದು ಸಾಮಾನ್ಯ ವಿವರಣೆಯನ್ನು ಹೊಂದಿರಬೇಕು, ಆದರೆ ಏನು ನಡೆಯಿತು ಎಂಬ ಪ್ರತಿಯೊಂದೂ ವಿವರಗಳ ಕಾಲಾನುಕ್ರಮತೆಯಾಗಿರಬೇಕು ಎಂದಾಗಲೀ ಅಥವಾ ನಡೆದಿರುವ ಘಟನೆಗಳ ಒಂದು ಸಮಗ್ರ ಪಟ್ಟಿಯನ್ನೇ ಹೊಂದಿರಬೇಕು ಎಂದಾಗಲೀ ನಿರೀಕ್ಷಿಸಲಾಗದು.
- ಎಫ್‌ಐಆರ್ ದಾಖಲಿಸುವ ವ್ಯಕ್ತಿ ಕೆಲವು ಮಾಹಿತಿಗಳನ್ನು ಮರೆತರೂ, ವಿಶಾಲ ಸತ್ಯಾಂಶಗಳನ್ನು ಹೊಂದಿರುವವರೆಗೆ ಅದು ಮೌಲಿಕವಾಗಿಯೇ ಉಳಿಯುತ್ತದೆ.
- ಎಫ್‌ಐಆರ್ ಕೆಲವು ಅಂಶಗಳನ್ನು ಕೈಬಿಟ್ಟಿದೆ ಎನ್ನುವ ಸಂಗತಿಯು ಅಂತಹ ಅಂಶಗಳು ನಡೆಯಲೇ ಇಲ್ಲ ಎಂದು ನಿರ್ಣಯಿಸುವುದಕ್ಕೆ ಆಧಾರವಲ್ಲ. ಕೈಬಿಟ್ಟ ಯಾವುದೇ ಅಂಶವು ನಡೆಯಲೇ ಇಲ್ಲ ಎಂಬುದನ್ನು ನಿರ್ಣಯಿಸಲು ಅದನ್ನು ಇನ್ನುಳಿದ ಬೇರೆ ಸಾಕ್ಷ್ಯಗಳ ಜೊತೆಯಲ್ಲಿ ಪರಿಗಣಿಸಬೇಕಿದೆ. (ರತನ್ ಸಿಂಗ್ ವಿರುದ್ಧ ಹಿಮಾಚಲ ಪ್ರದೇಶ ರಾಜ್ಯ (1997) 4 ಎಸ್‌ಸಿಸಿ 161 ಉಲ್ಲೇಖಿಸಿ)
- ಎಫ್‌ಐಆರ್‌ನಲ್ಲಿ ಆಪಾದಿತರನ್ನು ಹೆಸರಿಸುವುದನ್ನು ಮುಖ್ಯ ಎಂದು ಪರಿಗಣಿಸಬೇಕಿದೆ, ಆದರೆ ಅಪಾದಿತರನ್ನು ಗುರುತಿಸಲು ಅಥವಾ ಹೆಸರಿಸಲು ಸಾಧ್ಯವಾಗದೇ ಇರುವುದನ್ನು ಎಫ್‌ಐಆರ್‌ನ ಅಂಶಗಳನ್ನು ಅನುಮಾನಿಸಲು ಆಧಾರವಾಗುವುದಿಲ್ಲ, ಸಾಕ್ಷಿಯ ಹೇಳಿಕೆಯು ವಿಶ್ವಾಸಾರ್ಹವಾಗಿದೆ ಎಂದು ಕಂಡುಬಂದಾಗ ಹೀಗೆ ಅನುಮಾನಿಸಲಾಗದು.
- ಎಫ್‌ಐಆರ್ ದಾಖಲಿಸುವ ವ್ಯಕ್ತಿಯು ಎಫ್‌ಐಆರ್‌ನಲ್ಲಿ ಆಪಾದಿತರನ್ನು ಹೆಸರಿಸುವಲ್ಲಿ ವಿಫಲಗೊಂಡರೆ, ಈ ಅಂಶವೊಂದೇ ಆಪಾದಿತರು ಕೃತ್ಯದಲ್ಲಿ ಭಾಗಿಯಾಗಿಲ್ಲ ಎಂಬುದನ್ನು ಸಾಬೀತುಪಡಿಸುವುದಿಲ್ಲ. ಪೊಲೀಸರು ತನಿಖೆ ಮಾಡುವ ಮತ್ತು ಎಲ್ಲ ಸಾಕ್ಷ್ಯಗಳನ್ನು ಪರಿಗಣಿಸುವ ಅಗತ್ಯವಿದೆ: "ಕೇವಲ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾದ ಅಂಶಗಳ ಆಧಾರದ ಮೇಲೆಯೇ ಆಪಾದಿತ ವ್ಯಕ್ತಿಗಳು ಭಾಗಿಯಾಗಿದ್ದನ್ನು ನಿರ್ಧರಿಸಲಾಗದು"



[redacted]

**3. ಎಫ್‌ಐಆರ್‌ಗೆ ಸಂಬಂಧಿಸಿದಂತೆ ಪೊಲೀಸರ ಬಾಧ್ಯತೆಗಳು**

*ಹೇಮಂತ್ ಯಶವಂತ್ ಧಾಗೆ ವಿರುದ್ಧ ಮಹಾರಾಷ್ಟ್ರ ರಾಜ್ಯ ಮತ್ತು ಇತರರು*, ಸುಪ್ರೀಂಕೋರ್ಟ್ ಮೇಲ್ಮನವಿ 2016ರ ಸಂಖ್ಯೆ 110

- ವ್ಯಕ್ತಿಯೊಬ್ಬರು ಅಪರಾಧವೊಂದರ ಕುರಿತಾಗಿ ವರದಿ ಮಾಡಲು ಪೊಲೀಸ್ ಠಾಣೆಗೆ ಹೋದರೆ, ಎಫ್‌ಐಆರ್ ಅನ್ನು ದಾಖಲಿಸಿಕೊಳ್ಳುವುದು ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿರುತ್ತದೆ.
- ಪೊಲೀಸ್ ಠಾಣೆಯ ಉಸ್ತುವಾರಿಯಲ್ಲಿರುವ ಪೊಲೀಸ್ ಅಧಿಕಾರಿಯು ಸಂತ್ರಸ್ತರು ನೀಡಿದ ಮಾಹಿತಿಯನ್ನು ದಾಖಲಿಸಿಕೊಳ್ಳಲು ನಿರಾಕರಿಸಿದರೆ, ಸಂತ್ರಸ್ತರು ಪೊಲೀಸ್ ಸೂಪರಿಂಟೆಂಡೆಂಟ್ ಅವರಿಗೆ ಅಂಚೆಯ ಮೂಲಕ ಲಿಖಿತವಾಗಿ ತಿಳಿಸಬೇಕು. ಅಂತಹ ಮಾಹಿತಿಯು ಅಪರಾಧವೊಂದು ನಡೆದಿರುವುದನ್ನು ಬಹಿರಂಗಪಡಿಸುತ್ತದೆ ಎಂದು ಸೂಪರಿಂಟೆಂಡೆಂಟ್ ಅವರಿಗೆ ತೃಪ್ತಿಕರವಾಗಿ ಅನ್ನಿಸಿದರೆ, ಅವರು ಸ್ವತಃ ತಾವೆ ಪ್ರಕರಣವನ್ನು ತನಿಖೆ ಮಾಡಬೇಕು ಅಥವಾ ತನಿಖೆಯನ್ನು ಮಾಡುವಂತೆ ನಿರ್ದೇಶನ ನೀಡಬೇಕು. (ಅಪರಾಧ ಪ್ರಕ್ರಿಯೆ ಸಂಹಿತೆ, ಅನುಚ್ಛೇದ 154 [3]).
- ಒಂದು 'ವಿಚಾರಣಾರ್ಹ' ಅಪರಾಧದ ವರದಿಯ ತದನಂತರ ಎಫ್‌ಐಆರ್ ದಾಖಲಿಸಿಕೊಳ್ಳಲು ವಿಫಲಗೊಂಡಿದ್ದಕ್ಕೆ ಪೊಲೀಸ್ ಅಧಿಕಾರಿಯನ್ನು ವಿಚಾರಣೆಗೊಳಪಡಿಸಬಹುದು ಅಥವಾ ಶಿಸ್ತುಕ್ರಮ ಜರುಗಿಸಬಹುದು. ಇಲ್ಲಿ 'ವಿಚಾರಣಾರ್ಹ' ಅಪರಾಧ = ಐಪಿಸಿ ಅಧ್ಯಾಯ XVI ಮಹಿಳೆಯ ವಿರುದ್ಧ ದೈಹಿಕ ಅಥವಾ ಲೈಂಗಿಕ ಹಿಂಸೆಯ ಎಲ್ಲ ರೀತಿಯ ಅಪರಾಧಗಳು ಸೇರಿದಂತೆ *ಮನುಷ್ಯರ ದೇಹಕ್ಕೆ ಹಾನಿಯುಂಟು ಮಾಡುವ ಅಪರಾಧಗಳು* (ಭಾರತೀಯ ದಂಡ ಸಂಹಿತೆ, ಎಸ್.166ಎ)
- ಎಫ್‌ಐಆರ್ ದಾಖಲಿಸಿಕೊಳ್ಳುವ ಸಮಯದಲ್ಲಿ, ಅಪರಾಧವು ಆ ಪೊಲೀಸ್ ಠಾಣೆಯ ಕಾರ್ಯವ್ಯಾಪ್ತಿಯ ಹೊರಗಿನ ಪ್ರದೇಶದಲ್ಲಿ ನಡೆದಿದೆ ಎಂಬುದು ಸ್ಪಷ್ಟವಾದರೆ, ಪೊಲೀಸರು ಒಂದು 'ಶೂನ್ಯ/ಜೀರೋ' ಎಫ್‌ಐಆರ್ ದಾಖಲಿಸಿಕೊಳ್ಳಬೇಕು ಮತ್ತು ಎಫ್‌ಐಆರ್‌ಅನ್ನು ಅಪರಾಧ ಪ್ರಕ್ರಿಯೆ ಸಂಹಿತೆಯ ಎಸ್.170 ಅಡಿಯಲ್ಲಿ ಸೂಕ್ತವಾದ ಪೊಲೀಸ್ ಠಾಣೆಗೆ ವರ್ಗಾಯಿಸಬೇಕು. (*ಗೃಹ ಸಚಿವಾಲಯ ಸಲಹಾಸೂಚನೆ ಸಂಖ್ಯೆ 15011/35/2013–ಎಸ್.ಸಿ./ ಎಸ್.ಟಿ.–ಡಬ್ಲ್ಯು*)
- ಪೊಲೀಸ್ ಅಧಿಕಾರಿಗಳು ದಾಖಲಿಸಿಕೊಂಡ ಎಫ್‌ಐಆರ್‌ಗಳ ಪ್ರತಿಗಳನ್ನು ಪೊಲೀಸ್ ಅಂತರ್ಜಾಲ ಜಾಲತಾಣದಲ್ಲಿ (ಅಥವಾ ಆ ಪೊಲೀಸ್ ಪಡೆಯು ತನ್ನದೇ ಸ್ವಂತ ಜಾಲತಾಣವನ್ನು ಹೊಂದಿರದಿದ್ದಲ್ಲಿ, ರಾಜ್ಯ ಸರ್ಕಾರದ ಜಾಲತಾಣದಲ್ಲಿ) ಅಪ್‌ಲೋಡ್ ಮಾಡಬೇಕು; ಅಂತಹ ಎಫ್‌ಐಆರ್ ಸೂಕ್ಷ್ಮ ಮಾಹಿತಿಗಳನ್ನು ಅಂದರೆ ಉದಾಹರಣೆಗೆ ಮಕ್ಕಳಿಗೆ ಅಥವಾ ಭಯೋತ್ಪಾದನೆ ಸಮಸ್ಯೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಹೊಂದಿದ್ದರೆ, ಅವನ್ನು ಹೊರತುಪಡಿಸಿ ಅಪ್‌ಲೋಡ್ ಮಾಡಬೇಕು. (*ಯೂತ್ ಬಾರ್ ಅಸೋಸಿಯೇಶನ್ ಆಫ್ ಇಂಡಿಯಾ ವಿರುದ್ಧ ಕೇಂದ್ರ ಸರ್ಕಾರ* ಮತ್ತು ಇತರರು, ರಿಟ್ ಪೆಟಿಶನ್ (ಕ್ರಿಮಿನಲ್) 2016ರ ಸಂಖ್ಯೆ 68

**4. ಎಫ್‌ಐಆರ್‌ಗೆ ಸಂಬಂಧಿಸಿದಂತೆ ಆಪಾದಿತರ ಹಕ್ಕುಗಳು**

*ಯೂತ್ ಬಾರ್ ಅಸೋಸಿಯೇಶನ್ ಆಫ್ ಇಂಡಿಯಾ ವಿರುದ್ಧ ಕೇಂದ್ರ ಸರ್ಕಾರ* ಮತ್ತು ಇತರರು, ರಿಟ್ ಪೆಟಿಶನ್ (ಕ್ರಿಮಿನಲ್) 2016ರ ಸಂಖ್ಯೆ 68

- ಆಪಾದಿತರಿಗೆ ಎಫ್‌ಐಆರ್‌ನ ಒಂದು ಪ್ರತಿಯನ್ನು ಪಡೆದುಕೊಳ್ಳುವ ಹಕ್ಕು ಇದೆ (ಅವರು ಪೊಲೀಸರಿಗೆ ಅಥವಾ ಮ್ಯಾಜಿಸ್ಟ್ರೇಟರಿಗೆ ಕೇಳಿಕೊಂಡು ಪಡೆಯಬಹುದು)



[redacted]

# ಸಂತ್ರಸ್ತರ ಮತ್ತು ಸಾಕ್ಷಿಗಳ ಹೇಳಿಕೆಗಳು

# ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–2017

## 1. ಸಂತ್ರಸ್ತರು ಮತ್ತು ಸಾಕ್ಷಿಗಳ ಹೇಳಿಕೆಗಳ ವಿಶ್ವಾಸಾರ್ಹತೆ

- ಸಂತ್ರಸ್ತರು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ವಿಶ್ವಾಸಾರ್ಹ ಸಾಕ್ಷಿ ಎಂದು ಪರಿಗಣಿಸಲು ಅವು ಸಂಪೂರ್ಣವಾಗಿ ಸಮಂಜಸವಾಗಿ ಇರಲೇಬೇಕು ಎಂದೇನಿಲ್ಲ. ಕೆಲವೊಂದು ಅಸಮಂಜಸತೆ ಇದೆ ಎಂಬ ಒಂದೇ ಅಂಶವು ಮರಾವೆಯನ್ನು ದುರ್ಬಲಗೊಳಿಸುವುದಿಲ್ಲ ಅಥವಾ ಸಾಕ್ಷಿಯ ಹೇಳಿಕೆಯನ್ನು ಅವಿಶ್ವಾಸಾರ್ಹಗೊಳಿಸುವುದಿಲ್ಲ. "ಸಾಕ್ಷಿಯು ಘಟನೆಯ ಚಿತ್ರವತ್ತಾದ ಪರಿಪೂರ್ಣ ವರದಿಯನ್ನು ನೀಡುತ್ತಾರೆ ಎಂದು ನಿರೀಕ್ಷಿಸುವುದು ಅತಾರ್ಕಿಕವಾಗುತ್ತದೆ ಮತ್ತು ಅವರ ಹೇಳಿಕೆಯಲ್ಲಿರುವ ಚಿಕ್ಕಪುಟ್ಟ ಅಸಾಂಗತ್ಯ ಅಥವಾ ವ್ಯತ್ಯಾಸಗಳನ್ನು ನಿರ್ಲಕ್ಷಿಸಬೇಕು" (*ಫಜರ್ ಅಲಿ ಮತ್ತು ಇತರರ ವಿರುದ್ಧ ಅಸ್ಸಾಂ ರಾಜ್ಯ*, ಸುಪ್ರೀಂ ಕೋರ್ಟ್ 21 ಏಪ್ರಿಲ್ 2017, ಕ್ರಿಮಿನಲ್ ಮೇಲ್ಮನವಿ 2007ರ ಸಂಖ್ಯೆ 1062, *ಚಂದ್ರಪ್ಪ ಮತ್ತು ಇತರರ ವಿರುದ್ಧ ಕರ್ನಾಟಕ ರಾಜ್ಯ* (2008) 11 ಎಸ್‌ಸಿಸಿ 328 ಅನ್ನು ಉಲ್ಲೇಖಿಸಿ). ಉದಾಹರಣೆಗೆ, ಪ್ರತೀ ಸಂತ್ರಸ್ತರಿಗೆ ಆಗಿರುವ ಗಾಯಗಳ ಪರಿಪೂರ್ಣ ವರದಿಯನ್ನು ಸಾಕ್ಷಿಯು ನೀಡಬೇಕೆಂದು ನಿರೀಕ್ಷಿಸುವುದು ಅತಾರ್ಕಿಕ, ವಿಶೇಷವಾಗಿ ವಿವಿಧ ಬಗೆಯ ಆಯುಧಗಳಿಂದ ಸಜ್ಜಿತರಾದ ಹಲವಾರು ದುಷ್ಕರ್ಮಿಗಳು ಉಂಟು ಮಾಡಿದ ಗಾಯಗಳು ಎಂಬುದನ್ನು ಮರಾವೆಗಳು ನಿರೂಪಿಸುವಾಗ. (*ಫಜರ್ ಅಲಿ ಮತ್ತು ಇತರರ ವಿರುದ್ಧ ಅಸ್ಸಾಂ ರಾಜ್ಯ*, ಸುಪ್ರೀಂ ಕೋರ್ಟ್ 21 ಏಪ್ರಿಲ್ 2017, ಕ್ರಿಮಿನಲ್ ಮೇಲ್ಮನವಿ 2007ರ ಸಂಖ್ಯೆ 1062)
- ಕ್ಷುಲ್ಲಕ ವಿಚಾರಗಳಲ್ಲಿ ಅಲ್ಪಸ್ವಲ್ಪ ಅಸಾಂಗತ್ಯವು ಪ್ರಕರಣದ ನ್ಯಾಯಾಂಗ ವಿಚಾರಣೆಯ ಮಹತ್ವದ ಭಾಗದ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ಮರಾವೆಯನ್ನು ಅದರ ಪೂರ್ಣತೆಯಲ್ಲಿ ತಿರಸ್ಕರಿಸಲು ನ್ಯಾಯಾಲಯಕ್ಕೆ ಪ್ರಚೋದಿಸುವುದಿಲ್ಲ. (*ಮುಖೇಶ್ ಮತ್ತು ಬೇರೊಬ್ಬರ ವಿರುದ್ಧ ದೆಹಲಿ ಎನ್‌ಸಿಟಿ ರಾಜ್ಯ* ಮತ್ತು ಇತರರು, ಸುಪ್ರೀಂ ಕೋರ್ಟ್ ಕ್ರಿಮಿನಲ್ ಮೇಲ್ಮನವಿ 2017ರ ಸಂಖ್ಯೆ 507–6010; *ಪೊಲೀಸ್ ಇನ್ಸ್‌ಪೆಕ್ಟರ್ ಅವರಿಂದ ಪ್ರತಿನಿಧಿತವಾದ ರಾಜ್ಯ ವಿರುದ್ಧ ಸರವಣನ್* ಮತ್ತು ಇನ್ನೊಬ್ಬರು, (2008) ಎಸ್‌ಸಿಸಿ 588, ಇದನ್ನು ಉಲ್ಲೇಖಿಸಿ)
- ಹಲವಾರು ಸಾಕ್ಷಿಗಳು ಅಥವಾ ಸಂತ್ರಸ್ತರು ಅಲ್ಪಸ್ವಲ್ಪ ವ್ಯತ್ಯಾಸವಿರುವ, ಒಂದೇ ಬಗೆಯ ಹೇಳಿಕೆಗಳನ್ನು ನೀಡಿದರೆ, ನ್ಯಾಯಾಲಯವು ಎಲ್ಲ ಹೇಳಿಕೆಗಳಲ್ಲಿ ಉಲ್ಲೇಖಿತಗೊಂಡ ಮುಖ್ಯವಾದ ಘಟನೆಗಳ ಮೇಲೆ ಗಮನ ಕೇಂದ್ರೀಕರಿಸಬೇಕು ಮತ್ತು ಚಿಕ್ಕಪುಟ್ಟ ವ್ಯತ್ಯಾಸಗಳನ್ನು ನಿರ್ಲಕ್ಷಿಸಬೇಕು (*ಮುಖೇಶ್ ಮತ್ತು ಬೇರೊಬ್ಬರ ವಿರುದ್ಧ ದೆಹಲಿ ಎನ್‌ಸಿಟಿ ರಾಜ್ಯ* ಮತ್ತು ಇತರರು, ಸುಪ್ರೀಂ ಕೋರ್ಟ್ ಕ್ರಿಮಿನಲ್ ಮೇಲ್ಮನವಿ 2017ರ ಸಂಖ್ಯೆ 607–610).
- ಸಾಕ್ಷಿಗಳು ಮತ್ತು ಸಂತ್ರಸ್ತರ ಹೇಳಿಕೆಗಳು ವೈದ್ಯಕೀಯ ಸಾಕ್ಷ್ಯಗಳಿಗೆ ವಿರೋಧವಾಗಿದ್ದಂತೆ ಇದ್ದರೂ, ಅವು ಅಂಗೀಕಾರ್ಹ ಮತ್ತು ವಿಶ್ವಾಸಾರ್ಹ (*ಮುಖೇಶ್ ಮತ್ತು ಬೇರೊಬ್ಬರ ವಿರುದ್ಧ ದೆಹಲಿ ಎನ್‌ಸಿಟಿ ರಾಜ್ಯ* ಮತ್ತು ಇತರರು, ಸುಪ್ರೀಂ ಕೋರ್ಟ್ ಕ್ರಿಮಿನಲ್ ಮೇಲ್ಮನವಿ 2017ರ ಸಂಖ್ಯೆ 607–610, ಮೋಹನ್ ಸಿಂಗ್ ಮತ್ತು ಇನ್ನೊಬ್ಬರು ವಿರುದ್ಧ ಮಧ್ಯ ಪ್ರದೇಶ ರಾಜ್ಯ (1999) 2 ಎಸ್‌ಸಿಸಿ 428, ಈ ಪ್ರಕರಣವನ್ನು ಉಲ್ಲೇಖಿಸುತ್ತ).

## 2. ಗಾಯಗೊಂಡ ಸಾಕ್ಷಿಯ ಹೇಳಿಕೆ

*ಮುಖೇಶ್ ಮತ್ತು ಬೇರೊಬ್ಬರ ವಿರುದ್ಧ ದೆಹಲಿ ಎನ್‌ಸಿಟಿ ರಾಜ್ಯ* ಮತ್ತು ಇತರರು, ಸುಪ್ರೀಂ ಕೋರ್ಟ್ ಕ್ರಿಮಿನಲ್ ಮೇಲ್ಮನವಿ 2017ರ ಸಂಖ್ಯೆ 607–610

- ಗಾಯಗೊಂಡ ಸಾಕ್ಷಿಯ ಹೇಳಿಕೆಗೆ (ಉದಾಹರಣೆಗೆ ದೈಹಿಕ ಅಥವಾ ಲೈಂಗಿಕ ಹಿಂಸೆಯ ಸಂತ್ರಸ್ತರು) ವಿಶೇಷ ಸ್ಥಾನಮಾನ ನೀಡಬೇಕು: ಸಾಕ್ಷಿಗೆ ಆಗಿರುವ ಗಾಯವು "ಅಪರಾಧದ ಆ ದೃಶ್ಯದ ಒಳಗೇ ಖಾತರಿಯಾದ



[redacted]

(ಆಕೆಯ) ಇರುವಿಕೆಯನ್ನು ತೋರಿಸುತ್ತದೆ ಮತ್ತು ಸಾಕ್ಷಿಯು ತನ್ನ ನಿಜವಾದ ಆಕ್ರಮಣಕಾರ ಶಿಕ್ಷೆಯಾಗದೇ ಹೋಗಿ, ಅಪರಾಧವನ್ನು ಎಸಗಿದ್ದಕ್ಕೆ ಮೂರನೇ ಪಾರ್ಟಿ ಅಥವಾ ಪಕ್ಷವನ್ನು ತಪ್ಪಾಗಿ ಸೂಚಿಸುವುದನ್ನು ಎಳ್ಳಷ್ಟೂ ಇಷ್ಟಪಡುವುದಿಲ್ಲ"

- ಗಾಯಗೊಂಡ ಸಾಕ್ಷಿಗಳ ಪುರಾವೆಗಳ ಮೇಲೆ ನಂಬಿಕೆ ಇಡಬಹುದು; ಮಹತ್ವದ ವಿರೋಧಾಭಾಸಗಳು ಮತ್ತು ಅಸಾಂಗತ್ಯಗಳ ಆಧಾರದ ಮೇಲೆ ಆಕೆಯ ಪುರಾವೆಗಳನ್ನು ತಿರಸ್ಕರಿಸಲು ಬಲವಾದ ನೆಲೆ ಇದೆ ಎಂಬುದನ್ನು ಹೊರತುಪಡಿಸಿದರೆ, ನಂಬಬಹುದು.
- ಸಂತ್ರಸ್ತೆಯು ಸಾಯುವ ಮೊದಲು ಸತ್ಯವಚನ ಹೇಳಿಕೆ ನೀಡಿದ್ದರೆ (ಮರಣ ಘೋಷಣೆ), ನ್ಯಾಯಾಲಯವು ಅದರ ಮೇಲೆ ನಂಬಿಕೆ ಇಡಬಹುದೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸಲು, ಯಾವ ಸನ್ನಿವೇಶಗಳಲ್ಲಿ ಹೇಳಿಕೆಯನ್ನು ಮಾಡಿದ್ದಾರೆ ಎಂಬುದನ್ನು ವಿಶ್ಲೇಷಣೆ ಮಾಡುತ್ತದೆ. ಮರಣ ಘೋಷಣೆಗಳು ಮೌಖಿಕವಾಗಿ ಹೇಳಿರಬಹುದು ಅಥವಾ ಬರೆದಿರಬಹುದು ಮತ್ತು ಯಾರದಾದರೂ ಮುಂದೆ ಮಾಡಿರಬಹುದು (ಅವರು ಅದನ್ನು ಪೊಲೀಸ್ ಅಧಿಕಾರಿ ಅಥವಾ ನ್ಯಾಯಾಲಯದ ಅಧಿಕಾರಿಗೆ ನೀಡುವ ಅಗತ್ಯವಿಲ್ಲ). ಆ ದೃಶ್ಯದಲ್ಲಿ ವೈದ್ಯರೊಬ್ಬರು ಹಾಜರಿದ್ದರೆ, ಸಂತ್ರಸ್ತೆಗೆ ತಾನೇನು ಮಾಡುತ್ತಿದ್ದೇನೆ ಎಂದು ಎಚ್ಚರವಿತ್ತೆ ಮತ್ತು ಸ್ಪುಟವಾದ ಮನಸ್ಸಿನಿಂದ ಇದ್ದರೇ ಎಂಬುದನ್ನು ಖಚಿತಪಡಿಸಬಲ್ಲರು *(ಲಕ್ಷ್ಮಣ್ ವಿರುದ್ಧ ಮಹಾರಾಷ್ಟ್ರ ರಾಜ್ಯ* (2002) 6 ಎಸ್‌ಸಿಸಿ 710, ಉಲ್ಲೇಖಿಸುತ್ತ).
- ಮರಣ ಘೋಷಣೆಯ ಸುತ್ತ ಇರುವ ಸನ್ನಿವೇಶಗಳು ಸತ್ಯವಾದವು ಮತ್ತು ವಿಶ್ವಾಸಾರ್ಹ ಎಂದು ನ್ಯಾಯಾಲಯವು ಕಂಡುಕೊಂಡರೆ, ನ್ಯಾಯಾಲಯವು ಆ ಘೋಷಣಾ ಹೇಳಿಕೆಯ ಆಧಾರದ ಮೇಲೆ, ಬೇರೆ ಇನ್ನಷ್ಟು ಪುರಾವೆಗಳ ಅಗತ್ಯವಿಲ್ಲದೆಯೇ, ಒಬ್ಬರನ್ನು ತಪ್ಪಿತಸ್ಥ ಎಂದು ಘೋಷಿಸಬಹುದು.

### 3. ಲೈಂಗಿಕ ಅಪರಾಧಗಳ ಸಂತ್ರಸ್ತರ ಹೇಳಿಕೆ

*ಮಂಜು ದೇವಿ ವಿರುದ್ಧ ಓಂಕಾರ್‌ಜಿತ್ ಸಿಂಗ್ ಅಹ್ಲುವಾಲಿಯ @ ಓಂಕಾರ್‌ಜಿತ್ ಸಿಂಗ್ & ಇತರರು, ಎಸ್‌ಸಿ ಕ್ರಿಮಿನಲ್ ಮೇಲ್ಮನವಿ 2017ರ ಸಂಖ್ಯೆ 570*

- ಲೈಂಗಿಕ ಅಪರಾಧಗಳ ಸಂತ್ರಸ್ತರ ಹೇಳಿಕೆಗೆ 'ಗಾಯಗೊಂಡ ಸಾಕ್ಷಿಯ' ಸ್ಥಾನಮಾನವನ್ನೇ ಕೊಡತಕ್ಕದ್ದು: ಸಂತ್ರಸ್ತೆಯ ಹೇಳಿಕೆಯು ಸತ್ಯವಲ್ಲ ಎಂದು ನ್ಯಾಯಾಲಯಕ್ಕೆ ಮನಗಾಣಿಸಲು ತುಂಬ ದೃಢ ನಂಬಿಕೆ ಹುಟ್ಟಿಸುವಂತಹ, ಮನವರಿಕೆಯಾಗುವಂತಹ ಪುರಾವೆಗಳು ಬೇಕಾಗುತ್ತವೆ.



[redacted]

# ದೌರ್ಜನ್ಯದಿಂದ ದಲಿತ ಮಹಿಳೆಯರ ರಕ್ಷಣೆ

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ 1989 & ಪಿಒಎ ತಿದ್ದುಪಡಿ ಕಾಯಿದೆ 2015

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ 1989 (ಪಿಒಎ), ಈ ಕಾಯಿದೆಯನ್ನು ಪ.ಜಾ. ಮತ್ತು ಪ.ಪಂ.ಗಳ ಸಾಮಾಜಿಕ – ಆರ್ಥಿಕ ಸ್ಥಿತಿಗತಿಗಳನ್ನು ಮತ್ತು ಸ್ಥಾನಮಾನಗಳನ್ನು ಉತ್ತಮಪಡಿಸಲು ಹಿಂದಿನ ಸರ್ಕಾರಗಳ ಕ್ರಮಗಳು ವಿಫಲವಾಗಿವೆ ಎಂಬುದನ್ನು ಗುರುತಿಸುತ್ತ, ಪ್ರತಿದಿನ ಅವರ ಮೇಲಾಗುತ್ತಿರುವ ಹೆಚ್ಚಿನ ಪ್ರಮಾಣದ ಕಿರುಕುಳ ಮತ್ತು ಹಿಂಸೆಯನ್ನು ಎದುರಿಸಲು ಜಾರಿಗೆ ತರಲಾಗಿದೆ.

2. ಪಿಒಎ ಕಾಯಿದೆಯನ್ನು, 2016 ಜನವರಿ 26ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ ತಿದ್ದುಪಡಿ ಕಾಯಿದೆ 2015 (ಪಿಒಎ ತಿದ್ದುಪಡಿ ಕಾಯಿದೆ) ಮೂಲಕ ತಿದ್ದುಪಡಿ ಮಾಡಿ, ಬಲಗೊಳಿಸಲಾಗಿದೆ.

3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ ತಿದ್ದುಪಡಿ ನಿಯಮಗಳು 2016 (ಪಿಒಎ ನಿಯಮಗಳು 2016) 2016ರ ಏಪ್ರಿಲ್ 14ರಿಂದ ಜಾರಿಗೆ ಬಂದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ನಿಯಮಗಳು 1995ಅನ್ನು ಪಿಒಎ ನಿಯಮಗಳು 2016ರಲ್ಲಿ ತಿದ್ದುಪಡಿ ಮಾಡಿದ್ದು, ಇದು ಪಿಒಎ ಅಡಿಯಲ್ಲಿ ಅಪರಾಧಗಳ ತನಿಖೆ, ವಿಚಾರಣೆ ಹಾಗೂ ಮೇಲ್ವಿಚಾರಣೆಗೆ ನಿಯಮಗಳನ್ನು ಮತ್ತು ದೌರ್ಜನ್ಯದ ಸಂತ್ರಸ್ತರಿಗೆ ನೀಡಬೇಕಾದ ಪರಿಹಾರದ ಮೊತ್ತವನ್ನು ರೂಪಿಸಿದೆ.

**ಪ.ಜಾ. ಮತ್ತು ಪ.ಪಂ. ವಿರುದ್ಧ ಕ್ರಿಮಿನಲ್ ಅಪರಾಧಗಳ ವಿಸ್ತರಣೆ**

4. ಪಿಒಎ ತಿದ್ದುಪಡಿ ಕಾಯಿದೆ[1] ಪಿಒಎ ಎಸ್.3.ರ ಅಡಿಯಲ್ಲಿ ಬರುವ ಕ್ರಿಮಿನಲ್ ಅಪರಾಧಗಳ ವಿಧಗಳನ್ನು ವಿಸ್ತರಿಸಿದೆ. ಪ.ಜಾ. ಮತ್ತು ಪ.ಪಂ.ದ ಮಹಿಳೆಯರು ಮತ್ತು ಹುಡುಗಿಯರ ವಿರುದ್ಧ ಹಿಂಸೆಗೆ ಸಂಬಂಧಿಸಿದಂತೆ ಕ್ರಿಮಿನಲ್ ಅಪರಾಧಗಳು ಇವುಗಳನ್ನು ಒಳಗೊಳ್ಳುತ್ತವೆ:

1. ಪ.ಜಾ. ಮತ್ತು ಪ.ಪಂ.ದ ಸದಸ್ಯರ ಬೆತ್ತಲೆ ಅಥವಾ ಅರೆಬೆತ್ತಲೆ ಮೆರವಣಿಗೆ: ಪಿಒಎ ಎಸ್.3 (1)(ಡಿ);
2. ಪ.ಜಾ. ಮತ್ತು ಪ.ಪಂ.ದ ಸದಸ್ಯರ ಘನತೆಗೆ ಕುಂದು ಬರುವಂತಹ ಕ್ರಿಯೆಯನ್ನು ಬಲವಂತವಾಗಿ ನಡೆಸುವುದು, ಉದಾಹರಣೆಗೆ, ಬಟ್ಟೆ ತೆಗೆಸುವುದು, ಬಲವಂತವಾಗಿ ಕೂದಲು ಕತ್ತರಿಸುವುದು ಅಥವಾ ತಲೆ ಬೋಳಿಸುವುದು, ಮುಖಕ್ಕೆ ಅಥವಾ ದೇಹಕ್ಕೆ ಬಣ್ಣ ಹಚ್ಚುವುದು: ಎಸ್.3 (1)(ಇ);
3. ಪ.ಜಾ. ಮತ್ತು ಪ.ಪಂ.ದ ಮಹಿಳೆಯರನ್ನು ದೇವರಿಗೆ ಬಿಡುವುದು ಅಥವಾ ದೇವದಾಸಿ ಅಥವಾ ಇನ್ನಾವುದೇ ರೀತಿಯ ಪದ್ಧತಿಗಳನ್ನು ನಡೆಸುವುದು, ಉತ್ತೇಜಿಸುವುದು ಅಥವಾ ಅದಕ್ಕೆ ಆಸ್ಪದ ಕೊಡುವುದು: ಎಸ್.3 (1)(ಕೆ);
4. ಪ.ಜಾ. ಮತ್ತು ಪ.ಪಂ.ದ ಸದಸ್ಯರ ವಿರುದ್ಧ ಸುಳ್ಳು ದ್ವೇಷಭರಿತ ಅಥವಾ ಕೆರಳಿಸುವ ಹೇಳಿಕೆಗಳು, ಕ್ರಿಮಿನಲ್ ಅಥವಾ ಬೇರೆ ಕಾನೂನು ಕ್ರಮಗಳನ್ನು ಹೂಡುವುದು: ಎಸ್.3 (1)(ಪಿ);
5. ಪ.ಜಾ. ಮತ್ತು ಪ.ಪಂ.ದ ಸದಸ್ಯರನ್ನು ಸಾರ್ವಜನಿಕರ ಎದುರಿನಲ್ಲಿ ತೋಜೋವಧೆ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಉದ್ದೇಶಪೂರಿತವಾಗಿ ಅವಮಾನಿಸುವುದು ಅಥವಾ ಬೆದರಿಸುವುದು: ಎಸ್.3 (1)(ಆರ್);
6. ಪ.ಜಾ. ಮತ್ತು ಪ.ಪಂ.ದ ಸದಸ್ಯರನ್ನು ಸಾರ್ವಜನಿಕರ ಎದುರಿನಲ್ಲಿ ಜಾತಿಯ ಹೆಸರಿನಿಂದ ನಿಂದಿಸುವುದು: ಎಸ್.3 (1)(ಎಸ್);
7. ಪ.ಜಾ. ಮತ್ತು ಪ.ಪಂ.ದ ಸದಸ್ಯರ ವಿರುದ್ಧ ದ್ವೇಷದ ಅಥವಾ ದುರುದ್ದೇಶದ ಭಾವನೆಗಳನ್ನು ಉತ್ತೇಜಿಸಲು ಲಿಖಿತ ಅಥವಾ ಮಾತುಗಳು ಅಥವಾ ಚಿಹ್ನೆಗಳನ್ನು ಬಳಸುವುದು: ಎಸ್.3 (1)(ಯು);
8. ಪ.ಜಾ. ಮತ್ತು ಪ.ಪಂ.ದ ಮಹಿಳೆಯು ಪ.ಜಾ. ಮತ್ತು ಪ.ಪಂ.ಕ್ಕೆ ಸೇರಿದವರು ಎಂದು ತಿಳಿದೂ ಉದ್ದೇಶಪೂರಿತವಾಗಿ ಒಪ್ಪಿಗೆಯಿಲ್ಲದೇ ಮಾಡುವ ಲೈಂಗಿಕ ಲಕ್ಷಣದ ಸ್ಪರ್ಶ: ಎಸ್.3 (1)(ಡಬ್ಲ್ಯು)(i);
9. ಪ.ಜಾ. ಮತ್ತು ಪ.ಪಂ.ದ ಮಹಿಳೆಯು ಪ.ಜಾ. ಮತ್ತು ಪ.ಪಂ.ಕ್ಕೆ ಸೇರಿದವರು ಎಂದು ತಿಳಿದೂ ಅವರತ್ತ ಲೈಂಗಿಕ ಲಕ್ಷಣದ ಮಾತುಗಳು, ಕ್ರಿಯೆ ಅಥವಾ ಭಂಗಿಯನ್ನು ಮಾಡುವುದು: ಎಸ್.3 (1)(ಡಬ್ಲ್ಯು)(ii);
10. ಪ.ಜಾ. ಮತ್ತು ಪ.ಪಂ.ದ ಸದಸ್ಯರೊಬ್ಬರು ತಮ್ಮ ಮನೆ, ಊರು ಅಥವಾ ವಾಸದ ಸ್ಥಳವನ್ನು ಬಿಡಲು ಬಲವಂತ ಮಾಡುವುದು ಅಥವಾ ಬಿಡುವಂತೆ ಮಾಡುವುದು: ಎಸ್.3 (1)(ಝಡ್);

[1] POA Amendment Act, s.4.



[redacted]

11. ಪ.ಜಾ. ಮತ್ತು ಪ.ಪಂ.ದ ಸದಸ್ಯರೊಬ್ಬರು ಮಾಟಮಂತ್ರ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಅವರಿಗೆ ದೈಹಿಕ ಹಾನಿ ಮಾಡುವುದು ಅಥವಾ ಮಾನಸಿಕ ಕ್ಷೋಭೆ ಉಂಟು ಮಾಡುವುದು: ಎಸ್.3 (1)(ಝಡ್ ಬಿ);

**"ಸಾರ್ವಜನಿಕರ ಎದುರಿನಲ್ಲಿ" ಎನ್ನುವುದರ ವ್ಯಾಖ್ಯಾನ**

4.1 ಎಸ್(3)(ಆರ್) ಮತ್ತು ಎಸ್.3(1) ಅಪರಾಧಗಳು ಸಾರ್ವಜನಿಕರ ಎದುರಿನಲ್ಲಿ ನಡೆದಿರಬೇಕು. (i) ಸಾರ್ವಜನಿಕರಿಗೆ ಸುಲಭಲಭ್ಯವಿರುವ ಒಂದು ಸ್ಥಳದಲ್ಲಿ ಮತ್ತು (ii) ಸಾರ್ವಜನಿಕರ ಎದುರಿನಲ್ಲಿ ಅಪರಾಧವು ನಡೆದಿದೆ ಎಂದು ತೋರಿಸಲ್ಪಟ್ಟಿರಬೇಕು. ಎರಡೂ ಪಕ್ಷಗಳು ಘಟನೆಯು ಎಲ್ಲಿ ನಡೆಯಿತು ಎಂಬುದರ ಕುರಿತು ಸಹಮತ ಹೊಂದಿರದಿದ್ದಲ್ಲಿ, (ಉದಾಹರಣೆಗೆ ಒಂದು ಸಾರ್ವಜನಿಕ ಮನೆಯ ಒಳಗೆ ಅಥವಾ ಮನೆಯ ಗೇಟಿನ ಹೊರಭಾಗದಲ್ಲಿ), ಎಫ್‌ಐಆರ್‌ನಲ್ಲಿ ಎಸ್(3)(ಆರ್) ಅಥವಾ ಎಸ್.3(1)ರ ಅಡಿಯಲ್ಲಿ ಅಪರಾಧವನ್ನು ದಾಖಲಿಸಿಕೊಳ್ಳುವುದನ್ನು ತಡೆಯಲು ಇದನ್ನು ಬಳಸಿಕೊಳ್ಳುವಂತಿಲ್ಲ. *(ನಿಖಿಲ್ ಪ್ರಿಯದರ್ಶಿನಿ & ಮತ್ತಿತರರ ವಿರುದ್ಧ ಬಿಹಾರ ರಾಜ್ಯ ಕ್ರಿಮಿನಲ್ ಡಬ್ಲ್ಯುಜೆಸಿ ಸಂಖ್ಯೆ* 2017ರ ಎಸ್ 136 & 312, ಮಾರ್ಚ್ 30 2017)

**ಜಾತಿ ಅಥವಾ ಬುಡಕಟ್ಟು ಗುರುತಿನ ಅರಿವಿನ ಊಹೆ**

5. ದೌರ್ಜನ್ಯ ಎಸಗಿದ್ದಾರೆಂದು ಆಪಾದಿಸಲಾದ ವ್ಯಕ್ತಿಗೆ ಸಂತ್ರಸ್ತೆಯ ಅಥವಾ ಆಕೆಯ ಕುಟುಂಬದ ಕುರಿತು ವೈಯಕ್ತಿಕ ಅರಿವು ಇದ್ದಲ್ಲಿ, ಆಪಾದಿತರಿಗೆ ಸಂತ್ರಸ್ತರ ಜಾತಿ ಅಥವಾ ಬುಡಕಟ್ಟು ಅಸ್ಮಿತೆಯ ಕುರಿತು ಅರಿವಿತ್ತು ಎಂದು ನ್ಯಾಯಾಲಯವು ಭಾವಿಸುತ್ತದೆ. [2]

**ಗುಂಪು ಅಪರಾಧದ ಊಹೆ**

6. ವ್ಯಕ್ತಿಗಳ ಒಂದು ಗುಂಪು ಪಿಒಎ ಅಡಿಯಲ್ಲಿ ಅಪರಾಧವನ್ನು ಎಸಗಿದರೆ ಮತ್ತು ಅದು ಭೂಮಿ ಅಥವಾ ಇನ್ನಾವುದೇ ವಿಷಯಕ್ಕೆ ಸಂಧಿಸಿದಂತೆ ಈಗಾಗಲೇ ಇರುವ ವಿವಾದದ ಫಲವಾಗಿ ಅಥವಾ ನಂತರ ಎಸಗಿದ್ದಾರೆ ಎಂದು ರುಜುವಾತಾದರೆ, ಗುಂಪಿನ ಸಾಮಾನ್ಯ ಉದ್ದೇಶ ಅಥವಾ ಸಾಮಾನ್ಯ ಗುರಿಯನ್ನು ಸಾಧಿಸಲಿಕ್ಕಾಗಿ ಅಪರಾಧವನ್ನು ಎಸಗಲಾಗಿದೆ ಎಂದು ಭಾವಿಸಲಾಗುವುದು. [3]

**ಸಂತ್ರಸ್ತರ ಮತ್ತು ಸಾಕ್ಷಿಗಳ ರಕ್ಷಣೆ [4]**

7. ಸಂತ್ರಸ್ತರು ಎಂದರೆ ಪಿಒಎ ಅಡಿಯಲ್ಲಿ ಯಾವುದೇ ಅಪರಾಧವನ್ನು ಎಸಗಿದ ಪರಿಣಾಮವಾಗಿ ದೈಹಿಕ, ಮಾನಸಿಕ, ಭಾವನಾತ್ಮಕ ಅಥವಾ ಹಣಕಾಸಿನ ಹಾನಿ ಅಥವಾ ಆಸ್ತಿಗೆ ಹಾನಿಯನ್ನು ಅನುಭವಿಸಿದ ಪ.ಜಾ. ಅಥವಾ ಪ.ಪಂ.ದ ಯಾರೇ ಸದಸ್ಯರು ಎಂದರ್ಥ ಮತ್ತು ವ್ಯಕ್ತಿಯ ಸಂಬಂಧಿಗಳು, ಕಾನೂನಾತ್ಮಕ ಪಾಲಕರು ಮತ್ತು ಕಾನೂನಾತ್ಮಕ ಉತ್ತರಾಧಿಕಾರಿಗಳು ಇದರಲ್ಲಿ ಒಳಗೊಳ್ಳುತ್ತಾರೆ. [5]

8. ಸಾಕ್ಷಿ ಎಂದರೆ ಅಪರಾಧದ ಸತ್ಯಾಂಶಗಳು ಮತ್ತು ಸನ್ನಿವೇಶದ ಕುರಿತು ಅರಿವಿರುವ ಯಾವುದೇ ವ್ಯಕ್ತಿ ಅಥವಾ ಯಾವುದೇ ಅಪರಾಧದ ಕುರಿತ ಮಾಹಿತಿಯನ್ನು ಹೊಂದಿರುವ ಅಥವಾ ತನಿಖೆಗೆ ಅಥವಾ ವಿಚಾರಣೆಗೆ ಸಂಬಂಧಿಸಿದಂತೆ ಮಾಹಿತಿ ಇರುವ ಯಾರೇ ವ್ಯಕ್ತಿ ಮತ್ತು ತನಿಖೆ, ವಿಚಾರಣೆ ಅಥವಾ ನ್ಯಾಯಾಂಗ ವಿಚಾರಣೆಯ ಸಮಯದಲ್ಲಿ ಮಾಹಿತಿ ನೀಡಲು ಅಥವಾ ಹೇಳಿಕೆ ಕೊಡಲು ಅಥವಾ ತನಿಖೆಯ ಸಮಯದಲ್ಲಿ ಯಾವುದೇ ದಾಖಲೆಯನ್ನು ನೀಡಲು ಅಗತ್ಯವಿರುವ ವ್ಯಕ್ತಿ ಅಥವಾ ನೀಡಬೇಕಾಗಿರುವ ವ್ಯಕ್ತಿ. [6]

9. ರಾಜ್ಯದ ಸಂಸ್ಥೆಗಳು ಸಂತ್ರಸ್ತರು, ಅವರ ಅವಲಂಬಿತರು ಮತ್ತು ಸಾಕ್ಷಿಗಳನ್ನು ಯಾವುದೇ ರೀತಿಯ ಬೆದರಿಕೆ ಒಡ್ಡುವುದು, ಬಲಪ್ರಯೋಗ, ಪ್ರಲೋಭನೆ, ಹಿಂಸೆ ಅಥವಾ ಹಿಂಸೆಯ ಬೆದರಿಕೆ, ಇವುಗಳ ವಿರುದ್ಧ ರಕ್ಷಿಸಬೇಕು. [7]

[2] POA Amendment Act s.6(ii), amending s.8 of the POA 1989.
[3] POA s.8(b).
[4] POA Amendment Act s.11 inserting new s.15(1) in the POA.
[5] POA Amendment Act s.3 inserting a new s.2(1)(ec) into the POA 1989.
[6] POA Amendment Act s.3 inserting a new s.2(1)(ed) into the POA 1989.
[7] POA Amendment Act s.11 inserting a new s.15A into the POA 1989.



[redacted]

## ಸಂತ್ರಸ್ತರ ಹಕ್ಕುಗಳು

10. ಸಂತ್ರಸ್ತರು ಈ ಕೆಳಗಿನ ಹಕ್ಕುಗಳನ್ನು ಹೊಂದಿರುತ್ತಾರೆ:

ಎ) ನ್ಯಾಯೋಚಿತವಾಗಿ, ಗೌರವ ಮತ್ತು ಘನತೆಯಿಂದ ನಡೆಸಿಕೊಳ್ಳುವುದು. ಜೊತೆಗೆ ವಯಸ್ಸು, ಲಿಂಗ ಮತ್ತು ಶೈಕ್ಷಣಿಕ ಅವಕಾಶವಂಚಿತತೆಯನ್ನು ಅವಲಂಬಿಸಿ ವಿಶೇಷ ಅಗತ್ಯಗಳಿದ್ದರೆ ಅದನ್ನು ಪರಿಗಣಿಸಬೇಕು.[8]

ಬಿ) ನ್ಯಾಯಾಲಯದ ಕಾರ್ಯಕಲಾಪಗಳ ಕುರಿತ ಸಕಾರಣ, ನಿಖರ ಮತ್ತು ಸಕಾಲಿಕ ನೋಟೀಸ್.[9]

ಸಿ) ಕಕ್ಷಿದಾರರಿಗೆ ದಾಖಲೆಗಳು, ಸಾಮಗ್ರಿಗಳು, ಸಾಕ್ಷ್ಯಗಳನ್ನು ಒದಗಿಸಲು ಅಥವಾ ವಿಚಾರಣೆಯ ವೇಳೆ ಇರುವ ವ್ಯಕ್ತಿಗಳನ್ನು ಪರೀಕ್ಷಿಸಲು ವಿಶೇಷ ನ್ಯಾಯಾಲಯಕ್ಕೆ ಅಹವಾಲು ಸಲ್ಲಿಸುವುದು.[10]

ಡಿ) ನ್ಯಾಯಾಲಯಕ್ಕೆ ಜಾಮೀನು/ಬೇಲ್, ಖುಲಾಸೆ, ಬಿಡುಗಡೆ, ಪರೋಲ್, ತಪ್ಪೊಪ್ಪಿಗೆ ಅಥವಾ ಆಪಾದಿತರಿಗೆ ಶಿಕ್ಷೆ ಮತ್ತು ತಪ್ಪೊಪ್ಪಿಗೆ, ಬಿಡುಗಡೆ ಅಥವಾ ಶಿಕ್ಷೆ ಕುರಿತು ಲಿಖಿತ ಕಡತಗಳ ಸಲ್ಲಿಕೆ, ಈ ಎಲ್ಲದರ ಕುರಿತು ನ್ಯಾಯಾಲಯಕ್ಕೆ ಮೌಖಿಕ ಸಲ್ಲಿಕೆ ಮಾಡುವುದು.[11]

## ದೌರ್ಜನ್ಯದ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯ

11. ಪಿಓಎ ಅಡಿಯಲ್ಲಿರುವ ಪ್ರಕರಣಗಳನ್ನು ಎರಡು ತಿಂಗಳ ಒಳಗೆ ಬಗೆಹರಿಸಲು ಸಾಧ್ಯವಾಗುವಂತೆ ಅಗತ್ಯ ಸಂಖ್ಯೆಯ ವಿಶೇಷ ನ್ಯಾಯಾಲಯ ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ.[12]

12. ಸಂತ್ರಸ್ತರು, ಅವರ ಅವಲಂಬಿತರು ಅಥವಾ ಸಾಕ್ಷಿಗಳಿಗೆ ರಕ್ಷಣೆ ಒದಗಿಸಲು; ಪ್ರಯಾಣ ಮತ್ತು ನಿರ್ವಹಣೆ ವೆಚ್ಚಗಳನ್ನು ಭರಿಸಲು; ಸಾಮಾಜಿಕ–ಆರ್ಥಿಕ ಪುನರ್ವಸತಿ ಮತ್ತು ಸ್ಥಳಾಂತರ ವೆಚ್ಚಗಳನ್ನು ಒದಗಿಸಲು ವಿಶೇಷ ನ್ಯಾಯಾಲಯಗಳ ಅಗತ್ಯವಿದೆ.[13]

13. ಸಂತ್ರಸ್ತರು ಅಥವಾ ಸಾಕ್ಷಿಗಳು ನೀಡಿದ ಅರ್ಜಿಯ ಮೇರೆಗೆ, ವಿಶೇಷ ನ್ಯಾಯಾಲಯಗಳು ಸಾಕ್ಷಿಗಳ ಹೆಸರು ಮತ್ತು ವಿಳಾಸಗಳನ್ನು ಗೌಪ್ಯವಾಗಿರಿಸುವ ಹಾಗೂ ರಕ್ಷಣೆಯ ಆದೇಶಗಳನ್ನು ನೀಡುವ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ.[14]

## ಪೊಲೀಸರ ಕರ್ತವ್ಯಗಳು

14. ತನಿಖೆ ಮಾಡುತ್ತಿರುವ ಅಧಿಕಾರಿಯು (ಡೆಪ್ಯುಟಿ ಸೂಪರಿಂಟೆಂಡೆಂಟ್ ಅಥವಾ ಅದಕ್ಕೂ ಮೇಲಿನ ಹುದ್ದೆಯ ಅಧಿಕಾರಿ) ಪಿಓಎ ಅಡಿಯ ಅಪರಾಧದ ತನಿಖೆಯನ್ನು ಪೂರ್ಣಗೊಳಿಸಿ, ಸಂಬಂಧಿತ ಸೂಪರಿಂಟೆಂಡೆಂಟ್‌ಗೆ ವರದಿಯೊಂದನ್ನು ಸಲ್ಲಿಸಬೇಕು ಮತ್ತು ಪೊಲೀಸ್ ಠಾಣೆಯ ಉಸ್ತುವಾರಿಯ ಅಧಿಕಾರಿಯು ವಿಶೇಷ ನ್ಯಾಯಾಲಯಕ್ಕೆ 60 ದಿನಗಳಲ್ಲಿ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಬೇಕು.[15]

15. ಸಂತ್ರಸ್ತ, ಸಾಕ್ಷಿ ಅಥವಾ ಸುದ್ದಿದಾರರಿಗೆ ಯಾವುದೇ ರೀತಿಯ ಬೆದರಿಕೆ ಒಡ್ಡುವುದು, ಬಲಪ್ರಯೋಗ, ಪ್ರಲೋಭನೆ, ಹಿಂಸೆ ಅಥವಾ ಹಿಂಸೆಯ ಬೆದರಿಕೆ, ಇವುಗಳ ಕುರಿತ ದೂರನ್ನು ತನಿಖೆ ಮಾಡುತ್ತಿರುವ ಅಧಿಕಾರಿಯು ದಾಖಲಿಸಿಕೊಳ್ಳಬೇಕು ಮತ್ತು ದೂರಿನ ಹೇಳಿಕೆ ಕೊಡುವ ವ್ಯಕ್ತಿಗೆ ಎಫ್‌ಐಆರ್‌ನ ಒಂದು ಪ್ರತಿಯನ್ನು ಕೊಡಬೇಕು.[16]

---

[8] POA Amendment Act s.11, inserting new ss.15A(2) in the POA 1989.
[9] POA Amendment Act s.11, inserting new ss.15A(3) in the POA 1989.
[10] POA Amendment Act s.11, inserting new ss.15A(4) in the POA 1989.
[11] POA Amendment Act s.11, inserting new ss.15A(5) in the POA 1989.
[12] POA Amendment Act s.8, substituting a new s.14(2) in the POA 1989.
[13] POA Amendment Act s.11, inserting new ss.15A(6) in the POA 1989.
[14] POA Amendment Act s.11, inserting new ss.15A(8) in the POA 1989.
[15] POA Rules 2015, s.4 substituting a new rule 7(2) in the POA Rules 1995.
[16] POA Amendment Act s.11, substituting a new s.15A(9) in the POA 1989.



[redacted]

ಅಪರಾಧಗಳನ್ನು ದಾಖಲಿಸಿಕೊಂಡು, ತನಿಖೆ ಮಾಡಲು ವಿಫಲವಾಗಿದ್ದಕ್ಕೆ ಶಿಕ್ಷೆ

16. ಪಿಓಎ ಅಡಿಯಲ್ಲಿ ಎಸ್.ಸಿ. ಮತ್ತು ಎಸ್.ಟಿ.ಗಳ ವಿರುದ್ಧ ಅಪರಾಧಗಳನ್ನು ದಾಖಲಿಸಿ, ನೋಂದಣಿ ಮಾಡಿ, ತನಿಖೆ ಮಾಡಲು ಬೇಕೆಂದೇ ನಿರ್ಲಕ್ಷ್ಯ ತೋರಿದ ಪೊಲೀಸ್ ಅಧಿಕಾರಿಗೆ ಜೈಲು ಶಿಕ್ಷೆ ನೀಡಿ ಶಿಕ್ಷಿಸಬಹುದಾಗಿದೆ. [17]

17. ಪೊಲೀಸ್ ಅಧಿಕಾರಿಯು ಈ ಕೆಳಗಿನ ವಿಚಾರಗಳಲ್ಲಿ ವಿಫಲವಾದರೆ ಅವರಿಗೆ 6–12 ತಿಂಗಳುಗಳ ಜೈಲುಶಿಕ್ಷೆಯನ್ನು ನೀಡಬಹುದಾಗಿದೆ:

- ಎ) ದೌರ್ಜನ್ಯವೊಂದರ ಕುರಿತು ಲಿಖಿತ ಮತ್ತು ಸಹಿ ಮಾಡಿದ ದಾಖಲೆಯನ್ನು ಒದಗಿಸುವುದು;
- ಬಿ) ಪಿಓಎಯ ಸೂಕ್ತ ವಿಭಾಗಗಳ ಅಡಿಯಲ್ಲಿ ದೂರನ್ನು ಅಥವಾ ಎಫ್‌ಐಆರ್ ಅನ್ನು ದಾಖಲಿಸುವುದು;
- ಸಿ) ಘಟನೆಯನ್ನು ವರದಿ ಮಾಡಿದ ವ್ಯಕ್ತಿಗೆ ಎಫ್‌ಐಆರ್‌ನ ಪ್ರತಿಯನ್ನು ಒದಗಿಸುವುದು;
- ಡಿ) ಎಲ್ಲ ಸಂತ್ರಸ್ತರ ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳುವುದು; ಅಥವಾ
- ಇ) 60 ದಿನಗಳಲ್ಲಿಯೇ ತನಿಖೆ ಮಾಡಿ, ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿ ಸಲ್ಲಿಸುವುದು. [18]

ಸಂತ್ರಸ್ತರಿಗೆ ನೀಡಬೇಕಾದ ಪರಿಹಾರ:

18. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ (ದೌರ್ಜನ್ಯಗಳ ತಡೆ) ತಿದ್ದುಪಡಿ ಅಧಿನಿಯಮಗಳು 2016 (ಪಿಓಎ ಅಧಿನಿಯಮಗಳು 2016) ದೌರ್ಜನ್ಯದ ಸಂತ್ರಸ್ತರಿಗೆ ನೀಡಬೇಕಾದ ಪರಿಹಾರದ ಹಂತಗಳನ್ನು ರೂಪಿಸಿದೆ. ಅಧಿನಿಯಮಗಳು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಂತರ್ಜಾಲ ತಾಣದಲ್ಲಿ ಲಭ್ಯವಿವೆ.[19]

19. ಕೆಳಗಿನ ಪಟ್ಟಿಯು ಪಿಓಎ ನಿಯಮಗಳು 2016ರ ಅಡಿಯಲ್ಲಿ ವಿವಿಧ ಅಪರಾಧಗಳ ಸಂತ್ರಸ್ತರಿಗೆ ನೀಡಬೇಕಾದ ಪರಿಹಾರದ ಪ್ರಮಾಣವನ್ನು ಪಟ್ಟಿಮಾಡಿದೆ.

| ಪಿಓಎ ಅಥವಾ ಐಪಿಸಿ ಅಡಿಯಲ್ಲಿ ಅಪರಾಧ | ನೀಡಬೇಕಾದ ಪರಿಹಾರ |
|---|---|
| ಪಿಓಎ ಅಪರಾಧಗಳು | |
| ಎಸ್.3(1)(ಎ) ಎಸ್.ಸಿ. ಅಥವಾ ಎಸ್.ಟಿ. ವ್ಯಕ್ತಿಯ ಬಾಯಿಯಲ್ಲಿ ತಿನ್ನಬಾರದ ಅಥವಾ ಹೇಸಿಕೆಯ ವಸ್ತುವನ್ನು ತುರುಕುವುದು ಅಥವಾ ತಿನ್ನಬಾರದ ಅಥವಾ ಹೇಸಿಕೆಯ ವಸ್ತುವನ್ನು ತಿನ್ನಲು ಅಥವಾ ಕುಡಿಯಲು ಅವರಿಗೆ ಬಲವಂತ ಮಾಡುವುದು.<br><br>ಎಸ್.3(1)(ಎ) ಎಸ್.ಸಿ. ಅಥವಾ ಎಸ್.ಟಿ. ವ್ಯಕ್ತಿಗೆ ಚಪ್ಪಲಿಹಾರ ಹಾಕುವುದು ಅಥವಾ ಬೆತ್ತಲೆ ಅಥವಾ ಅರೆಬೆತ್ತಲೆ ಮೆರವಣಿಗೆ ಮಾಡುವುದು<br><br>ಎಸ್.3(1)(ಇ) ಪ.ಜಾ. ಮತ್ತು ಪ.ಪಂ.ದ ಸದಸ್ಯರ ಘನತೆಗೆ ಕುಂದು ಬರುವಂತಹ ಕೃತ್ಯವನ್ನು ಬಲವಂತವಾಗಿ ನಡೆಸುವುದು, ಉದಾಹರಣೆಗೆ, ಬಟ್ಟೆ ತೆಗೆಸುವುದು, ಬಲವಂತವಾಗಿ ಕೂದಲು ಕತ್ತರಿಸುವುದು ಅಥವಾ ತಲೆ ಬೋಳಿಸುವುದು, ಮುಖಕ್ಕೆ ಅಥವಾ ದೇಹಕ್ಕೆ ಬಣ್ಣ ಹಚ್ಚುವುದು ಅಥವಾ ಇನ್ನಾವುದೇ ಇದೇ ರೀತಿಯ ಕೃತ್ಯಗಳು | ಸಂತ್ರಸ್ತರಿಗೆ ಒಂದು ಲಕ್ಷ ರೂಪಾಯಿಗಳನ್ನು ಈ ಕೆಳಗಿನಂತೆ ಕೊಡಬೇಕು:<br>1. ಎಫ್‌ಐಆರ್ ವೇಳೆಗೆ 25%<br>2. ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>3. ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |

[17] POA Amendment Act s.5, substituting a new s.4 in the POA 1989.
[18] POA Amendment Act s.5, substituting a new s.4(2) in the POA 1989.
[19] At http://socialjustice.nic.in/ViewData/Details?mid=1242&catID=117



[redacted]

| | |
|---|---|
| ಎಸ್.3(1)(ಎಚ್) ಪ.ಜಾ. ಮತ್ತು ಪ.ಪಂ.ದ ವ್ಯಕ್ತಿಯೊಬ್ಬರನ್ನು ಕಡ್ಡಾಯ, ಬಲವಂತದ ಅಥವಾ ಜೀತದ ಆಳಾಗಿ ಮಾಡುವುದು<br>ಎಸ್.3(1)(ಕೆ) ಪ.ಜಾ. ಮತ್ತು ಪ.ಪಂ.ದ ಮಹಿಳೆಯರನ್ನು ದೇವರಿಗೆ ಬಿಡುವುದು ಅಥವಾ ದೇವದಾಸಿ ಅಥವಾ ಇನ್ನಾವುದೇ ಅದೇ ರೀತಿಯ ಪದ್ಧತಿಗಳನ್ನು ನಡೆಸುವುದು, ಉತ್ತೇಜಿಸುವುದು ಅಥವಾ ಅದಕ್ಕೆ ಆಸ್ಪದ ಕೊಡುವುದು | ಸಂತ್ರಸ್ತರಿಗೆ ಒಂದು ಲಕ್ಷ ರೂಪಾಯಿಗಳು:<br>(i) ಎಫ್ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಎಸ್.3 (1)(ಪಿ) ಪ.ಜಾ. ಮತ್ತು ಪ.ಪಂ.ದ ಸದಸ್ಯರ ವಿರುದ್ಧ ಸುಳ್ಳು ದ್ವೇಷಭರಿತ ಅಥವಾ ಕೆರಳಿಸುವ ಹೇಳಿಕೆಗಳು, ಕ್ರಿಮಿನಲ್ ಅಥವಾ ಬೇರೆ ಕಾನೂನು ಕ್ರಮಗಳನ್ನು ಹೂಡುವುದು | ಈ ಕೆಳಗಿನ ಎರಡರಲ್ಲಿ, ಕಡಿಮೆ ಇರುವ ಮೊತ್ತವನ್ನು ಕೊಡುವುದು:<br>ಎ. ಕಾನೂನು ಖರ್ಚುಗಳು ಮತ್ತು ಹಾನಿಗಳು<br>ಬಿ. ಈ ಕೆಳಗಿನಂತೆ ಸಂತ್ರಸ್ತರಿಗೆ 85,000 ರೂಪಾಯಿಗಳು:<br>(i) ಎಫ್ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಎಸ್.3(1)(ಕ್ಯು) ಪ.ಜಾ. ಮತ್ತು ಪ.ಪಂ.ದ ಸದಸ್ಯರಿಗೆ ಹಾನಿಯುಂಟು ಮಾಡಲು ತಮ್ಮ ಕಾನೂನುಬದ್ಧ ಅಧಿಕಾರವನ್ನು ಬಳಸುವ ಹಾಗೆ ಸುಳ್ಳು ಅಥವಾ ತುಚ್ಛ ಮಾಹಿತಿಯನ್ನು ಯಾರಾದರೂ ಸಾರ್ವಜನಿಕ ಅಧಿಕಾರಿಗೆ (ಉದಾ: ಪೊಲೀಸ್ ಅಧಿಕಾರಿ) ಕೊಡುವುದು | ಈ ಕೆಳಗಿನ ಎರಡರಲ್ಲಿ, ಕಡಿಮೆ ಇರುವ ಮೊತ್ತವನ್ನು ಕೊಡುವುದು:<br>ಎ. ಕಾನೂನು ಖರ್ಚುಗಳು ಮತ್ತು ಹಾನಿಗಳು.<br>ಬಿ. ಸಂತ್ರಸ್ತರಿಗೆ ಒಂದು ಲಕ್ಷ ರೂಪಾಯಿಗಳು:<br>(i) ಎಫ್ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಎಸ್.3(1)(ಆರ್) ಪ.ಜಾ. ಮತ್ತು ಪ.ಪಂ.ದ ಸದಸ್ಯರನ್ನು ಸಾರ್ವಜನಿಕರ ಎದುರಿನಲ್ಲಿ ತೇಜೋವಧೆ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಉದ್ದೇಶಪೂರಿತವಾಗಿ ಅವಮಾನಿಸುವುದು ಅಥವಾ ಬೆದರಿಸುವುದು<br>ಎಸ್.3 (1)(ಎಸ್) ಪ.ಜಾ. ಮತ್ತು ಪ.ಪಂ.ದ ಸದಸ್ಯರನ್ನು ಸಾರ್ವಜನಿಕರ ಎದುರಿನಲ್ಲಿ ಜಾತಿಯ ಹೆಸರಿನಿಂದ ನಿಂದಿಸುವುದು<br>ಎಸ್.3 (1)(ಯು) ಪ.ಜಾ. ಮತ್ತು ಪ.ಪಂ.ದ ಸದಸ್ಯರ ವಿರುದ್ಧ ದ್ವೇಷದ ಅಥವಾ ದುರುದ್ದೇಶದ ಭಾವನೆಗಳನ್ನು ಉತ್ತೇಜಿಸಲು ಲಿಖಿತ ಅಥವಾ ಮಾತುಗಳು ಅಥವಾ ಚಿಹ್ನೆಗಳನ್ನು ಬಳಸುವುದು | ಸಂತ್ರಸ್ತರಿಗೆ ಒಂದು ಲಕ್ಷ ರೂಪಾಯಿಗಳು:<br>(i) ಎಫ್ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ಅನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಚಾರ್ಜ್‌ಶೀಟ್ ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |



[redacted]

| | |
|---|---|
| ಎಸ್.3 (1)(ಡಬ್ಲ್ಯು)(i) ಪ.ಜಾ. ಮತ್ತು ಪ.ಪಂ.ದ ಮಹಿಳೆಯು ಪ.ಜಾ. ಮತ್ತು ಪ.ಪಂ.ಕ್ಕೆ ಸೇರಿದವರು ಎಂದು ತಿಳಿದೂ ಉದ್ದೇಶಪೂರಿತವಾಗಿ ಒಪ್ಪಿಗೆಯಿಲ್ಲದೇ ಮಾಡುವ ಲೈಂಗಿಕ ಲಕ್ಷಣದ ಸ್ಪರ್ಶ<br>ಎಸ್.3 (1)(ಡಬ್ಲ್ಯು)(ii) ಪ.ಜಾ. ಮತ್ತು ಪ.ಪಂ.ದ ಮಹಿಳೆಯು ಪ.ಜಾ. ಮತ್ತು ಪ.ಪಂ.ಕ್ಕೆ ಸೇರಿದವರು ಎಂದು ತಿಳಿದೂ ಅವರತ್ತ ಲೈಂಗಿಕ ಲಕ್ಷಣದ ಮಾತುಗಳು, ಕ್ರಿಯೆ ಅಥವಾ ಭಂಗಿಯನ್ನು ಮಾಡುವುದು | ಸಂತ್ರಸ್ತರಿಗೆ ಎರಡು ಲಕ್ಷ ರೂಪಾಯಿಗಳು:<br>(i) ಎಫ್‌ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಎಸ್.3 (1)(ಝಡ್ ಬಿ) ಪ.ಜಾ. ಮತ್ತು ಪ.ಪಂ.ದ ಸದಸ್ಯರೊಬ್ಬರು ಮಾಟಮಂತ್ರ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಅವರಿಗೆ ದೈಹಿಕ ಹಾನಿ ಮಾಡುವುದು ಅಥವಾ ಮಾನಸಿಕ ಕ್ಷೋಭೆ ಉಂಟು ಮಾಡುವುದು | ತೋಜೋವಧೆ, ಅವಮಾನ, ಗಾಯ ಮತ್ತು ಮಾನಹಾನಿ ಅನುಭವಿಸಿದ ಸಂತ್ರಸ್ತರಿಗೆ ಒಂದು ಲಕ್ಷ ರೂಪಾಯಿ:<br>(i) ಎಫ್‌ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಎಸ್.3 (1)(ಝಡ್) ಪ.ಜಾ. ಮತ್ತು ಪ.ಪಂ.ದ ಸದಸ್ಯರೊಬ್ಬರು ತಮ್ಮ ಮನೆ, ಊರು ಅಥವಾ ವಾಸದ ಸ್ಥಳವನ್ನು ಬಿಡಲು ಬಲವಂತ ಮಾಡುವುದು ಅಥವಾ ಬಿಡುವಂತೆ ಮಾಡುವುದು | ಸೈಟ್ ಅನ್ನು ಸ್ವಾಧೀನಕ್ಕೆ ಕೊಡುವುದು ಅಥವಾ ಮನೆಯಲ್ಲಿ. ಹಳ್ಳಿಯಲ್ಲಿ ಅಥವಾ ಬೇರೆ ವಾಸದ ಸ್ಥಳದಲ್ಲಿ ವಾಸಿಸುವ ಹಕ್ಕು ಮತ್ತು ಸರ್ಕಾರಿ ವೆಚ್ಚದಲ್ಲಿ ಮನೆಯ (ನಾಶಮಾಡಿದ್ದಲ್ಲಿ) ಪುನರ್ನಿರ್ಮಾಣ<br>+ ಸಂತ್ರಸ್ತರಿಗೆ ಒಂದು ಲಕ್ಷ ರೂಪಾಯಿ:<br>(i) ಎಫ್‌ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಪಿಓಎ ಎಸ್3(2)(ವಿಎ) ಶೆಡ್ಯೂಲ್‌ನಲ್ಲಿ ಪಟ್ಟಿ ಮಾಡಿದ ಐಪಿಸಿ ಅಪರಾಧಗಳು | |
| ಐಪಿಸಿ ಎಸ್.326ಬಿ ಆಸಿಡ್ ಅನ್ನು ಸ್ವಯಂಪ್ರೇರಿತವಾಗಿ ಹಾಕುವುದು ಅಥವಾ ಹಾಕಲು ಪ್ರಯತ್ನಿಸುವುದು | 85,000 ರೂಪಾಯಿಯಿಂದ 8 ಲಕ್ಷದವರೆಗೆ ಮತ್ತು 25,000 ರೂಪಾಯಿಗಳನ್ನು ಈ ಕೆಳಗಿನಂತೆ ಕೊಡಬೇಕು:<br>(i) ಎಫ್‌ಐಆರ್ ಸಮಯದಲ್ಲಿ 50%<br>(ii) ವೈದ್ಯಕೀಯ ವರದಿಯು ಬಂದ ನಂತರ 50%<br><br>ಸುಟ್ಟಿದ್ದರ ಪ್ರಮಾಣವನ್ನು ಅವಲಂಬಿಸಿ ಪರಿಹಾರವು ವ್ಯತ್ಯಾಸವಾಗುತ್ತದೆ.<br>ಪಿಓಎ ಅಧಿನಿಯಮಗಳು, 2016 ಇದರ ಅಡಿಯಲ್ಲಿ ರಾಜ್ಯ ಸರ್ಕಾರವು ಸಂತ್ರಸ್ತರ ಚಿಕಿತ್ಸೆಯ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಅಗತ್ಯವಿದೆ. |

| | |
|---|---|
| ಐಪಿಸಿ ಎಸ್354 ಮಹಿಳೆಯ ಘನತೆಗೆ ಕುಂದು ತರುವ ಉದ್ದೇಶದಿಂದ ಆಕೆಯ ವಿರುದ್ಧ ಹಲ್ಲೆ ಅಥವಾ ಕ್ರಿಮಿನಲ್ ಬಲ ಪ್ರಯೋಗ<br>ಐಪಿಸಿ ಎಸ್345ಎ ಲೈಂಗಿಕ ದೌರ್ಜನ್ಯ<br>ಐಪಿಸಿ ಎಸ್345ಬಿ ಮಹಿಳೆಯನ್ನು ವಿವಸ್ತ್ರವಾಗಿಸುವ ಉದ್ದೇಶದಿಂದ ಆಕೆಯ ವಿರುದ್ಧ ಹಲ್ಲೆ ಅಥವಾ ಕ್ರಿಮಿನಲ್ ಬಲ ಪ್ರಯೋಗ | ಸಂತ್ರಸ್ತರಿಗೆ ಎರಡು ಲಕ್ಷ ರೂಪಾಯಿಗಳು:<br>(i) ಎಫ್ಐಆರ್ ವೇಳೆಗೆ 50%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 25%<br>(iii) ಇನ್ನುಳಿದ 25% ಅನ್ನು ವಿಚಾರಣೆಯ ತೀರ್ಮಾನದ ನಂತರ ಕೊಡಬೇಕು |
| ಐಪಿಸಿ ಎಸ್345ಸಿ ಲೈಂಗಿಕದರ್ಶನ ತೃಪ್ತಿ<br>ಐಪಿಸಿ ಎಸ್354ಡಿ ಕದ್ದು ಬೆನ್ನಟ್ಟಿ ಹೋಗುವುದು | ಸಂತ್ರಸ್ತರಿಗೆ ಎರಡು ಲಕ್ಷ ರೂಪಾಯಿಗಳು:<br>(i) ಎಫ್ಐಆರ್ ವೇಳೆಗೆ 10%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 40% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಐಪಿಸಿ ಎಸ್376ಬಿ ಪ್ರತ್ಯೇಕಗೊಳ್ಳುತ್ತಿರುವ/ವಿಚ್ಛೇದನಗೊಳ್ಳುತ್ತಿರುವ ಹೆಂಡತಿಯ ಮೇಲೆ ಗಂಡನಿಂದ ಲೈಂಗಿಕ ಕ್ರಿಯೆ | ಸಂತ್ರಸ್ತರಿಗೆ ಎರಡು ಲಕ್ಷ ರೂಪಾಯಿಗಳು:<br>(i) ವೈದ್ಯಕೀಯ ಪರೀಕ್ಷೆ ನಡೆದು, ದೃಢಪಡಿಸುವ ವೈದ್ಯಕೀಯ ವರದಿಯು ಬಂದ ನಂತರ 50%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 25%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| ಐಪಿಸಿ ಎಸ್376ಸಿ ಅಧಿಕಾರದಲ್ಲಿರುವ ವ್ಯಕ್ತಿಯಿಂದ ಅತ್ಯಾಚಾರ | ಸಂತ್ರಸ್ತರಿಗೆ ನಾಲ್ಕು ಲಕ್ಷ ರೂಪಾಯಿಗಳು:<br>(i) ವೈದ್ಯಕೀಯ ಪರೀಕ್ಷೆ ನಡೆದು, ದೃಢಪಡಿಸುವ ವೈದ್ಯಕೀಯ ವರದಿಯು ಬಂದ ನಂತರ 50%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 25%<br>(iii) ಇನ್ನುಳಿದ 25% ಅನ್ನು ನ್ಯಾಯಾಲಯ ವಿಚಾರಣೆಯು ಕೊನೆಗೊಳ್ಳುವಾಗ |
| ಐಪಿಸಿ ಎಸ್509 ಮಹಿಳೆಯ ಘನತೆಗೆ ಧಕ್ಕೆ ತರುವ ಉದ್ದೇಶದ ಪದಗಳ ಬಳಕೆ, ಭಂಗಿ/ನಿಲುವು, ಅಥವಾ ಅಂತಹ ಕ್ರಿಯೆ ಎಸಗುವುದು | ಸಂತ್ರಸ್ತರಿಗೆ ಎರಡು ಲಕ್ಷ ರೂಪಾಯಿಗಳು:<br>(i) ಎಫ್ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ಆರೋಪಿಯು ತಪ್ಪೊಪ್ಪಿಕೊಂಡಾಗ ಕೊಡಬೇಕು |
| **ಪಿಓಎ ಎಸ್3(2)(ವಿ)ರಲ್ಲಿ ಪಟ್ಟಿ ಮಾಡಿದ ಐಪಿಸಿ ಅಪರಾಧಗಳು** | |
| ಪಿಓಎ ಎಸ್.3(2): ಐಪಿಸಿ ಅಡಿಯಲ್ಲಿ 10+ ವರ್ಷಗಳ ಅವಧಿಯ ಜೈಲು ಶಿಕ್ಷೆ ವಿಧಿಸಬಹುದಾದ ಅಪರಾಧಗಳನ್ನು ಮಾಡುವುದು | ಸಂತ್ರಸ್ತರಿಗೆ ಮತ್ತು/ಅಥವಾ ಆಕೆಯ ಅವಲಂಬಿತರಿಗೆ (ಶೆಡ್ಯೂಲ್‌ನಲ್ಲಿ ನಿರ್ದಿಷ್ಟವಾಗಿ ಹೇಳದ ಹೊರತು) ನಾಲ್ಕು ಲಕ್ಷ ರೂಪಾಯಿಗಳು: |

| | |
|---|---|
| | (i) ಎಫ್‌ಐಆರ್ ವೇಳೆಗೆ 25%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 50%<br>(iii) ಇನ್ನುಳಿದ 25% ಅನ್ನು ನ್ಯಾಯಾಲಯ ವಿಚಾರಣೆಯು ಕೊನೆಗೊಳ್ಳುವಾಗ |
| ಐಪಿಸಿ ಎಸ್.375 ಅತ್ಯಾಚಾರ | ಸಂತ್ರಸ್ತರಿಗೆ ಐದು ಲಕ್ಷ ರೂಪಾಯಿಗಳು:<br>(i) ಎಫ್‌ಐಆರ್ ವೇಳೆಗೆ 50%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 25%<br>(iii) ಇನ್ನುಳಿದ 25% ಅನ್ನು ನ್ಯಾಯಾಲಯ ವಿಚಾರಣೆಯು ಕೊನೆಗೊಳ್ಳುವಾಗ |
| ಐಪಿಸಿ ಎಸ್.376 ಡಿ ಗುಂಪು ಅತ್ಯಾಚಾರ/ಗ್ಯಾಂಗ್ ರೇಪ್ | ಸಂತ್ರಸ್ತರಿಗೆ ಮತ್ತು/ಅಥವಾ ಆಕೆಯ ಅವಲಂಬಿತರಿಗೆ ಎಂಟು ಲಕ್ಷ, 25000 ರೂಪಾಯಿಗಳು:<br>(i) ವೈದ್ಯಕೀಯ ಪರೀಕ್ಷೆ ನಡೆದು, ದೃಢಪಡಿಸುವ ವೈದ್ಯಕೀಯ ವರದಿಯು ಬಂದ ನಂತರ 50%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದಾಗ 25% ಇನ್ನುಳಿದ 25% ಅನ್ನು ನ್ಯಾಯಾಲಯ ವಿಚಾರಣೆಯು ಕೊನೆಗೊಳ್ಳುವಾಗ |
| ಐಪಿಸಿ ಎಸ್.300 ಕೊಲೆ | ಸಂತ್ರಸ್ತರಿಗೆ ಮತ್ತು/ಅಥವಾ ಆಕೆಯ ಅವಲಂಬಿತರಿಗೆ ಎಂಟು ಲಕ್ಷ, 25000 ರೂಪಾಯಿಗಳು:<br>(i) ಪೋಸ್ಟ್ ಮಾರ್ಟಮ್ ವರದಿ ಬಂದ ನಂತರ 50%<br>(ii) ಚಾರ್ಜ್‌ಶೀಟ್ ಅಥವಾ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿದ ನಂತರ ಇನ್ನುಳಿದ 50% |
| ಕೊಲೆ, ಸಾವು, ಹತ್ಯಾಕಾಂಡ, ಅತ್ಯಾಚಾರ, ಗುಂಪು ಅತ್ಯಾಚಾರ/ಗ್ಯಾಂಗ್ ರೇಪ್, ಶಾಶ್ವತವಾಗಿ ಅಶಕ್ತಗೊಳಿಸುವುದು, ಡಕಾಯಿತಿ, ಇವುಗಳ ಸಂತ್ರಸ್ತರಿಗೆ ಹೆಚ್ಚುವರಿ ಪರಿಹಾರ | ಮೇಲೆ ಹೇಳಿದ ಪರಿಹಾರದ ಜೊತೆಗೆ, ಅಪರಾಧ ಜರುಗಿದ 3 ತಿಂಗಳ ಒಳಗಾಗಿ ಈ ಕೆಳಗಿನ ಪರಿಹಾರವನ್ನು ವ್ಯವಸ್ಥೆ ಮಾಡಬಹುದು:<br>ವಿಧವೆಗೆ ಅಥವಾ ತೀರಿಕೊಂಡ ವ್ಯಕ್ತಿಯ ಬೇರೆ ಅವಲಂಬಿತರಿಗೆ ಪ್ರತೀ ತಿಂಗಳು 5,000 ರೂಪಾಯಿಗಳ ಮೂಲ ಪಿಂಚಣಿ;<br>(i) ಸಂತ್ರಸ್ತರ ಮಕ್ಕಳ ಪದವಿವರೆಗಿನ ಶಿಕ್ಷಣದ ಪೂರ್ಣ ವೆಚ್ಚ ಮತ್ತು ನಿರ್ವಹಣೆ;<br>(ii) ಮೂರು ತಿಂಗಳವರೆಗೆ ಪಾತ್ರೆಗಳು, ಅಕ್ಕಿ, ಗೋಧಿ, ಬೇಳೆಕಾಳುಗಳನ್ನು ಒದಗಿಸುವುದು |

# ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು (ದೌರ್ಜನ್ಯ ತಡೆ) ಕಾಯಿದೆ

## ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–17

**1. ಎಸ್.ಸಿ.ಗಳು ಮತ್ತು ಎಸ್.ಟಿ. ಸದಸ್ಯರಿಗೆ ಅವಮಾನಿಸಲು ಮತ್ತು ನಿಂದಿಸಲು ಬಳಸುವ ಭಾಷೆ**

*ಮಂಜು ದೇವಿ ವಿರುದ್ಧ ಓಂಕಾರ್‌ಜಿತ್ ಸಿಂಗ್ ಅಹ್ಲುವಾಲಿಯ @ ಓಂಕಾರ್‌ಜಿತ್ ಸಿಂಗ್ & ಇತರರು*, ಸುಪ್ರೀಂ ಕೋರ್ಟ್ ಮೇಲ್ಮನವಿ 2017ರ ಸಂಖ್ಯೆ 570

- ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದ ಯಾರನ್ನಾದರೂ "ಹರಿಜನ" ಮತ್ತು "ಧೋಬಿ" ಎಂದು ಕರೆಯುವುದು ಸ್ವೀಕಾರಾರ್ಹವಲ್ಲ ಮತ್ತು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು (ದೌರ್ಜನ್ಯ ತಡೆ) ಕಾಯಿದೆ (ಪಿಓಎ ಕಾಯಿದೆ) ಅಡಿಯಲ್ಲಿ ಅಪರಾದವೊಂದಕ್ಕೆ ಸಮ. ಈ ಪದಗಳನ್ನು ಅವಮಾನಿಸಲು ಹಾಗೂ ನಿಂದಿಸಲು ಹೆಚ್ಚಿನ ವೇಳೆ ಪ್ರಭಾವೀ ಅಥವಾ ಮೇಲು ಜಾತಿಯ ವ್ಯಕ್ತಿಗಳಿಂದ ಬಳಕೆಯಾಗುತ್ತದೆ. ಈ ಪದಗಳು ನಿಂದನಾತ್ಮಕ ಹಾಗೂ ಅವಮಾನಕರವಾಗಿದ್ದು, ಉದ್ದೇಶಪೂರ್ವಕವಾಗಿ ಅವಮಾನಿಸಲು ಮತ್ತು ತೇಜೋವಧೆ ಮಾಡಲು ಬಳಸಲಾಗುತ್ತದೆ ಎಂದು ಗುರುತಿಸಲಾಗಿದೆ.

**2. ಸಂತ್ರಸ್ತರ ಮತ್ತು ಸಾಕ್ಷಿಗಳ ರಕ್ಷಣೆ**

*ಮಂಜು ದೇವಿ ವಿರುದ್ಧ ಓಂಕಾರ್‌ಜಿತ್ ಸಿಂಗ್ ಅಹ್ಲುವಾಲಿಯ @ ಓಂಕಾರ್‌ಜಿತ್ ಸಿಂಗ್ & ಇತರರು*, ಸುಪ್ರೀಂ ಕೋರ್ಟ್ ಮೇಲ್ಮನವಿ 2017ರ ಸಂಖ್ಯೆ 570; *ವಿಲಾಸ್ ಪಾಂಡುರಂಗ ಪವಾರ್* ಮತ್ತು ಇನ್ನೊಬ್ಬರು *ವಿರುದ್ಧ ಮಹಾರಾಷ್ಟ್ರ ರಾಜ್ಯ* ಮತ್ತು ಇತರರು *(2012)* 8 ಎಸ್‌ಸಿಸಿ 795

- ಸಂತ್ರಸ್ತರನ್ನು ಸಂರಕ್ಷಿಸಲು ಮತ್ತು ಸಮರ್ಪಕವಾದ ಹಾಗೂ ಪರಿಣಾಮಕಾರಿ ತನಿಖೆಯನ್ನು ಖಾತ್ರಿಪಡಿಸಲು, ಮೊದಲ ನೋಟಕ್ಕೇ ಆರೋಪಗಳು ಸಂಪೂರ್ಣವಾಗಿ ಆಧಾರರಹಿತವೆಂದು ನ್ಯಾಯಾಲಯಕ್ಕೆ ಕಂಡುಬಂದ ಪ್ರಕರಣಗಳನ್ನು ಹೊರತುಪಡಿಸಿದರೆ ಪಿಓಎ ಕಾಯಿದೆ ಅಡಿಯಲ್ಲಿ ಅಪರಾಧವನ್ನು ಎಸಗಿದರೆಂದು ಆಪಾದಿಸಲಾದ ವ್ಯಕ್ತಿಗಳಿಗೆ ಜಾಮೀನು ನೀಡಲಾಗುವುದಿಲ್ಲ. (ಪಿಓಎ ಕಾಯಿದೆ, ಎಸ್ 18, ಅಪರಾಧ ಪ್ರಕ್ರಿಯೆ ಸಂಹಿತೆಯ ಎಸ್ 438 ಜೊತೆಗೆ ಓದಿಕೊಳ್ಳತಕ್ಕದ್ದು)

**3. ದೌರ್ಜನ್ಯಗಳ ಪೊಲೀಸ್ ತನಿಖೆ**

*ಬಿಹಾರ ರಾಜ್ಯ* ಮತ್ತು *ಇತರರು ವಿರುದ್ಧ ಅನಿಲ್ ಕುಮಾರ್* ಮತ್ತು *ಇತರರು*, ಸುಪ್ರೀಂ ಕೋರ್ಟ್ ಸಿವಿಲ್ ಮೇಲ್ಮನವಿ 2017ರ ಸಂಖ್ಯೆ 4401

- ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು (ದೌರ್ಜನ್ಯ ತಡೆ) ಕಾಯಿದೆ, 1995ರ ಅಧಿನಿಯಮ 7 ಅಡಿಯಲ್ಲಿ, ಪಿಓಎ ಕಾಯಿದೆ ಅಡಿಯಲ್ಲಿ ಬರುವ ದೌರ್ಜನ್ಯವೊಂದನ್ನು ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್ ಹುದ್ದೆಗಿಂತ ಮೇಲಿನ ಒಬ್ಬರು ಪೊಲೀಸು ಅಧಿಕಾರಿಗಳು ತನಿಖೆ ಮಾಡತಕ್ಕದ್ದು. ಆದರೆ, ಪಿಓಎ ಎಸ್.9 (1)(ಬಿ) ಅಡಿಯಲ್ಲಿ, ಪಿಓಎ ಕಾಯಿದೆಯ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ, ರಾಜ್ಯ ಸರ್ಕಾರಗಳು 'ಯಾವುದೇ ರಾಜ್ಯ ಸರ್ಕಾರಿ ಅಧಿಕಾರಿ'ಗೆ ಬಂಧನ, ತನಿಖೆ ಮತ್ತು ವಿಚಾರಣೆಯ ಅಧಿಕಾರವನ್ನು ವಿವೇಚನೆಯಿಂದ ಬಳಸುವುದಕ್ಕೆ ಆಸ್ಪದ ನೀಡಿದೆ. ರಾಜ್ಯ ಸರ್ಕಾರಗಳಿಗೆ (ಈ ಪ್ರಕರಣದಲ್ಲಿ, ಬಿಹಾರ ರಾಜ್ಯ), ಹೀಗಾಗಿ ಕೆಳಗಿನ ಹುದ್ದೆಗಳಲ್ಲಿರುವ ಅಧಿಕಾರಿಗಳಿಂದ ತನಿಖೆಗಳನ್ನು ನಡೆಸುವುದಕ್ಕೆ ನಿಯಮಾವಳಿಗಳನ್ನು ಜಾರಿಗೊಳಿಸುವ ಅಧಿಕಾರಗಳನ್ನು ಹೊಂದಿದೆ.

**4. ಪಿಓಎ ಕಾಯಿದೆ ಅಡಿಯಲ್ಲಿ ಬೇರೆ ಸರ್ಕಾರ/ಸಂಸ್ಥೆಗಳ ಕರ್ತವ್ಯಗಳು**

*ರಾಷ್ಟ್ರೀಯ ದಲಿತ ಮಾನವ ಹಕ್ಕುಗಳ ಆಂದೋಳನ* ಮತ್ತು ಇತರರು *ವಿರುದ್ಧ ಕೇಂದ್ರ ಸರ್ಕಾರ* & ಇತರರು *(2017) 2 ಎಸ್‌ಸಿಸಿ 432*

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಿಓಎ ಕಾಯಿದೆಯ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸತಕ್ಕದ್ದು.
- ರಾಷ್ಟ್ರೀಯ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಯೋಗವು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದವರನ್ನು ರಕ್ಷಿಸಲು ತಮ್ಮ ಕರ್ತವ್ಯಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸತಕ್ಕದ್ದು.
- ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಸದಸ್ಯರು ಎದುರಿಸುವ ಸಮಸ್ಯೆಗಳ ಮತ್ತು ಪಿಓಎ ಕಾಯಿದೆಯ ಅಂಶಗಳ ಕುರಿತು ಜಾಗೃತಿಯನ್ನು ಮೂಡಿಸಲು ಸಮರ್ಪಕವಾದ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು; ಜೊತೆಗೆ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಸದಸ್ಯರಿಗೆ ಉಚಿತವಾಗಿ ಕಾನೂನು ಸಹಾಯವನ್ನು ಒದಗಿಸತಕ್ಕದ್ದು.



[redacted]

# ಕೌಟುಂಬಿಕ ಹಿಂಸೆಯಿಂದ ಮಹಿಳೆಯರು ಮತ್ತು ಹುಡುಗಿಯರ ರಕ್ಷಣೆ

| ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣೆ ಕಾಯಿದೆ 2005 (ಪಿಡಬ್ಲ್ಯುಡಿವಿಎ 2005) + ಪಿಡಬ್ಲ್ಯುಡಿವಿಎ ನಿಯಮಾವಳಿಗಳು 2005 | |
|---|---|
| 1. ಕಾಯಿದೆಯ ವ್ಯಾಖ್ಯಾನಗಳು ಮತ್ತು ವ್ಯಾಪ್ತಿ | ಸಂತ್ರಸ್ತರಿಗೆ ರಕ್ಷಣೆ ಮತ್ತು ಬೆಂಬಲವನ್ನು ಒದಗಿಸುವ ನಾಗರಿಕ ಕಾನೂನು |
| | ಕೌಟುಂಬಿಕ ಹಿಂಸೆಯ ವಿಶಾಲ ವ್ಯಾಖ್ಯಾನ:<br>ಎಸ್. 3: ಕೌಟುಂಬಿಕ ಹಿಂಸೆ = ಈ ಕೆಳಗಿನ ಯಾವುದನ್ನೇ ಮಾಡುವ ಕ್ರಿಯೆ, ಎಸಗುವುದು, ಮಾಡುವುದು ಅಥವಾ ನಡೆಸುವುದು:<br>• ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಹಾನಿ, ಗಾಯ ಅಥವಾ ಆರೋಗ್ಯ, ಸುರಕ್ಷತೆ, ಬದುಕು, ಅಂಗಾಂಗಗಳು ಅಥವಾ ಮಾನಸಿಕ ಅಥವಾ ದೈಹಿಕ ಯೋಗಕ್ಷೇಮಕ್ಕೆ ಧಕ್ಕೆ ಮಾಡುವುದು<br>• ಅನ್ಯಾಯಕ್ಕೊಳಗಾದ ವ್ಯಕ್ತಿ ಅಥವಾ ಆಕೆಗೆ ಸಂಬಂಧವಿರುವ ವ್ಯಕ್ತಿಗೆ ವರದಕ್ಷಿಣೆ ಅಥವಾ ಬೇರೆ ಆಸ್ತಿ ಅಥವಾ ಬೆಲೆಬಾಳುವ ವಸ್ತುಗಳ ಕಾನೂನುಬಾಹಿರ ಬೇಡಿಕೆಯನ್ನು ಈಡೇರಿಸುವಂತೆ ಕಿರುಕುಳ, ಹಾನಿ, ಗಾಯ ಅಥವಾ ಧಕ್ಕೆ ಮಾಡುವುದು<br>• ಅನ್ಯಾಯಕ್ಕೊಳಗಾದ ವ್ಯಕ್ತಿ ಅಥವಾ ಆಕೆಗೆ ಸಂಬಂಧವಿರುವ ವ್ಯಕ್ತಿಗೆ ಬೆದರಿಕೆ ಒಡ್ಡುವುದು<br>• ಅನ್ಯಾಯಕ್ಕೊಳಗಾದ ವ್ಯಕ್ತಿ ದೈಹಿಕ ಅಥವಾ ಮಾನಸಿಕ ಹಾನಿ ಅಥವಾ ಗಾಯ ಉಂಟು ಮಾಡುವುದು<br>ಇದು ದೈಹಿಕ ದುರುಪಯೋಗ; ಲೈಂಗಿಕ ದುರುಪಯೋಗ; ಮೌಖಿಕ ನಿಂದನೆ; ಭಾವನಾತ್ಮಕ ದುರುಪಯೋಗ ಮತ್ತು ಆರ್ಥಿಕ ದುರುಪಯೋಗ ಪಡಿಸಿಕೊಳ್ಳುವುದನ್ನೂ ಒಳಗೊಂಡಿದೆ. (ವಿವರಣೆ 1ರಲ್ಲಿ ವ್ಯಾಖ್ಯಾನಿಸಿದೆ). |
| ಕೌಟುಂಬಿಕ ಹಿಂಸೆಯ ಕಾನೂನಾತ್ಮಕ ವ್ಯಾಖ್ಯಾನವು ಯಾರಿಗೆ ಅನ್ವಯಿಸುತ್ತದೆ? | ಎಸ್.2 ಅನ್ಯಾಯಕ್ಕೊಳಗಾದ ವ್ಯಕ್ತಿ = ಕೌಟುಂಬಿಕ ಹಿಂಸೆಯನ್ನು ಎಸಗುವ ವ್ಯಕ್ತಿಯೊಂದಿಗೆ ಕೌಟುಂಬಿಕ ಸಂಬಂಧ ಹೊಂದಿರುವ ಅಥವಾ ಹೊಂದಿದ್ದ ಮತ್ತು ಯಾವುದೇ ರೀತಿಯ ಕೌಟುಂಬಿಕ ಹಿಂಸೆಯ ಕ್ರಿಯೆಗೆ ಒಳಗಾಗಿದ್ದೇನೆಂದು ಆಪಾದಿಸುವ ಯಾವುದೇ ಮಹಿಳೆ. ಪುರುಷರನ್ನು ಹೊರತುಪಡಿಸಿ. |
| ಅದು ಮದುವೆಯಾದ/ಭಿನ್ನಲೈಂಗಿಕ ದಂಪತಿಗಳು ಅಲ್ಲದವರಿಗೂ ವಿಸ್ತರಿಸುವುದೇ? | ಎಸ್.2 ಕೌಟುಂಬಿಕ ಸಂಬಂಧ = ಮದುವೆಯಿಂದ, ದತ್ತು ಸ್ವೀಕಾರದಿಂದ ಉಂಟಾದ ಸಂಬಂಧದ ಮೂಲಕ ಅಥವಾ ಕೂಡು ಕುಟುಂಬದ ರೀತಿಯಲ್ಲಿ ಒಟ್ಟಿಗೇ ಬದುಕುತ್ತಿರುವ ಕುಟುಂಬದ ಸದಸ್ಯರ ಹಾಗೆ ಇಬ್ಬರು ವ್ಯಕ್ತಿಗಳು ರಕ್ತ ಸಂಬಂಧ ಅಥವಾ, ಮದುವೆ ಸಂಬಂಧ ಹೊಂದಿದ್ದು, ಒಂದು ಹಂಚಿಕೊಂಡ ಮನೆಯಲ್ಲಿ ಯಾವುದಾದರೂ ಸಮಯದಲ್ಲಿ ಒಟ್ಟಿಗೇ ಬಾಳಿದ್ದರೆ ಅಥವಾ ಬಾಳುತ್ತಿದ್ದಾಗ ಇರುವ ಸಂಬಂಧ.<br>"ಹಂಚಿಕೊಂಡ ಮನೆ" = ಅನ್ಯಾಯಕ್ಕೊಳಗಾದ ವ್ಯಕ್ತಿಯು ಕೌಟುಂಬಿಕ ಹಿಂಸೆಯನ್ನು ಎಸಗಿದ ವ್ಯಕ್ತಿಯೊಂದಿಗೆ ಅಥವಾ ಏಕಾಂಗಿಯಾಗಿ ಒಂದು ಕೌಟುಂಬಿಕ ಸಂಬಂಧದಲ್ಲಿ ಬದುಕಿರುವ ಅಥವಾ ಯಾವುದೇ ಸಮಯದಲ್ಲಿ ಬದುಕಿದ್ದ ಮನೆ, ಇದು ಅವರಿಬ್ಬರಲ್ಲಿ ಯಾರಾದರೂ ಸ್ವಂತ ಹೊಂದಿದ್ದ/ಬಾಡಿಗೆಗಿದ್ದ ಅಥವಾ ಇಬ್ಬರೂ ಜಂಟಿಯಾಗಿ ಸ್ವಂತ/ಬಾಡಿಗೆಗಿದ್ದ ಅಥವಾ ಕೌಟುಂಬಿಕ ಹಿಂಸೆಯನ್ನು ಎಸಗಿದ ವ್ಯಕ್ತಿಯ ಕುಟುಂಬಕ್ಕೆ ಸೇರಿದ್ದ ಮನೆ, ಸಂತ್ರಸ್ತೆ ಅಥವಾ ಹಿಂಸೆ ಎಸಗಿದ ವ್ಯಕ್ತಿ ಮನೆಯ ಯಾವುದೇ ಹಕ್ಕು, ಹೆಸರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾರೆಯೇ ಎಂಬುದನ್ನು ಹೊರತುಪಡಿಸಿ. |

| | |
|---|---|
| ಔಪಚಾರಿಕ ನ್ಯಾಯ ವ್ಯವಸ್ಥೆಯ ಮೂಲಕ ಪ್ರಕರಣವನ್ನು ತರಬಹುದೇ | ಮ್ಯಾಜಿಸ್ಟ್ರೇಟರಿಗೆ ದೂರು ಮತ್ತು ರೆಫರಲ್‌ನ ಔಪಚಾರಿಕ ಪ್ರಕ್ರಿಯೆ: ಮ್ಯಾಜಿಸ್ಟ್ರೇಟರಿಗೆ ಕೌಟುಂಬಿಕ ಪ್ರಕರಣಗಳ<br>• ರಕ್ಷಣಾ ಅಧಿಕಾರಿಗಳು ಮ್ಯಾಜಿಸ್ಟ್ರೇಟರಿಗೆ ಕೌಟುಂಬಿಕ ಪ್ರಕರಣಗಳ ವರದಿಗಳನ್ನು ಸಲ್ಲಿಸುವ ಕರ್ತವ್ಯವನ್ನು ಹೊಂದಿದ್ದಾರೆ (ಕೆಳಗೆ ನೋಡಿ).<br>• ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಅಥವಾ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕಾಯಿದೆಯ ಅಡಿಯಲ್ಲಿ ಅರ್ಜಿಗಳ ಅಹವಾಲು ಕೇಳುವ ಅಧಿಕಾರ ಹೊಂದಿದ್ದಾರೆ. |
| **2. ಕೌಟುಂಬಿಕ ಪ್ರಕರಣಗಳ ಹೇಳಿಕೆ ನೀಡುವುದು** | |
| ಯಾರು ಕೌಟುಂಬಿಕ ಪ್ರಕರಣಗಳ ಹೇಳಿಕೆ ನೀಡಬಹುದು? | ಎಸ್.4(1) ಕೌಟುಂಬಿಕ ಹಿಂಸೆಯು ನಡೆದಿದೆ ಅಥವಾ ನಡೆಯುತ್ತಿದೆ ಅಥವಾ ನಡೆಯುವ ಸಂಭವವಿದೆ ಎಂದು ನಂಬಲು ಕಾರಣಗಳಿರುವ ಯಾವುದೇ ವ್ಯಕ್ತಿ ಸಂಬಂಧಿತ ರಕ್ಷಣಾ ಅಧಿಕಾರಿಗೆ ಮಾಹಿತಿಯನ್ನು ನೀಡಬಹುದು.<br>ಎಸ್.4(2) ಸದ್ಭಾವನೆಯಿಂದ ಮಾಹಿತಿಯನ್ನು ಕೊಡುವ ಅಂತಹ ವ್ಯಕ್ತಿಗೆ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಬಾಧ್ಯತೆಯನ್ನು ಹೊರೆಸಬಾರದು. |
| **3. ಅಧಿಕಾರಿಗಳ ಹೊಣೆಗಾರಿಕೆಗಳು** | |
| **ಸರ್ಕಾರದ ಸಾಮಾನ್ಯ ಹೊಣೆಗಾರಿಕೆಗಳು** | |
| ಸರ್ಕಾರದ ಕರ್ತವ್ಯಗಳೇನು? | ಎಸ್. 11 ಕೇಂದ್ರ ಸರ್ಕಾರ ಮತ್ತು ಎಲ್ಲ ರಾಜ್ಯ ಸರ್ಕಾರಗಳು ಈ ಕೆಳಗಿನವುಗಳನ್ನು ಖಾತ್ರಿಪಡಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು:<br>• ಕಾಯಿದೆಯ ಅನುಕೂಲಗಳು ಅಥವಾ ಉಪಬಂಧ/ಪ್ರಾವಿಶನ್ಸ್‌ಗಳನ್ನು ವ್ಯಾಪಕವಾಗಿ ಪ್ರಚಾರಪಡಿಸುವುದು<br>• ಪೊಲೀಸ್ ಮತ್ತು ನ್ಯಾಯಾಂಗ ಸೇವೆಯ ಸದಸ್ಯರು ಸೇರಿದಂತೆ ರಾಜ್ಯದ ಅಧಿಕಾರಿಗಳಿಗೆ ಕೌಟುಂಬಿಕ ಹಿಂಸೆಯ ವಿಚಾರಗಳ ಕುರಿತಾಗಿ ಸಂವೇದನಾಶೀಲತೆ ಮತ್ತು ಅರಿವು ಮೂಡಿಸುವ ತರಬೇತಿ<br>• ಕಾನೂನು, ಗೃಹಖಾತೆ (ಕಾನೂನು ಮತ್ತು ಸುವ್ಯವಸ್ಥೆ ಸೇರಿದಂತೆ), ಆರೋಗ್ಯ ಮತ್ತು ಮಾನವ ಸಂಪನ್ಮೂಲ ವಿಚಾರಗಳಿಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವ ಸಚಿವಾಲಯಗಳ ನಡುವೆ ಪರಿಣಾಮಕಾರಿ ಸಮನ್ವಯತೆ<br>• ಮಹಿಳೆಯರಿಗೆ ಸೇವೆಯನ್ನು ಒದಗಿಸುವ ಸಚಿವಾಲಯಗಳ ನಡುವೆ ಉತ್ತಮ ಪ್ರೋಟೋಕಾಲ್ |
| **ರಕ್ಷಣಾ ಅಧಿಕಾರಿಗಳು** | |
| ಕಾನೂನು ವಿಶೇಷ ರಕ್ಷಣಾ / ಪೊಲೀಸ್ ಘಟಕಗಳನ್ನು ಸ್ಥಾಪಿಸುತ್ತದೆಯೇ? | ಎಸ್. 8 ರಾಜ್ಯ ಸರ್ಕಾರವು ಪ್ರತೀ ಜಿಲ್ಲೆಯಲ್ಲಿ 'ಅಗತ್ಯವಿದೆ' ಎಂದು ತಾನು ಭಾವಿಸುವಷ್ಟು ಸಂಖ್ಯೆಯ ರಕ್ಷಣಾ ಅಧಿಕಾರಿಗಳನ್ನು ನೇಮಿಸಬೇಕು. ಸಾಧ್ಯವಿದ್ದಷ್ಟರ ಮಟ್ಟಿಗೆ ರಕ್ಷಣಾ ಅಧಿಕಾರಿಗಳು ಮಹಿಳೆಯರಾಗಿರಬೇಕು. |
| ರಕ್ಷಣಾ ಅಧಿಕಾರಿಗಳು ಯಾವ ತರಬೇತಿಯನ್ನು ಪಡೆಯುತ್ತಾರೆ? | ಪಿಡಬ್ಲ್ಯುಡಿವಿಎ ನಿಯಮಗಳು, ನಿಯಮ 3: ರಕ್ಷಣಾ ಅಧಿಕಾರಿಗಳ ಅರ್ಹತೆಗಳು ಮತ್ತು ಕಾರ್ಯಾನುಭವ ರಕ್ಷಣಾ ಅಧಿಕಾರಿಗಳು ಕನಿಷ್ಠ ಮೂರು ವರ್ಷಗಳ ಕಾರ್ಯಾನುಭವ ಹೊಂದಿರಬೇಕು |

| | |
|---|---|
| | ಕೌಟುಂಬಿಕ ಹಿಂಸೆ ಕಾಯಿದೆ ಅಡಿಯಲ್ಲಿ, ಸದ್ಭಾವನೆಯಿಂದ ಅಥವಾ ಒಳ್ಳೆಯದನ್ನು ಮಾಡುವ ಉದ್ದೇಶದಿಂದ ಅಧಿಕಾರವನ್ನು ನಿರ್ವಹಿಸಿದ ಅಥವಾ ಕಾರ್ಯಭಾರವನ್ನು ನಿಭಾಯಿಸಿದ ಸೇವೆಗಳನ್ನು ಒದಗಿಸುವವರ ಮೇಲೆ ಯಾವುದೇ ಮೊಕದ್ದಮೆ, ವಿಚಾರಣೆ ಅಥವಾ ಕಾನೂನಾತ್ಮಕ ಕಾರ್ಯವಿಧಾನಗಳನ್ನು ಜರುಗಿಸುವಂತಿಲ್ಲ. |
| 4. ಲಭ್ಯವಿರುವ ರಕ್ಷಣಾ ಕ್ರಮಗಳು | |
| ಪರಿಹಾರದ ಅರ್ಜಿಗಳ ವಿಚಾರಣೆಯನ್ನು ಯಾವ ನ್ಯಾಯಾಲಯ ನಡೆಸುವುದು? | ಎಸ್.27 ಪ್ರಥಮ ದರ್ಜೆ ನ್ಯಾಯಾಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ಅಥವಾ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು (ಸಿವಿಲ್ ಆದೇಶಗಳ ಅರ್ಜಿಗಳೊಂದಿಗೆ ವ್ಯವಹರಿಸುವ ಕ್ರಿಮಿನಲ್ ನ್ಯಾಯಾಲಯಗಳು) |
| ಕಾಯಿದೆಯಡಿಯಲ್ಲಿ ಯಾವ ರಕ್ಷಣೆಗಳು ಲಭ್ಯವಿವೆ? | ಎಸ್.12(1) ಅನ್ಯಾಯಕ್ಕೊಳಗಾದ ವ್ಯಕ್ತಿ ಅಥವಾ ರಕ್ಷಣಾ ಅಧಿಕಾರಿ ಅಥವಾ ಅವರ ಪರವಾಗಿ ಯಾವುದೇ ವ್ಯಕ್ತಿ ಮ್ಯಾಜಿಸ್ಟ್ರೇಟರಿಗೆ ಈ ಕೆಳಗಿನ ಯಾವುದೇ ಒಂದು ಅಥವಾ ಒಂದಕ್ಕಿಂತ ಹೆಚ್ಚು ಬಗೆಯ ಪರಿಹಾರಗಳಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ: |
| | **ಎಸ್.18 ರಕ್ಷಣಾ ಆದೇಶ**<br>ಕೌಟುಂಬಿಕ ಹಿಂಸೆಯು ನಡೆದಿದೆ ಅಥವಾ ನಡೆಯುವ ಸಂಭವವಿದೆ ಎಂದು ನಂಬಿಕೆಯಾದರೆ, ಮ್ಯಾಜಿಸ್ಟ್ರೇಟರು ಪ್ರತಿವಾದಿಯು ಈ ಕೆಳಗಿನವುಗಳನ್ನು ಮಾಡುವುದನ್ನು ನಿಷೇಧಿಸಿ, ಒಂದು ರಕ್ಷಣಾ ಆದೇಶವನ್ನು ಹೊರಡಿಸಬಹುದು –<br>(ಎ) ಯಾವುದೇ ರೀತಿಯ ಕೌಟುಂಬಿಕ ಹಿಂಸೆಯ ಕೃತ್ಯವನ್ನು ಎಸಗುವುದು;<br>(ಬಿ) ಕೌಟುಂಬಿಕ ಹಿಂಸೆಯ ಕೃತ್ಯಗಳನ್ನು ಎಸಗುವುದಕ್ಕೆ ಸಹಾಯ ಮಾಡುವುದು ಅಥವಾ ಬೆಂಬಲಿಸುವುದು;<br>(ಸಿ) ಅನ್ಯಾಯಕ್ಕೊಳಗಾದ ವ್ಯಕ್ತಿಯ ಉದ್ಯೋಗದ ಸ್ಥಳವನ್ನು ಪ್ರವೇಶಿಸುವುದು ಅಥವಾ ಅನ್ಯಾಯಕ್ಕೊಳಗಾದ ವ್ಯಕ್ತಿ ಮಗು ಆಗಿದ್ದರೆ, ಮಗುವಿನ ಶಾಲೆ ಅಥವಾ ಅನ್ಯಾಯಕ್ಕೊಳಗಾದ ವ್ಯಕ್ತಿಯು ಇರುವ ಯಾವುದೇ ಬೇರೆ ಸ್ಥಳ;<br>ಡಿ) ಅನ್ಯಾಯಕ್ಕೊಳಗಾದ ವ್ಯಕ್ತಿಯೊಂದಿಗೆ ವೈಯಕ್ತಿಕ, ಮೌಖಿಕ ಅಥವಾ ಲಿಖಿತ ಅಥವಾ ಎಲೆಕ್ಟ್ರಾನಿಕ್ ಅಥವಾ ದೂರವಾಣಿ ಸಂಪರ್ಕವೂ ಸೇರಿದಂತೆ ಯಾವುದೇ ರೀತಿಯಲ್ಲಿ ಸಂವಹನ ನಡೆಸಲು ಪ್ರಯತ್ನ ಮಾಡುವುದು;<br>(ಇ) ಯಾವುದೇ ಆಸ್ತಿಗಳನ್ನು ಪ್ರತ್ಯೇಕ ಮಾಡುವುದು, ಅನ್ಯಾಯಕ್ಕೊಳಗಾದ ವ್ಯಕ್ತಿ ಮತ್ತು ಪ್ರತಿವಾದಿ ಜಂಟಿಯಾಗಿ ಅಥವಾ ಪ್ರತಿವಾದಿಯೊಬ್ಬರೇ ಬಳಸಿದ ಅಥವಾ ಹೊಂದಿದ ಅಥವಾ ಇಬ್ಬರೂ ಸೇರಿ ಹೊಂದಿದ್ದ ಬ್ಯಾಂಕ್ ಲಾಕರುಗಳನ್ನು ಅಥವಾ ಬ್ಯಾಂಕ್ ಖಾತೆಗಳನ್ನು ಬಳಸುವುದು, ಸ್ತ್ರೀಧನವೂ ಸೇರಿದಂತೆ ಎರಡೂ ಪಕ್ಷಗಳು ಸೇರಿ ಅಥವಾ ಪ್ರತ್ಯೇಕವಾಗಿ ಹೊಂದಿದ್ದ ಯಾವುದೇ ಆಸ್ತಿಯನ್ನು ಮ್ಯಾಜಿಸ್ಟ್ರೇಟರ ಒಪ್ಪಿಗೆ ಇಲ್ಲದೇ ವಿಲೇವಾರಿ ಮಾಡುವುದು<br>(ಎಫ್) ಅವಲಂಬಿತರಿಗೆ, ಕೌಟುಂಬಿಕ ಹಿಂಸೆಯಿಂದ ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಸಹಾಯ ಮಾಡುವ ಬೇರೆ ಸಂಬಂಧಿಕರರು ಅಥವಾ ಯಾವುದೇ ವ್ಯಕ್ತಿಗೆ ಹಿಂಸೆಯನ್ನುಂಟು ಮಾಡುವುದು;<br>(ಜಿ) ರಕ್ಷಣಾ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಇನ್ನಾವುದೇ ರೀತಿಯ ಕೃತ್ಯವನ್ನು ಎಸಗುವುದು |



[redacted]

| | |
|---|---|
| ರಕ್ಷಣಾ ಅಧಿಕಾರಿಗಳ ಕರ್ತವ್ಯಗಳು ಮತ್ತು ಕಾರ್ಯಭಾರಗಳು | ರಕ್ಷಣಾ ಅಧಿಕಾರಿಗಳು = ಸಾರ್ವಜನಿಕ ಸೇವಕರು (ಎಸ್.30)<br>ಎಸ್.9 ರಕ್ಷಣಾ ಅಧಿಕಾರಿಗಳ ಕರ್ತವ್ಯಗಳು ಮತ್ತು ಕಾರ್ಯಭಾರಗಳು<br>• ಮ್ಯಾಜಿಸ್ಟ್ರೇಟರಿಗೆ ಅವರ ಕರ್ತವ್ಯಗಳನ್ನು ನಿಭಾಯಿಸುವಲ್ಲಿ ಸಹಾಯ ಮಾಡುವುದು<br>• ಕೌಟುಂಬಿಕ ಹಿಂಸೆಯ ದೂರನ್ನು ಸ್ವೀಕರಿಸಿದ ನಂತರ ಕೌಟುಂಬಿಕ ಹಿಂಸೆ ಘಟನೆ ವರದಿ (ಡಿಐಆರ್)ಯನ್ನು ಮಾಡುವುದು ಮತ್ತು ಸ್ಥಳೀಯ ಠಾಣೆಗಳ ಉಸ್ತುವಾರಿಯಲ್ಲಿರುವ ಪೊಲೀಸ್ ಅಧಿಕಾರಿಗಳು ಮತ್ತು ಆ ಪ್ರದೇಶದಲ್ಲಿ ಸೇವೆಗಳನ್ನು ಒದಗಿಸುತ್ತಿರುವವರಿಗೆ ಪ್ರತಿಗಳನ್ನು ಕಳುಹಿಸುವುದು<br>• ಅನ್ಯಾಯಕ್ಕೊಳಗಾದ ವ್ಯಕ್ತಿಯು ಕೋರಿಕೊಂಡರೆ ರಕ್ಷಣಾ ಆದೇಶಕ್ಕೆ ಅರ್ಜಿಯನ್ನು ಸಲ್ಲಿಸುವುದು<br>• ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಇರುವ ಅಪಾಯಗಳನ್ನು ಅಂದಾಜು ಮಾಡಿದ ನಂತರ, ಇನ್ನೂ ಹೆಚ್ಚಿನ ಕೌಟುಂಬಿಕ ಹಿಂಸೆಯನ್ನು ತಡೆಗಟ್ಟಲು ಸುರಕ್ಷತಾ ಯೋಜನೆಯನ್ನು ಸಿದ್ಧಪಡಿಸುವುದು (ಪಿಡಬ್ಲ್ಯುಡಿವಿಎ ನಿಯಮಾವಳಿಗಳು, ನಿಯಮಾವಳಿ 8(iv)<br>• ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಕಾನೂನು ಸಹಾಯ ಒದಗಿಸುವುದನ್ನು ಖಾತ್ರಿಪಡಿಸುವುದು ಮತ್ತು ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಸೂಚಿತ ದೂರು ನಮೂನೆಯನ್ನು ವೆಚ್ಚವಿಲ್ಲದೇ ಒದಗಿಸುವುದು<br>• ಕಾನೂನು ಸಹಾಯ; ಸಮಾಲೋಚನೆ; ಆಶ್ರಯ ಗೃಹಗಳು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಎಲ್ಲ ಸೇವಾದಾರರ ಒಂದು ಪಟ್ಟಿಯನ್ನು ಇಟ್ಟುಕೊಂಡಿರುವುದು<br>• ಅನ್ಯಾಯಕ್ಕೊಳಗಾದ ವ್ಯಕ್ತಿಯು ಕೇಳಿಕೊಂಡರೆ, ಸುರಕ್ಷಿತ ಆಶ್ರಯ ಗೃಹವು ಲಭ್ಯವಾಗುವಂತೆ ಮಾಡುವುದು<br>• ಅನ್ಯಾಯಕ್ಕೊಳಗಾದ ವ್ಯಕ್ತಿಗೆ ದೈಹಿಕ ಗಾಯಗಳು ಆಗಿದ್ದರೆ, ಆಕೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವುದು ಮತ್ತು ವೈದ್ಯಕೀಯ ವರದಿಯ ಒಂದು ಪ್ರತಿಯನ್ನು ಪೊಲೀಸ್ ಠಾಣೆ ಮತ್ತು ಮ್ಯಾಜಿಸ್ಟ್ರೇಟರಿಗೆ ಕಳುಹಿಸುವುದು<br>• ಹಣಕಾಸು ಪರಿಹಾರದ ಆದೇಶವು (ಎಸ್.20ರ ಅಡಿಯಲ್ಲಿ) ಸಮಂಜಸವಾಗಿರುವಂತೆ ಮತ್ತು ಅದು ಜಾರಿಗೆ ಬರುವುದನ್ನು ಖಾತ್ರಿಪಡಿಸುವುದು |
| **ಪೊಲೀಸ್** | |
| ಕೌಟುಂಬಿಕ ಹಿಂಸೆಗೆ ಸಂಬಂಧಿಸಿದಂತೆ ಕಾನೂನಿನ ಅಡಿಯಲ್ಲಿ ಪೊಲೀಸರು ಯಾವ ಕರ್ತವ್ಯಗಳನ್ನು ಹೊಂದಿದ್ದಾರೆ? | ಪಿಡಬ್ಲ್ಯುಡಿವಿಎ ಎಸ್.5 + ಪಿಡಬ್ಲ್ಯುಡಿವಿಎ ಅಧಿನಿಯಮಗಳು, ನಿಯಮ 8: ಕೌಟುಂಬಿಕ ಹಿಂಸೆಯ ದೂರನ್ನು ಸ್ವೀಕರಿಸಿದ ಅಥವಾ ಕೌಟುಂಬಿಕ ಹಿಂಸೆಯ ಘಟನೆಯ ಸ್ಥಳದಲ್ಲಿ ಹಾಜರಿದ್ದ ಅಥವಾ ಕೌಟುಂಬಿಕ ಹಿಂಸೆಯ ಘಟನೆಯ ವರದಿಯನ್ನು ತೆಗೆದುಕೊಂಡ ಒಬ್ಬರು ಪೊಲೀಸ್ ಅಧಿಕಾರಿ, ರಕ್ಷಣಾ ಅಧಿಕಾರಿ, ಸೇವಾದಾರರು ಅಥವಾ ಮ್ಯಾಜಿಸ್ಟ್ರೇಟ್ ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಈ ಕೆಳಗಿನ ಸಂಗತಿಗಳನ್ನು ತಿಳಿಸಬೇಕು:<br>ಎ. ಆಕೆಗೆ ಪಿಡಬ್ಲ್ಯುಡಿವಿಎ ಅಡಿಯಲ್ಲಿ ದೂರನ್ನು ನೀಡುವ ಹಕ್ಕು<br>ಬಿ. ಆಕೆಗೆ ರಕ್ಷಣಾ ಆದೇಶ; ಹಣಕಾಸು ಪರಿಹಾರ; ಕಸ್ಟಡಿ ಆದೇಶ; ನಿವಾಸ ಆದೇಶ; ಪರಿಹಾರದ ಆದೇಶ, ಇವುಗಳ ರೂಪದಲ್ಲಿ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಹಕ್ಕು<br>ಸಿ. ಆಕೆಗೆ ಸೇವಾದಾರರಿಂದ ಸೇವೆಗಳ ಲಭ್ಯತೆ<br>ಡಿ. ಆಕೆಗೆ ರಕ್ಷಣಾ ಅಧಿಕಾರಿಗಳ ಸೇವೆಗಳ ಲಭ್ಯತೆ<br>ಇ. ಆಕೆಗೆ 1987 ಕಾನೂನು ಸೇವೆಗಳ ಪ್ರಾಧಿಕಾರ ಕಾಯಿದೆ ಅಡಿಯಲ್ಲಿ ಉಚಿತ ಕಾನೂನು ಸೇವೆಗಳ ಹಕ್ಕು |



[redacted]

| | |
|---|---|
| | • ಎಫ್. ಆಕೆಗೆ ದಂಡಸಂಹಿತೆಯ ಎಸ್.498ಎ ಅಡಿಯಲ್ಲಿ ದೂರು ಸಲ್ಲಿಸುವ ಹಕ್ಕು (ಮಹಿಳೆಯ ಗಂಡ ಅಥವಾ ಗಂಡನ ಸಂಬಂಧಿ ಆಕೆಯ ಮೇಲೆ ಕ್ರೌರ್ಯ ಎಸಗಿದಾಗ) |
| ಕೌಟುಂಬಿಕ ಘಟನೆ ವರದಿಗಳು | ಪಿಡಬ್ಲ್ಯುಡಿವಿ ಅಧಿನಿಯಮಗಳು, ನಿಯಮ 5: ಕೌಟುಂಬಿಕ ಹಿಂಸೆಯ ದೂರನ್ನು ಸ್ವೀಕರಿಸಿದ ನಂತರ, ರಕ್ಷಣಾ ಅಧಿಕಾರಿಯು ಕೌಟುಂಬಿಕ ಘಟನಾ ವರದಿಯನ್ನು ಸಿದ್ಧಪಡಿಸಬೇಕು ಮತ್ತು ಮ್ಯಾಜಿಸ್ಟ್ರೇಟರಿಗೆ ವರದಿಯನ್ನು ಸಲ್ಲಿಸಬೇಕು ಮತ್ತು ಅದರ ಪ್ರತಿಗಳನ್ನು ಸ್ಥಳೀಯ ಪೊಲೀಸ್ ಠಾಣೆಗಳಿಗೆ ಕಳುಹಿಸಿಕೊಡಬೇಕು. |
| ಪೊಲೀಸರು ಕೌಟುಂಬಿಕ ಹಿಂಸೆ ಅಪರಾಧಗಳನ್ನು ತನಿಖೆ ಮಾಡುವ ಕುರಿತಾಗಿ ಯಾವ ತರಬೇತಿಯನ್ನು ಪಡೆಯುತ್ತಾರೆ? | ಕೌಟುಂಬಿಕ ಹಿಂಸೆ ತರಬೇತಿಯು ದೊರೆಯುವುದನ್ನು ಖಾತ್ರಿಪಡಿಸಲು ಎಸ್.11(ಬಿ) ಅಡಿಯಲ್ಲಿ ಸರ್ಕಾರದ ಕರ್ತವ್ಯ |
| **ಸೇವಾದಾರರು/ಸೇವೆ ಒದಗಿಸುವವರು** | |
| ಕಾನೂನಿನ ಅಡಿಯಲ್ಲಿ ಸಂತ್ರಸ್ತೆಗೆ ಯಾವ ಬೆಂಬಲ ಸೇವೆಗಳನ್ನು ಒದಗಿಸಲಾಗುವುದು? | ಎಸ್.6: ಆಕೆ ಅಥವಾ ರಕ್ಷಣಾ ಅಧಿಕಾರಿ ಅಥವಾ ಸೇವಾದಾರರು ಅಂತಹದೊಂದು ಬೇಡಿಕೆ ಇಟ್ಟಲ್ಲಿ, ಅನ್ಯಾಯಕ್ಕೊಳಗಾದ ಮಹಿಳೆಗೆ ಆಶ್ರಯ ಗೃಹವನ್ನು ಒದಗಿಸಬೇಕು. |
| ವೈದ್ಯಕೀಯ ಸೌಲಭ್ಯಗಳ ಕರ್ತವ್ಯಗಳು ಏನು? | ಎಸ್.7: ಅನ್ಯಾಯಕ್ಕೊಳಗಾದ ವ್ಯಕ್ತಿ, ಆಕೆಯ ಪರವಾಗಿ ರಕ್ಷಣಾ ಅಧಿಕಾರಿ ಅಥವಾ ಸೇವೆಗಳನ್ನು ಒದಗಿಸುವವರು ವೈದ್ಯಕೀಯ ಸೌಲಭ್ಯದ ಉಸ್ತುವಾರಿಯಲ್ಲಿರುವ ವ್ಯಕ್ತಿಗೆ ಯಾವುದೇ ರೀತಿಯ ವೈದ್ಯಕೀಯ ಸಹಾಯವನ್ನು ಆಕೆಗೆ ಒದಗಿಸುವಂತೆ ಕೋರಿಕೆ ಸಲ್ಲಿಸಿದರೆ, ವೈದ್ಯಕೀಯ ಸೌಲಭ್ಯದ ಉಸ್ತುವಾರಿಯಲ್ಲಿರುವ ವ್ಯಕ್ತಿಯು ಅನ್ಯಾಯಕ್ಕೊಳಗಾದ ವ್ಯಕ್ತಿಗೆ ವೈದ್ಯಕೀಯ ಸೌಲಭ್ಯದಲ್ಲಿ ವೈದ್ಯಕೀಯ ಸಹಾಯವನ್ನು ಒದಗಿಸಬೇಕು. |
| ಸೇವೆಗಳನ್ನು ಒದಗಿಸುವವರು ಯಾರು? | ಎಸ್.10(1): ಕಾನೂನು ಸಹಾಯ, ವೈದ್ಯಕೀಯ, ಹಣಕಾಸು ಅಥವಾ ಬೇರೆ ಸಹಾಯವನ್ನು ಒದಗಿಸುವುದೂ ಸೇರಿದಂತೆ ಯಾವುದೇ ಕಾನೂನಬದ್ಧ ರೀತಿಯಲ್ಲಿ ಮಹಿಳೆಯರ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶವನ್ನು ಹೊಂದಿರುವ ಯಾವುದೇ ಸ್ವಯಂಸೇವಾ ಸಂಸ್ಥೆ (ಸೊಸೈಟಿಗಳ ನೋಂದಣಿ ಕಾಯಿದೆ 1860 ಅಡಿಯಲ್ಲಿ ನೋಂದಾಯಿತಗೊಂಡ ಸಂಸ್ಥೆ) ಅಥವಾ ಕಂಪನಿ (ಕಂಪನಿಗಳ ಕಾಯಿದೆ 1956 ಅಡಿಯಲ್ಲಿ ನೋಂದಣಿಯಾದ ಕಂಪನಿ) |
| ಸೇವೆಗಳನ್ನು ಒದಗಿಸುವವರ ಅಧಿಕಾರಗಳು | ಎಸ್.10(2): ನೋಂದಣಿಯಾದ ಸೇವೆಗಳನ್ನು ಒದಗಿಸುವವರು ಅಥವಾ ಸೇವಾದಾರರು ಈ ಕೆಳಗಿನ ಅಧಿಕಾರಗಳನ್ನು ಹೊಂದಿರುತ್ತಾರೆ:<br>ಎ. ಅನ್ಯಾಯಕ್ಕೊಳಗಾದ ವ್ಯಕ್ತಿ ಕೋರಿಕೊಂಡರೆ ಕೌಟುಂಬಿಕ ಘಟನೆ ವರದಿಯನ್ನು ದಾಖಲಿಸುವುದು, ಮತ್ತು ಅದನ್ನು ಕೌಟುಂಬಿಕ ಹಿಂಸೆ ನಡೆದ ಸ್ಥಳದ ವ್ಯಾಪ್ತಿಯಲ್ಲಿ ಬರುವ ಮ್ಯಾಜಿಸ್ಟ್ರೇಟ್ ಮತ್ತು ರಕ್ಷಣಾ ಅಧಿಕಾರಿಗೆ ಕೌಟುಂಬಿಕ ಘಟನಾ ವರದಿ(ಡಿಐಆರ್)ಯನ್ನು ಕಳುಹಿಸಿಕೊಡುವುದು;<br>ಬಿ. ಅನ್ಯಾಯಕ್ಕೊಳಗಾದ ವ್ಯಕ್ತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವುದು ಮತ್ತು ವೈದ್ಯಕೀಯ ವರದಿಯ ಪ್ರತಿಯನ್ನು ರಕ್ಷಣಾ ಅಧಿಕಾರಿ ಹಾಗೂ ಸ್ಥಳೀಯ ಪೊಲೀಸ್ ಠಾಣೆಗೆ ಕಳುಹಿಸುವುದು;<br>ಸಿ. ಅನ್ಯಾಯಕ್ಕೊಳಗಾದ ವ್ಯಕ್ತಿಯು ಆಶ್ರಯ ಗೃಹದಲ್ಲಿ ಆಸರೆ ಬೇಕೆಂದು ಕೋರಿಕೊಂಡರೆ ಆಕೆಗೆ ಅದನ್ನು ಒದಗಿಸುವುದನ್ನು ಖಾತ್ರಿಪಡಿಸುವುದು ಮತ್ತು ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಆಸರೆ ಒದಗಿಸಿದ ಗೃಹದ ಕುರಿತು ಸ್ಥಳೀಯ ಪೊಲೀಸ್ ಠಾಣೆಗೆ ವರದಿಯೊಂದನ್ನು ಕಳುಹಿಸುವುದು |



[redacted]

| | |
|---|---|
| | **ಎಸ್. 19 ನಿವಾಸದ ಆದೇಶ**<br>ಕೌಟುಂಬಿಕ ಹಿಂಸೆ ನಡೆದಿದೆ ಎಂದು ನಂಬಿಕೆಯಾದರೆ, ಮ್ಯಾಜಿಸ್ಟ್ರೇಟರು ಈ ಕೆಳಕಂಡಂತೆ ನಿವಾಸದ ಆದೇಶವನ್ನು ಹೊರಡಿಸಬಹುದು –<br>(ಎ) ಪ್ರತಿವಾದಿಗೆ ಹಂಚಿಕೊಂಡ ಮನೆಯಲ್ಲಿ ಕಾನೂನಾತ್ಮಕ ಅಥವಾ ಸಮಾನ ಹಿತಾಸಕ್ತಿಯಿದ್ದರೂ ಸರಿ, ಇಲ್ಲವಾದರೂ ಸರಿ, ಅನ್ಯಾಯಕ್ಕೊಳಗಾದ ವ್ಯಕ್ತಿಯ ಹಂಚಿಕೊಂಡ ಮನೆಯ ಸ್ವಾಮ್ಯವನ್ನು ಕಿತ್ತುಕೊಳ್ಳುವುದು ಅಥವಾ ಯಾವುದೇ ರೀತಿಯಲ್ಲಿ ಅದಕ್ಕೆ ಧಕ್ಕೆ ಒದಗಿಸುವುದರಿಂದ ಪ್ರತಿವಾದಿಯನ್ನು ನಿರ್ಬಂಧಿಸುವುದು<br>(ಬಿ) ಹಂಚಿಕೊಂಡ ಮನೆಯಿಂದ ಪ್ರತಿವಾದಿಗೆ ಆತನೇ ಹೊರಹೋಗುವಂತೆ ನಿರ್ದೇಶಿಸುವುದು; (ಮಹಿಳೆಯಾಗಿರುವ ಯಾರೇ ವ್ಯಕ್ತಿಯ ವಿರುದ್ಧ (ಬಿ) ಕಲಂ ಅಡಿಯಲ್ಲಿ ಯಾವುದೇ ಆದೇಶವನ್ನು ನೀಡುವಂತಿಲ್ಲ)<br>(ಸಿ) ಅನ್ಯಾಯಕ್ಕೊಳಗಾದ ವ್ಯಕ್ತಿಯು ಇರುವ ಹಂಚಿಕೊಂಡ ಮನೆಯ ಯಾವುದೇ ಭಾಗದಲ್ಲಿ ಪ್ರತಿವಾದಿ ಅಥವಾ ಆತನ ಯಾವುದೇ ಸಂಬಂಧಿಕರು ಪ್ರವೇಶಿಸುವುದಕ್ಕೆ ನಿರ್ಬಂಧಿಸುವುದು;<br>(ಡಿ) ಪ್ರತಿವಾದಿಯು ಹಂಚಿಕೊಂಡ ಮನೆಯನ್ನು ಪ್ರತ್ಯೇಕಿಸುವುದು ಅಥವಾ ವಿಲೇವಾರಿ ಮಾಡುವುದು ಅಥವಾ ಅಡ್ಡಿಪಡಿಸುವುದನ್ನು ನಿರ್ಬಂಧಿಸುವುದು;<br>(ಇ) ಮ್ಯಾಜಿಸ್ಟ್ರೇಟರ ಅನುಮತಿ ಇದ್ದಾಗ ಹೊರತುಪಡಿಸಿದರೆ, ಹಂಚಿಕೊಂಡ ಮನೆಯಲ್ಲಿ ಪ್ರತಿವಾದಿಯು ತನ್ನ ಹಕ್ಕುಗಳನ್ನು ಚಲಾಯಿಸುವುದನ್ನು ನಿರ್ಬಂಧಿಸುವುದು; ಅಥವಾ<br>(ಎಫ್) ಸಂದರ್ಭಗಳು ಬಂದರೆ, ಹಂಚಿಕೊಂಡ ಮನೆಯಲ್ಲಿ ಅನ್ಯಾಯಕ್ಕೊಳಗಾದ ವ್ಯಕ್ತಿಯು ಹೊಂದಿದ್ದ ಮಟ್ಟದಲ್ಲಿಯೇ ಇರುವ ಪರ್ಯಾಯ ವಸತಿ ವ್ಯವಸ್ಥೆಯನ್ನು ಪ್ರತಿವಾದಿಯು ಮಾಡಿಕೊಡಬೇಕು ಅಥವಾ ಅಂತಹುದಕ್ಕೆ ಬಾಡಿಗೆಯನ್ನು ಕೊಡಬೇಕು |
| | **ಎಸ್.20 ಹಣಕಾಸು ಪರಿಹಾರಕ್ಕೆ ಆದೇಶ:**<br>ಮ್ಯಾಜಿಸ್ಟ್ರೇಟರು ಕೌಟುಂಬಿಕ ಹಿಂಸೆಯ ಪರಿಣಾಮವಾಗಿ ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಈ ಕೆಳಗಿನವು ಸೇರಿದಂತೆ ಅನುಭವಿಸಿದ ಖರ್ಚುಗಳು ಹಾಗೂ ನಷ್ಟವನ್ನು ಸರಿದೂಗಿಸಲು ಸೂಕ್ತವಾದ, ನ್ಯಾಯಯುತ ಮತ್ತು ತಕ್ಕಷ್ಟು ಹಣಕಾಸು ಪರಿಹಾರವನ್ನು ನೀಡುವಂತೆ – ಒಂದೇ ಸಲ ಹಣ ಕೊಡುವುದು ಅಥವಾ ಮಾಸಿಕವಾಗಿ ನಿರ್ವಹಣೆಗೆ ಹಣ ನೀಡುವುದು – ಪ್ರತಿವಾದಿಗೆ ನಿರ್ದೇಶನ ನೀಡಬಹುದು.<br>• ಆದಾಯದ ನಷ್ಟ<br>• ವೈದ್ಯಕೀಯ ಖರ್ಚುಗಳು<br>• ಹಾಳು ಮಾಡಿದ್ದು, ಹಾನಿ ಅಥವಾ ಆಸ್ತಿಯಿಂದ ಹೊರಹಾಕಿದ್ದರಿಂದ ಆದ ನಷ್ಟ<br>• ನಿರ್ವಹಣೆ |
| | **ಎಸ್.21 ಕಸ್ಟಡಿ ಆದೇಶ:**<br>ಮ್ಯಾಜಿಸ್ಟ್ರೇಟರು ಪರಿಹಾರದ ವಿಚಾರಣೆಯ ಯಾವುದೇ ಹಂತದಲ್ಲಿ ಅನ್ಯಾಯಕ್ಕೊಳಗಾದ ವ್ಯಕ್ತಿಗೆ ಅಥವಾ ಆಕೆಯ ಪರವಾಗಿ ಅರ್ಜಿಯನ್ನು ಸಲ್ಲಿಸುತ್ತಿರುವ ವ್ಯಕ್ತಿಗೆ ಯಾವುದೇ ಮಗು(ಮಕ್ಕಳ) ತಾತ್ಕಾಲಿಕ ಕಸ್ಟಡಿಯನ್ನು ನೀಡುವಂತೆ  ಆದೇಶಿಸಬಹುದು ಮತ್ತು ಅಗತ್ಯಬಿದ್ದರೆ, ಪ್ರತಿವಾದಿಗೆ ಮಗುವನ್ನು(ಮಕ್ಕಳನ್ನು) ನೋಡಲು ವ್ಯವಸ್ಥೆಯನ್ನು ಒದಗಿಸಬಹುದು. ಮಗು(ಮಕ್ಕಳ) ಹಿತಾಸಕ್ತಿಗೆ ಹಾನಿಯುಂಟು ಮಾಡುಬಹುದು ಎಂದು ಅನ್ನಿಸಿದರೆ ಮ್ಯಾಜಿಸ್ಟ್ರೇಟರು ಪ್ರತಿವಾದಿಗೆ ಭೇಟಿ ಮಾಡಲು ಒಪ್ಪಿಗೆ ಕೊಡಲು ನಿರಾಕರಿಸಬಹುದು. |

| | |
|---|---|
| | ಎಸ್.22 ಪರಿಹಾರದ ಆದೇಶ<br>ಮ್ಯಾಜಿಸ್ಟ್ರೇಟರು ಕೌಟುಂಬಿಕ ಹಿಂಸೆಯ ಕೃತ್ಯದಿಂದಾಗಿ ಮಾನಸಿಕ ಹಿಂಸೆ ಮತ್ತು ಭಾವನಾತ್ಮಕ ಒತ್ತಡವೂ ಸೇರಿದಂತೆ ಮಹಿಳೆಗೆ ಆಗಿರುವ ಗಾಯಗಳಿಂದಾದ ಹಾನಿಗೆ ಪರಿಹಾರವನ್ನು ನೀಡುವಂತೆ ಪ್ರತಿವಾದಿಗೆ ಆದೇಶವನ್ನು ನೀಡಬಹುದು. |
| ಮಧ್ಯಂತರ ಮತ್ತು ಏಕಪಕ್ಷೀಯ ಆದೇಶಗಳು | ಎಸ್.23 ಮ್ಯಾಜಿಸ್ಟ್ರೇಟರು ಎಸ್.ಎಸ್. 18, 19, 20, 21 ಮತ್ತು 22 ಅಡಿಯಲ್ಲಿ (ಪ್ರತಿವಾದಿಯು ಎಸಗುತ್ತಿರುವ/ಎಸಗಿದ/ಎಸಗಬಹುದಾದ ಕೌಟುಂಬಿಕ ಹಿಂಸೆಯ ಕೃತ್ಯದ ಮೊದಲ ನೋಟದ ಸಾಕ್ಷ್ಯದ ಆಧಾರದಲ್ಲಿ) ಮಧ್ಯಂತರ ಮತ್ತು ಏಕಪಕ್ಷೀಯ ಆದೇಶಗಳನ್ನು ನೀಡಬಹುದು. |
| ರಕ್ಷಣಾ ಆದೇಶದ ಉಲ್ಲಂಘನೆಗೆ ದಂಡ | ಎಸ್.31: ಪ್ರತಿವಾದಿಯು ರಕ್ಷಣಾ ಆದೇಶ ಅಥವಾ ಮಧ್ಯಂತರ ರಕ್ಷಣಾ ಆದೇಶವನ್ನು ಉಲ್ಲಂಘಿಸುವುದು ಕೌಟುಂಬಿಕ ಹಿಂಸೆ ಕಾಯಿದೆಯಡಿಯಲ್ಲಿ ಒಂದು ಅಪರಾಧವಾಗಿದ್ದು, ಇದಕ್ಕೆ ಒಂದು ವರ್ಷದವರೆಗಿನ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ. |
| 5. ಅಪರಾಧಗಳು | ಕೌಟುಂಬಿಕ ಹಿಂಸೆಯಡಿಯಲ್ಲಿ ಶಿಕ್ಷೆ ವಿಧಿಸಬಹುದಾದ ಕ್ರಿಮಿನಲ್ ಅಪರಾಧಗಳು ಯಾವುವು? |
| ವೈವಾಹಿಕ ಅತ್ಯಾಚಾರ ಕ್ರಿಮಿನಲ್ ಅಪರಾಧವೇ? | ಸಂಖ್ಯೆ – ಅತ್ಯಾಚಾರದ ಕುರಿತ ಎಸ್. 375 ದಂಡ ಸಂಹಿತೆ (ಕ್ರಿಮಿನಲ್ ಕಾನೂನು (ತಿದ್ದುಪಡಿ) ಕಾಯಿದೆ 2013 ರ ಪ್ರಕಾರ ತಿದ್ದುಪಡಿ ಮಾಡಿದಂತೆ) ಇದನ್ನು ಹೊರತುಪಡಿಸಿ/ ವಿನಾಯಿತಿ<br>• ಗಂಡ ಮತ್ತು ಹೆಂಡತಿ ಪ್ರತ್ಯೇಕಗೊಂಡಿದ್ದರೆ: ಐಪಿಸಿ ಎಸ್.376ಬಿ<br>• ಹೆಂಡತಿಯು 18 ವರ್ಷ ಅಥವಾ ಅದಕ್ಕಿಂತ ಕೆಳಗೆ ಇದ್ದರೆ (ಇಂಡಿಪೆಂಡೆಂಟ್ ಥಾಟ್ ಪ್ರತಿಯಾಗಿ ಭಾರತ ಸರ್ಕಾರ 2013ರ ಡಬ್ಲ್ಯುಪಿ.(ಸಿ) 382, ಸುಪ್ರೀಂ ಕೋರ್ಟ್, 11 ಅಕ್ಟೋಬರ್ 2017 |
| ದುಷ್ಕರ್ಮಿಗಳಿಗೆ ಶಿಕ್ಷೆ | ಮ್ಯಾಜಿಸ್ಟ್ರೇಟರು ಪ್ರಕರಣವೊಂದರಲ್ಲಿ ಶಿಕ್ಷೆ ನೀಡುವ ನಿರ್ಧಾರವನ್ನು ಪೊಲೀಸರು ಸಲ್ಲಿಸಿದ ವರದಿಯ ಆಧಾರದ ಮೇಲೆ ಕೈಗೊಳ್ಳುತ್ತಾರೆ. |
| ಕ್ರಿಮಿನಲ್ ಶಾಸನಗಳು | |
| ಕಾಯಿದೆಯಡಿಯಲ್ಲಿ ಯಾವ ಶಿಕ್ಷೆಗಳನ್ನು ವಿಧಿಸಬಹುದು? | ಐಪಿಸಿ ನೋಡಿ |

## ಕೌಟುಂಬಿಕ ಹಿಂಸೆಯಿಂದ ಮಹಿಳೆಯರು ಮತ್ತು ಹುಡುಗಿಯರ ರಕ್ಷಣೆ

## ಸುಪ್ರೀಂ ಕೋರ್ಟ್ ಪರಿಷ್ಕರಣೆ 2016–17

### 1. ಕೌಟುಂಬಿಕ ಹಿಂಸೆಯ ದುಷ್ಕರ್ಮಿಗಳು ಪುರುಷರು ಅಥವಾ ಮಹಿಳೆಯರು ಆಗಿರಬಹುದು

- ಕೌಟುಂಬಿಕ ಹಿಂಸೆಯನ್ನು ಪುರುಷರು ಮತ್ತು ಮಹಿಳೆಯರು ಇಬ್ಬರೂ ಎಸಗುತ್ತಾರೆ. ಕೌಟುಂಬಿಕ ಹಿಂಸೆಯ ಸಂತ್ರಸ್ತರಾದವರು, ಪುರುಷರು ಅಥವಾ ಮಹಿಳೆಯರು ಎಸಗಿದ ಕೌಟುಂಬಿಕ ಹಿಂಸೆಯ ಪ್ರಕರಣಗಳನ್ನು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣೆ ಕಾಯಿದೆ 2005 (ಪಿಡಬ್ಲ್ಯುಡಿವಿಎ) ಅಡಿಯಲ್ಲಿ ವರದಿ ಮಾಡಬಹುದಾಗಿದೆ. ಉದಾಹರಣೆಗೆ, ಮಹಿಳೆಯೊಬ್ಬರು ಗಂಡ, ಮತ್ತು ಒಂದೇ ಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿದ್ದ ಪಕ್ಷದಲ್ಲಿ ಅತ್ತೆ, ಭಾವಮೈದುನ ಅಥವಾ ನಾದಿನಿಯರು ಎಸಗಿದ ಕೌಟುಂಬಿಕ ಹಿಂಸೆಯನ್ನು ವರದಿ ಮಾಡಬಹುದಾಗಿದೆ. (*ಹಿರಲ್ ಪಿ. ಹರ್ಸೊರ ಮತ್ತು ಇತರರು ವಿರುದ್ಧ ಕುಸುಮ್ ನರೋತ್ತಮದಾಸ್ ಹರ್ಸೊರ* ಮತ್ತು ಇತರರು, ಸುಪ್ರೀಂ ಕೋರ್ಟ್ ಮೇಲ್ಮನವಿ 2016ರ ಸಂಖ್ಯೆ 10084)
- ಪಿಡಬ್ಲ್ಯುಡಿವಿಎ ಅಡಿಯಲ್ಲಿ, ಪುರುಷರಂತೆಯೇ, ಮಹಿಳೆಯರು ಕೂಡ ಇನ್ನೊಂದು ಮಹಿಳೆಯ ವಿರುದ್ಧ ದೈಹಿಕ ಶೋಷಣೆ, ಮೌಖಿಕ ಶೋಷಣೆ, ಭಾವನಾತ್ಮಕ ಶೋಷಣೆ, ಆರ್ಥಿಕ ಶೋಷಣೆ ಮತ್ತು ಲೈಂಗಿಕ ಶೋಷಣೆಯ ಕೃತ್ಯಗಳನ್ನು ಎಸಗಬಹುದಾಗಿದೆ.
- ಕೌಟುಂಬಿಕ ಹಿಂಸೆಯನ್ನು ವಯಸ್ಕರು ಮತ್ತು ಮಕ್ಕಳು (18 ವರ್ಷ ಕೆಳಗೆ ಇರುವ ವ್ಯಕ್ತಿಗಳು) ಎಸಗಬಹುದಾಗಿದೆ. ಮಕ್ಕಳು ಕೂಡ ವಯಸ್ಕರೊಬ್ಬರು ನಡೆಸುವ ಕೌಟುಂಬಿಕ ಹಿಂಸೆಯ ಕೃತ್ಯಗಳಿಗೆ ಸಹಾಯ ಮಾಡಿದ್ದಕ್ಕೆ ಮತ್ತು ಬೆಂಬಲಿಸಿದ್ದಕ್ಕೆ ಬಾಧ್ಯರಾಗುತ್ತಾರೆ. (*ಹಿರಲ್ ಪಿ. ಹರ್ಸೊರ ಮತ್ತು ಇತರರು ವಿರುದ್ಧ ಕುಸುಮ್ ನರೋತ್ತಮದಾಸ್ ಹರ್ಸೊರ* ಮತ್ತು ಇತರರು, ಸುಪ್ರೀಂ ಕೋರ್ಟ್ ಮೇಲ್ಮನವಿ 2016ರ ಸಂಖ್ಯೆ 10084)

### 2. 'ಕೌಟುಂಬಿಕ ಸಂಬಂಧ'ದ ವ್ಯಾಖ್ಯಾನ

- 'ಕೌಟುಂಬಿಕ ಸಂಬಂಧ'ವನ್ನು ಒಂದು ತುಂಬ ವಿಶಾಲವಾದ ಮತ್ತು ನಮ್ಯ ವಿಧಾನದಲ್ಲಿ ಅರ್ಥೈಸಬೇಕಾಗಿದೆ: ರಕ್ತ ಅಥವಾ ಮದುವೆಯಿಂದ ಸಂಬಂಧ ಹೊಂದಿದ ಪುರುಷ ಮತ್ತು ಮಹಿಳೆಯರ ನಡುವಣ ಎಲ್ಲ ಬಗೆಯ ಕೌಟುಂಬಿಕ ಸಂಬಂಧಗಳಿಗೆ ಕೌಟುಂಬಿಕ ಹಿಂಸೆಯು ಅನ್ವಯಿಸುತ್ತದೆ. (*ಹಿರಲ್ ಪಿ. ಹರ್ಸೊರ* ಮತ್ತು ಇತರರು *ವಿರುದ್ಧ ಕುಸುಮ್ ನರೋತ್ತಮದಾಸ್ ಹರ್ಸೊರ* ಮತ್ತು ಇತರರು, ಸುಪ್ರೀಂ ಕೋರ್ಟ್ ಮೇಲ್ಮನವಿ 2016ರ ಸಂಖ್ಯೆ 10084)
- ನ್ಯಾಯಸಮ್ಮತವಾಗಿ ಪ್ರತ್ಯೇಕಗೊಂಡ ದಂಪತಿಯನ್ನು 'ಕೌಟುಂಬಿಕ ಸಂಬಂಧ' ವ್ಯಾಖ್ಯಾನದಲ್ಲಿ ಒಳಗೊಳ್ಳಲಾಗಿದೆ: ನ್ಯಾಯಸಮ್ಮತವಾಗಿ ಪ್ರತ್ಯೇಕವಾಗುವ ತೀರ್ಪಿನ ಹೊರತಾಗಿಯೂ, ಅವರು ಒಟ್ಟಿಗೇ ಜೀವಿಸಿರದಿದ್ದರೂ, ಗಂಡ ಮತ್ತು ಹೆಂಡತಿಯ ನಡುವಣ ಕಾನೂನಾತ್ಮಕ ಸಂಬಂಧ ಮುಂದುವರೆಯುತ್ತದೆ: ವಿಚ್ಛೇದನದ ತೀರ್ಪಿಗೂ ಹಾಗೂ ನ್ಯಾಯಸಮ್ಮತ ಪ್ರತ್ಯೇಕಗೊಳ್ಳುವಿಕೆಗೂ ವ್ಯತ್ಯಾಸವಿದೆ; ಮೊದಲನೆಯದರಲ್ಲಿ ವೈವಾಹಿಕ ಸ್ಥಾನಮಾನಗಳು ಸಂಪೂರ್ಣ ಪ್ರತ್ಯೇಕಗೊಂಡಿರುತ್ತವೆ ಮತ್ತು ಇಬ್ಬರೂ ಗಂಡ, ಹೆಂಡತಿಯರಾಗಿ ಉಳಿದಿರುವುದಿಲ್ಲ; ಆದರೆ ಎರಡನೆಯದರಲ್ಲಿ ಅಂದರೆ ನ್ಯಾಯಸಮ್ಮತ ಪ್ರತ್ಯೇಕಗೊಂಡಿರುವುದರಲ್ಲಿ ಗಂಡ, ಹೆಂಡತಿಯ ನಡುವಣ ಸಂಬಂಧ ಮುಂದುವರೆದಿರುತ್ತದೆ ಮತ್ತು ಸಂಬಂಧ ಮುರಿಯದೇ ಇರುವುದರಿಂದ ಕಾನೂನಾತ್ಮಕ ಸಂಬಂಧವೂ ಮುಂದುವರೆಯುತ್ತದೆ." (*ಕೃಷ್ಣ ಭಟ್ಟಾಚಾರ್ಯ ವಿರುದ್ಧ ಸಾರಥಿ ಚೌಧುರಿ & ಇತರರು*, ಕ್ರಿಮಿನಲ್ ಮೇಲ್ಮನವಿ 2015ರ ಸಂಖ್ಯೆ 1545).

### 3. ಪಿಡಬ್ಲ್ಯುಡಿವಿಎ ಅರ್ಜಿಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ದೃಷ್ಟಿಕೋನ

- ನ್ಯಾಯಾಲಯಗಳು ಪಿಡಬ್ಲ್ಯುಡಿವಿಎ ಅರ್ಜಿಗಳಿಗೆ ಸಂಬಂಧಿಸಿದಂತೆ ಸಂವೇದನಾಶೀಲ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕಿದೆ: ಪ್ರಕರಣವನ್ನು ಪರಿಗಣಿಸುವಾಗ, ಸಂತ್ರಸ್ತರು ತನ್ನನ್ನು ತಾನು ಯಾವ ಸನ್ನಿವೇಶಗಳಲ್ಲಿ ಮತ್ತು ಸಂದರ್ಭದಲ್ಲಿ ಕಂಡುಕೊಳ್ಳುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಹಾಗೂ ಗ್ರಹಿಸಲು ಅವರು ಪ್ರಯತ್ನಿಸಬೇಕು, ಜೊತೆಗೆ ಸಂವಿಧಾನದ 14, 15 ಮತ್ತು 21ನೇ ಪರಿಚ್ಛೇದಗಳ ಅಡಿಯಲ್ಲಿ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ, ಕುಟುಂಬದೊಳಗೆ ಘಟಿಸುವ ಯಾವುದೇ ರೀತಿಯ ಹಿಂಸೆಯ ಸಂತ್ರಸ್ತರಾದ ಮಹಿಳೆಯರಿಗೆ ಪರಿಣಾಮಕಾರಿ ರಕ್ಷಣೆಯ ಹಕ್ಕುಗಳನ್ನು ಒದಗಿಸುವ ನಿಟ್ಟಿನಲ್ಲಿ ಸಂಸತ್ತು ಪಿಡಬ್ಲ್ಯುಡಿವಿಎ



[redacted]

ಕಾಯಿದೆಯನ್ನು ಜಾರಿಗೊಳಿಸಿದೆ. (*ಕೃಷ್ಣ ಭಟ್ಟಾಚಾರ್ಯ ವಿರುದ್ಧ ಸಾರಥಿ ಚೌಧುರಿ & ಇತರರು,* ಕ್ರಿಮಿನಲ್ ಮೇಲ್ಮನವಿ 2015ರ ಸಂಖ್ಯೆ 1545).

- ಪಿಡಬ್ಲ್ಯುಡಿವಿಎ ಅಡಿಯಲ್ಲಿ ಒಂದು ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ, ಅದನ್ನು ತಿದ್ದುಪಡಿ ಮಾಡಬಹುದಾಗಿದೆ. ತಿದ್ದುಪಡಿಯು ತರುವಾಯದ ಘಟನೆಗಳ ದೃಷ್ಟಿಯಲ್ಲಿ ಅಥವಾ ಮೊಕದ್ದಮೆಗಳ ಬಾಹುಳ್ಯವನ್ನು ತಪ್ಪಿಸಲು ಅಗತ್ಯವೆನ್ನಿಸಿದರೆ, ನ್ಯಾಯಾಲಯವು ಅಂತಹ ತಿದ್ದುಪಡಿಗೆ ಅವಕಾಶ ಮಾಡಿಕೊಡುವ ಅಧಿಕಾರ ಹೊಂದಿದೆ. ಆದಾಗ್ಯೂ, ನ್ಯಾಯಾಲಯವು ತಿದ್ದುಪಡಿಗಳನ್ನು ಮಾಡಲು ಬಹಳ ಅಪರೂಪಕ್ಕೆ ತನ್ನ ಅಧಿಕಾರವನ್ನು ಬಳಸುವುದು ಮತ್ತು ಕೇವಲ ಸೀಮಿತ ಸನ್ನಿವೇಶಗಳಲ್ಲಿ ಎಚ್ಚರಿಕೆಯಿಂದ ಬಳಸುವುದು. (*ಕುನಪರೆಡ್ಡಿ ನೂಕಲ ಶಂಖ ಬಾಲಾಜಿ ವಿರುದ್ಧ ಕುನುಪರೆಡ್ಡಿ ಸ್ವರ್ಣ ಕುಮಾರಿ & ಇತರರು,* ಸುಪ್ರೀಂ ಕೋರ್ಟ್ ಕ್ರಿಮಿನಲ್ ಮೇಲ್ಮನವಿ 2016ರ ಸಂಖ್ಯೆ 516).

4. ಸ್ತ್ರೀಧನ ಆಸ್ತಿಯ ವ್ಯಾಖ್ಯಾನ

- ಮಹಿಳೆಗೆ ಮದುವೆಗೆ ಮೊದಲು, ಮದುವೆಯ ಸಮಯದಲ್ಲಿ ಅಥವಾ ತವರಿನಿಂದ ಕಳಿಸುವ ಸಮಯದಲ್ಲಿ ಅಥವಾ ನಂತರದಲ್ಲಿ ನೀಡಿದ ಉಡುಗೊರೆ ನೀಡಿದ ಆಸ್ತಿಗಳು ಆಕೆಯ *ಸ್ತ್ರೀಧನ* ಆಸ್ತಿಯಾಗುತ್ತದೆ. *ಸ್ತ್ರೀಧನ* ಆಸ್ತಿಯು ಹೆಂಡತಿ ಮತ್ತು ಗಂಡನ ಜಂಟಿ ಆಸ್ತಿಯಲ್ಲ. ಅದು ಹೆಂಡತಿಗೆ ಸಂಪೂರ್ಣವಾಗಿ ಸೇರಿದ ಆಸ್ತಿಯಾಗಿದ್ದು, ಗಂಡನಿಗೆ ಅದರ ಮೇಲೆ ಯಾವುದೇ ನಿಯಂತ್ರಣ ಇರುವುದಿಲ್ಲ. ಆತ ಅದನ್ನು ಕಷ್ಟಕಾಲದಲ್ಲಿ ಬಳಕೆ ಮಾಡಿಕೊಳ್ಳಬಹುದು, ಆದರೆ ಆ ಆಸ್ತಿಯನ್ನು ಅಥವಾ ಅದರ ಮೌಲ್ಯವನ್ನು ತನ್ನ ಹೆಂಡತಿಗೆ ಮರಳಿಸುವ ನೈತಿಕ ಭಾದ್ಯತೆಯನ್ನು ಹೊಂದಿರುತ್ತಾನೆ. (*ಕೃಷ್ಣ ಭಟ್ಟಾಚಾರ್ಯ ವಿರುದ್ಧ ಸಾರಥಿ ಚೌಧುರಿ & ಇತರರು,* ಕ್ರಿಮಿನಲ್ ಮೇಲ್ಮನವಿ 2015ರ ಸಂಖ್ಯೆ 1545, ಎಸ್. ಆರ್. ರಾಘವಾಚಾರಿಯವರ ಹಿಂದೂ ಕಾನೂನು ತತ್ವಗಳು ಮತ್ತು ನಿದರ್ಶನಗಳು, (8ನೇ ಆವೃತ್ತಿ), ಪ್ರೊ. ಎಸ್. ವೆಂಕಟರಾಮನ್ ಅವರು ಸಂಪಾದಿಸಿದ್ದು, ಪ್ಯಾರಾ ಎಸ್ 468–469, ಇದನ್ನು ಉಲ್ಲೇಖಿಸುತ್ತ)

5. ಆರ್ಥಿಕ ಹಿಂಸೆ

- ಕೆಲವು ಬಗೆಯ ಕೌಟುಂಬಿಕ ಹಿಂಸೆಗಳನ್ನು, ಹಲವಾರು ವರ್ಷಗಳ ಹಿಂದೆಯೇ ನಿಂದನೆ ಅಥವಾ ಶೋಷಣೆಯು ಆರಂಭಗೊಂಡಿದ್ದರೂ, ನಂತರದಲ್ಲಿ ಅಪರಾಧ ಅಥವಾ ಹಿಂಸೆಯು ಮುಂದುವರೆದಿದ್ದರೆ, ಅದನ್ನು ವರದಿ ಮಾಡಬಹುದು. ಅಪರಾಧದ ಮುಂದುವರೆದಿರುವ ಲಕ್ಷಣವು ಪಿಡಬ್ಲ್ಯುಡಿವಿಎ ಅಡಿಯಲ್ಲಿ ಅರ್ಜಿಯೊಂದು ಕಾಲ–ಮಿತಿ ಮೀರುವುದನ್ನು ತಡೆಗಟ್ಟುತ್ತದೆ. ಉದಾಹರಣೆಗೆ, ಗಂಡ ಹೆಂಡತಿಗೆ ಆಕೆಯ ಹಕ್ಕುಳ್ಳ ಆಸ್ತಿಯನ್ನು (ಉದಾ: *ಸ್ತ್ರೀಧನ* ಆಸ್ತಿ) ಲಭ್ಯಪಡಿಸಿಕೊಳ್ಳುವುದನ್ನು ಮತ್ತು ಬಳಸಿಕೊಳ್ಳುವುದನ್ನು ತಡೆಯುವ ಪ್ರಕರಣದಲ್ಲಿ, ಗಂಡನ ವರ್ತನೆಯು ಮುಂದುವರೆದಿರುವವರೆಗೆ, ಆ ವರ್ತನೆಯು ಎಷ್ಟು ದಿನಗಳ ಹಿಂದೆಯೇ ಶುರುವಾಗಿದ್ದರೂ ಸರಿಯೇ, ಆಕೆಗೆ ಗಂಡನ ವಿರುದ್ಧ ವಾರಸು ಕೋರಿಕೆಯನ್ನು ಸಲ್ಲಿಸಲು ಹಕ್ಕು ಇರುತ್ತದೆ: "ಅನ್ಯಾಯಕ್ಕೊಳಗಾದ ವ್ಯಕ್ತಿಯ ಸ್ಥಾನಮಾನವು ಉಳಿದಿರುವವರೆಗೆ ಮತ್ತು ಸ್ತ್ರೀಧನವು ಗಂಡನ ಸ್ವಾಧೀನದಲ್ಲಿ ಇರುವವರೆಗೆ, ಹೆಂಡತಿಯು 2005ರ (ಪಿಡಬ್ಲ್ಯುಡಿವಿಎ) ಕಾಯಿದೆಯ 12ನೇ ಪರಿಚ್ಛೇದದ ಅಡಿಯಲ್ಲಿ ತನ್ನ ವಾರಸು ಕೋರಿಕೆಯನ್ನು ಮಂಡಿಸಬಹುದಾಗಿದೆ". (*ಕೃಷ್ಣ ಭಟ್ಟಾಚಾರ್ಯ ವಿರುದ್ಧ ಸಾರಥಿ ಚೌಧುರಿ & ಇತರರು,* ಕ್ರಿಮಿನಲ್ ಮೇಲ್ಮನವಿ 2015ರ ಸಂಖ್ಯೆ 1545)

6. ಸುಪ್ರೀಂ ಕೋರ್ಟ್‌ನಿಂದ ಇನ್ನೂ ಬಾಕಿ ಇರುವ ಐಪಿಸಿ ಎಸ್.498ರ ಅರ್ಜಿಯ ಕುರಿತು ಹೊಸ ನಿರ್ದೇಶನಗಳು

- ಭಾರತೀಯ ದಂಡ ಸಂಹಿತೆಯ (ಐಪಿಸಿ) ನಿರ್ದಿಷ್ಟ ಪರಿಚ್ಛೇದಗಳನ್ನು ಕುಟುಂಬದ ಸಂದರ್ಭದಲ್ಲಿ ಹಿಂಸೆಯನ್ನು ಅನುಭವಿಸುತ್ತಿರುವ ಮಹಿಳೆಗೆ ಕೊಡಬೇಕಾದ ರಕ್ಷಣೆಯನ್ನು ಸಶಕ್ತಗೊಳಿಸಲು ಪರಿಚಯಿಸಲಾಗಿದೆ. ಐಪಿಸಿ ಎಸ್.498 ಮಹಿಳೆಯರನ್ನು ಅವರ ಗಂಡ ಅಥವಾ ಅವರ ಗಂಡನ ಕುಟುಂಬ ಬಂಧುಗಳು ಎಸಗುವ ಕ್ರೌರ್ಯದಿಂದ ರಕ್ಷಿಸುವ ಉದ್ದೇಶವನ್ನು ಹೊಂದಿದೆ. ಸುಪ್ರೀಂ ಕೋರ್ಟ್ ಇತ್ತೀಚಿನ ವರ್ಷಗಳಲ್ಲಿ ಐಪಿಸಿ ಎಸ್.498ಗೆ ಸಂಬಂಧಿಸಿದಂತೆ, ಅದರ ವ್ಯಾಪ್ತಿಯನ್ನು ನಿರ್ಬಂಧಿಸಿ ಪೊಲೀಸ್ ಅಧಿಕಾರಿಗಳು ಹಾಗೂ ನ್ಯಾಯಾಲಯಗಳಿಗೆ ಹಲವಾರು ಮಾರ್ಗದರ್ಶನಗಳು ಹಾಗೂ ನಿರ್ದೇಶನಗಳನ್ನು ನೀಡಿದೆ. ಸುಪ್ರೀಂ ಕೋರ್ಟ್ ಐಪಿಸಿ ಎಸ್.498ರ ಕುರಿತು ಮುಂದಿನ ನಿರ್ದೇಶನಗಳನ್ನು ನೀಡುವುದು ನವೆಂಬರ್ 2017ಕ್ಕೆ ಬಾಕಿ ಇದೆ.

7. ಲೈಂಗಿಕ ಅಪರಾಧಗಳ ಸಂತ್ರಸ್ತರಿಗೆ ಪರಿಹಾರದ ವಿಚಾರದಲ್ಲಿ ಹೊಸ ನಿರ್ದೇಶನಗಳು

- 2017ರ ಅಕ್ಟೋಬರ್ 12ರಂದು, ಸುಪ್ರೀಂ ಕೋರ್ಟ್ ಲೈಂಗಿಕ ಅಪರಾಧಗಳ ಹಾಗೂ ಆಸಿಡ್ ಧಾಳಿಯ ಸಂತ್ರಸ್ತರಿಗೆ ಪರಿಹಾರದ ಕುರಿತು ಕರಡು ಮಾದರಿ ನಿಯಮಗಳನ್ನು ರೂಪಿಸಲು ತಜ್ಞರ ಸಮಿತಿಯನ್ನು ರಚಿಸುವ ಆದೇಶವನ್ನು ನೀಡಿದೆ. ಸಮಿತಿಯು 2017, ಡಿಸೆಂಬರ್ 31ರ ಒಳಗೆ ವರದಿಯನ್ನು ನೀಡಬೇಕಿದೆ.



[redacted]

# ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದಿಂದ ಮಹಿಳೆಯರ ರಕ್ಷಣೆ

## ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆ, ನಿಷೇಧ ಮತ್ತು ನಿವಾರಣೆ) ಕಾಯಿದೆ 2013

## ವ್ಯಾಖ್ಯಾನಗಳು ಮತ್ತು ದೂರನ್ನು ನೀಡಲು ಕಾರ್ಯವಿಧಾನ

ಎ. ಪರಿಚಯ

1. 1997ರ ವಿಶಾಖಾ ವಿರುದ್ಧ[1] ರಾಜಾಸ್ತಾನ ರಾಜ್ಯದ ಮಹತ್ವದ ಪ್ರಕರಣದಲ್ಲಿ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಯಲು ಹಾಗೂ ಅದರ ವಿರುದ್ಧ ರಕ್ಷಿಸಲು ಮತ್ತು ಶಿಕ್ಷಿಸಲು ಕೌಟುಂಬಿಕ ಕಾನೂನಗಳು ಇಲ್ಲದಿರುವುದನ್ನು ಸುಪ್ರೀಂ ಕೋರ್ಟಿನ ಗಮನಕ್ಕೆ ತರಲಾಯಿತು. ನ್ಯಾಯಾಲಯವು ಲೈಂಗಿಕ ಕಿರುಕುಳವು[2] ಮಹಿಳೆಯರ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂಬುದನ್ನು ಗುರುತಿಸಿತು ಮತ್ತು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ಕಾನೂನು ವ್ಯಾಖ್ಯಾನವನ್ನು ಮತ್ತು ಅದರ ತಡೆಗೆ ಹಾಗೂ ನಿವಾರಣೆಗೆ ಮಾರ್ಗದರ್ಶನಗಳನ್ನು ಮೊಟ್ಟಮೊದಲ ಬಾರಿಗೆ ರೂಪಿಸಿತು (ವಿಶಾಖಾ ಮಾರ್ಗದರ್ಶನಗಳು).

2. ವಿಶಾಖಾ ಮಾರ್ಗದರ್ಶನಗಳು ತದನಂತರ ಮಹಿಳೆಗೆ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ (ತಡೆ, ನಿಷೇಧ ಮತ್ತು ನಿವಾರಣೆ) ಕಾಯಿದೆ 2013ರ ಮೂಲಕ ಶಾಸನದ ರೂಪ ಪಡೆಯಿತು (ಪಿಎಸ್‌ಎಚ್‌ಎ)

3. ಲೈಂಗಿಕ ಕಿರುಕುಳವು ಸಂವಿಧಾನದ 14ನೇ ಪರಿಚ್ಛೇದದ ಅಡಿಯಲ್ಲಿ ಮಹಿಳೆಯರ ಸಮಾನತೆಯ ಹಕ್ಕುಗಳ ಉಲ್ಲಂಘನೆ ಮತ್ತು ಸಂವಿಧಾನದ 21ನೇ ಪರಿಚ್ಛೇದದ ಅಡಿಯಲ್ಲಿ ಆಕೆಯ ಬದುಕಿನ ಮತ್ತು ಜೀವಿಸುವ ಹಕ್ಕಿನ ಉಲ್ಲಂಘನೆ ಎಂದು ಪಿಎಸ್‌ಎಚ್‌ಎ ಹೇಳುತ್ತದೆ.

4. ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆ ಮತ್ತು ಘನತೆಯಿಂದ ಕೆಲಸ ಮಾಡುವ ಹಕ್ಕು ಸಾರ್ವತ್ರಿಕವಾಗಿ ಮಾನ್ಯತೆ ಮಾಡಲಾದ ಮಾನವ ಹಕ್ಕುಗಳು ಎಂಬುದನ್ನು ಪಿಎಸ್‌ಎಚ್‌ಎ ಗುರುತಿಸುತ್ತದೆ.

ಬಿ. ವ್ಯಾಖ್ಯಾನಗಳು

5. ಲೈಂಗಿಕ ಕಿರುಕುಳವು ಈ ಕೆಳಗಿನ ಯಾವುದಾದರೂ ಒಂದು ಅಥವಾ ಹೆಚ್ಚು ಅನಪೇಕ್ಷಿತ ಕ್ರಿಯೆಗಳು ಅಥವಾ ನಡತೆಯನ್ನು ಒಳಗೊಂಡಿರುತ್ತದೆ (ನೇರ ಅಥವಾ ಪರೋಕ್ಷ) [ಪಿಎಸ್‌ಎಚ್‌ಎ ಎಸ್.2(ಎನ್)]:

1. ದೈಹಿಕ ಸಂಪರ್ಕ ಮತ್ತು ಮುಂದುವರೆದು ಮುಟ್ಟುವುದು;
2. ಲೈಂಗಿಕ ಅನಕೂಲಗಳಿಗಾಗಿ ಬೇಡಿಕೆ ಅಥವಾ ಕೋರಿಕೆ ಇಡುವುದು
3. ಲೈಂಗಿಕ ಅಭಿಪ್ರಾಯ ಅಥವಾ ಸೂಚನೆಗಳನ್ನು ಮಾಡುವುದು
4. ಅಶ್ಲೀಲ ಚಿತ್ರಗಳನ್ನು ತೋರಿಸುವುದು; ಅಥವಾ
5. ಇನ್ನಾವುದೇ ರೀತಿಯ ಲೈಂಗಿಕ ಲಕ್ಷಣದ ಅನಪೇಕ್ಷಿತ ದೈಹಿಕ, ಮೌಖಿಕ ಅಥವಾ ಮೌಖಿಕವಲ್ಲದ ನಡತೆ

6. ಈ ಕೆಳಗಿನ ಸನ್ನಿವೇಶಗಳು ಯಾವುದೇ ರೀತಿಯ ಅನಪೇಕ್ಷಿತ ಲೈಂಗಿಕ ಕ್ರಿಯೆಗಳು ಅಥವಾ ನಡತೆಗೆ ಸಂಬಂಧಿಸಿದ್ದರೆ ಅದೂ ಕೂಡ ಲೈಂಗಿಕ ಕಿರುಕುಳಕ್ಕೆ ಸಮಾನವಾಗಿರುತ್ತದೆ [(ಪಿಎಸ್‌ಎಚ್‌ಎ ಎಸ್.3(2)]

1. ಆಕೆಯ ಉದ್ಯೋಗದಲ್ಲಿ ಆದ್ಯತೆಯಿಂದ ನಡೆಸಿಕೊಳ್ಳುವ ಸೂಚಿತ ಅಥವಾ ಸುಸ್ಪಷ್ಟ ಭರವಸೆ; ಅಥವಾ
2. ಆಕೆಯ ಉದ್ಯೋಗದಲ್ಲಿ ಕೆಟ್ಟದಾಗಿ ನಡೆಸಿಕೊಳ್ಳುವ ಸೂಚಿತ ಅಥವಾ ಸುಸ್ಪಷ್ಟ ಬೆದರಿಕೆ; ಅಥವಾ
3. ಆಕೆಯ ಸದ್ಯದ ಅಥವಾ ಭವಿಷ್ಯದ ಉದ್ಯೋಗದ ಕುರಿತು ಸೂಚಿತ ಅಥವಾ ಸುಸ್ಪಷ್ಟ ಬೆದರಿಕೆ; ಅಥವಾ
4. ಆಕೆಯ ಕೆಲಸದಲ್ಲಿ ಹಸ್ತಕ್ಷೇಪ ಅಥವಾ ಆಕೆಗೆ ಭಯಹುಟ್ಟಿಸುವ ಅಥವಾ ನಿಂದನಾತ್ಮಕ ಅಥವಾ ವೈರತ್ವದ ಕೆಲಸದ ವಾತಾವರಣವನ್ನು ಹುಟ್ಟುಹಾಕುವುದು; ಅಥವಾ
5. ಆಕೆಯ ಆರೋಗ್ಯ ಅಥವಾ ಸುರಕ್ಷತೆಯ ಮೇಲೆ ದುಷ್ಪರಿಣಾಮ ಬೀರುವಂತೆ ಅವಮಾನಕರವಾಗಿ ನಡೆಸಿಕೊಳ್ಳುವುದು.

---

[1] (1997) 6 SCC 241.

[2] It defined sexual harassment as unwelcome sexually determined behaviour (whether directly or by implication) which included physical contact and advances; a demand or request for sexual favours; sexually coloured remarks; showing pornography; any other unwelcome physical, verbal or non-verbal conduct of a sexual nature.



[redacted]

7. ಕೆಲಸದ ಸ್ಥಳ ಎಂದರೆ ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ [(ಪಿಎಸ್‌ಎಚ್‌ಎ ಎಸ್.2(0)]

1. ಉತ್ಪಾದನೆ, ಪೂರೈಕೆ, ಮಾರಾಟ, ವಿತರಣೆ ಒಳಗೊಂಡಂತೆ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವ ಯಾವುದೇ ಸಂಸ್ಥೆ, ಎಂಟರ್‌ಪ್ರೈಸ್, ಕಚೇರಿ ಅಥವಾ ಘಟಕ;
2. ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಮಾಲೀಕತ್ವದಲ್ಲಿ ಇರುವ, ನಿಯಂತ್ರಣದಲ್ಲಿರುವ ಅಥವಾ ಹಣಕಾಸು ಒದಗಿಸುವ ಯಾವುದೇ ಇಲಾಖೆ, ಸಂಸ್ಥೆ, ಶಾಖೆ, ಕಚೇರಿ, ಘಟಕ
3. ಆಸ್ಪತ್ರೆಗಳು ಅಥವಾ ನರ್ಸಿಂಗ್ ಹೋಂಗಳು;
4. ಉದ್ಯೋಗಿಯು ಕೈಗೊಳ್ಳುವ ಪ್ರಯಾಣದ ಸಂದರ್ಭದಲ್ಲಿ ಒದಗಿಸುವ ಸಾರಿಗೆಯನ್ನೂ ಒಳಗೊಂಡಂತೆ, ಉದ್ಯೋಗದ ಕಾರಣದಿಂದ ಅಥವಾ ಉದ್ಯೋಗದ ಸಂದರ್ಭದಲ್ಲಿ ಉದ್ಯೋಗದಾತರು ಭೇಟಿ ನೀಡುವ ಯಾವುದೇ ಸ್ಥಳ
5. ವಸತಿಗೃಹ ಅಥವಾ ಮನೆ

8. ಉದ್ಯೋಗಿ ಎಂದರೆ ನಿಯಮಿತವಾಗಿ, ಒಂದು ಕೆಲಸದ ಸ್ಥಳದಲ್ಲಿ ತಾತ್ಕಾಲಿಕವಾಗಿ ಅಥವಾ ದಿನಗೂಲಿ ಆಧಾರದಲ್ಲಿ ನೇರವಾಗಿ ಅಥವಾ ಮಧ್ಯವರ್ತಿ/ಏಜೆಂಟರ ಅಥವಾ ಗುತ್ತಿಗೆದಾರರ ಮೂಲಕ ಕೆಲಸಗಾರರಾಗಿ, ಪ್ರೊಬೇಶನರಿ, ತರಬೇತಿ ಹೊಂದುತ್ತಿರುವ, ಅಪ್ರೆಂಟಿಸ್ ಅಥವಾ ಸ್ವಯಂಸೇವಕರಾಗಿ ಕೆಲಸ ಮಾಡಲು ನೇಮಿಸಿಕೊಂಡ (ವೇತನ ಪಡೆದು ಅಥವಾ ವೇತನರಹಿತವಾಗಿ) ವ್ಯಕ್ತಿ ಎಂದರ್ಥ [ಪಿಎಸ್‌ಎಚ್‌ಎ ಎಸ್2(ಎಫ್)] ಅಥವಾ ಮನೆ ಕೆಲಸದವರಾಗಿ ನೇಮಕಗೊಂಡ ವ್ಯಕ್ತಿ (ಪಿಎಸ್‌ಎಚ್‌ಎ ಎಸ್.2(ಇ)

ಸಿ. ಉದ್ಯೋಗದಾತರ ಕರ್ತವ್ಯಗಳು

9. ಪ್ರತೀ ಉದ್ಯೋಗದಾತರು ಈ ಕೆಳಗಿನವುಗಳನ್ನು ನಿರ್ವಹಿಸಲೇಬೇಕು [ಪಿಎಸ್‌ಎಚ್‌ಎ ಎಸ್19].

1. ಕೆಲಸದ ಸ್ಥಳದಲ್ಲಿ ಸಂಪರ್ಕಕ್ಕೆ ಬರುವ ವ್ಯಕ್ತಿಗಳಿಂದ ಸುರಕ್ಷತೆಯನ್ನೂ ಒಳಗೊಂಡಂತೆ, ಸುರಕ್ಷಿತ ಕೆಲಸದ ವಾತಾವರಣವನ್ನು ಒದಗಿಸಬೇಕು;
2. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ಶಾಸನವನ್ನು ಮತ್ತು ಆಂತರಿಕ ದೂರುಗಳ ಸಮಿತಿಯನ್ನು ಸ್ಥಾಪಿಸುವ ಆದೇಶವನ್ನು ಪ್ರದರ್ಶಿಸಬೇಕು;
3. ಐಪಿಸಿ ಅಥವಾ ಲೈಂಗಿಕ ಕಿರುಕುಳ ಎಸಗಿದ ದುಷ್ಕರ್ಮಿಯ ವಿರುದ್ಧ ಐಪಿಸಿ ಅಥವಾ ಯಾವುದೇ ಬೇರೆ ಕಾನೂನಿನ ಅಡಿಯಲ್ಲಿ ಕ್ರಮವನ್ನು ಆರಂಭಿಸುವುದು ಅಥವಾ ಲೈಂಗಿಕ ಕಿರುಕುಳದ ಸಂತ್ರಸ್ತೆಯು ಐಪಿಸಿ ಅಥವಾ ಬೇರೆ ಯಾವುದೇ ಕಾನೂನಿನ ಅಡಿಯಲ್ಲಿ ದೂರನ್ನು ನೋಂದಾಯಿಸಲು ಬಯಸಿದಲ್ಲಿ, ಆಕೆಗೆ ಸಹಾಯವನ್ನು ಒದಗಿಸುವುದು;
4. ಆಂತರಿಕ ದೂರುಗಳ ಸಮಿತಿಗೆ ಅಗತ್ಯವಾದ ಮಾಹಿತಿಯು ಲಭ್ಯವಾಗುವಂತೆ ಮಾಡುವುದು;
5. ಲೈಂಗಿಕ ಕಿರುಕುಳದ ದುಷ್ಕರ್ಮಿಯ ವಿರುದ್ಧ ದುರ್ನಡತೆ ತೋರಿದ್ದಕ್ಕಾಗಿ ಕ್ರಮವನ್ನು ಆರಂಭಿಸುವುದು.

ಡಿ. ದೂರುಗಳ ಕಾರ್ಯವಿಧಾನ

ಆಂತರಿಕ ದೂರು ಸಮಿತಿಗಳು

10. ಉದ್ಯೋಗದಾತರು 10 ಅಥವಾ ಅದಕ್ಕಿಂತ ಹೆಚ್ಚು ಜನ ಕೆಲಸಗಾರರ ಒಂದು ಆಂತರಿಕ ದೂರು ಸಮಿತಿಯನ್ನು ರಚಿಸುವ ಅಗತ್ಯವಿದೆ [ಪಿಎಚ್‌ಎಸ್‌ಎ ಎಸ್.4(1)]. ಸಮಿತಿಯು ಈ ಕೆಳಗಿನ ಸದಸ್ಯರನ್ನು ಹೊಂದಿರತಕ್ಕದ್ದು [ಪಿಎಚ್‌ಎಸ್‌ಎ ಎಸ್.4(2)].

1. ಕೆಲಸದ ಸ್ಥಳದಲ್ಲಿ ಹಿರಿಯ ಹಂತದಲ್ಲಿರುವ ಹಿರಿಯ ಮಹಿಳೆಯು ಪ್ರಿಸೈಡಿಂಗ್ ಅಧಿಕಾರಿಯಾಗಿ ಕೆಲಸ ಮಾಡಬೇಕು. ಕೆಲಸದ ಸ್ಥಳದಲ್ಲಿ ಹಿರಿಯ ಮಹಿಳೆ ಇಲ್ಲವಾದಲ್ಲಿ, ಉದ್ಯೋಗದಾತರ ಬೇರೆ ಕಚೇರಿಗಳು ಅಥವಾ ಘಟಕಗಳಿಂದ ನಾಮನಿರ್ದೇಶನಗೊಂಡ ಮಹಿಳೆಯನ್ನು ನಾಮನಿರ್ದೇಶನ ಮಾಡಬೇಕು.
2. ಮಹಿಳೆಯರ ಉದ್ದೇಶಕ್ಕೆ ಕೆಲಸ ಮಾಡಲು ಬದ್ಧರಿರುವ ಕನಿಷ್ಠ 2 ಮಹಿಳಾ ಉದ್ಯೋಗಿಗಳು
3. ಒಬ್ಬರು ಎನ್‌ಜಿಒದ ಸದಸ್ಯರು, ಅವರಿಗೆ ಉದ್ಯೋಗದಾತರು ಭತ್ಯೆಗಳನ್ನು ನೀಡಬೇಕು [ಪಿಎಚ್‌ಎಸ್‌ಎ ಎಸ್.4(4)].
4. ಕನಿಷ್ಠ ಶೇ. 50ರಷ್ಟು ಸದಸ್ಯರು ಮಹಿಳೆಯರಾಗಿರಬೇಕು



[redacted]

ಸ್ಥಳೀಯ ದೂರು ಸಮಿತಿ

11. ಆಂತರಿಕ ದೂರು ಸಮಿತಿಯನ್ನು ಸ್ಥಾಪಿಸದೇ ಇರುವ ಕಡೆಗಳಲ್ಲಿ, ಲೈಂಗಿಕ ಕಿರುಕುಳದ ದೂರುಗಳನ್ನು ಸ್ವೀಕರಿಸಲು ಜಿಲ್ಲಾಧಿಕಾರಿಯವರು ಒಂದು ಸ್ಥಳೀಯ ದೂರು ಸಮಿತಿಯನ್ನು ರಚಿಸುವ ಅಗತ್ಯವಿದೆ. (ಪಿಎಸ್‌ಎಚ್‌ಎ ಎಸ್.6(1)

ಇ. ಲೈಂಗಿಕ ಕಿರುಕುಳದ ದೂರನ್ನು ವರದಿ ಮಾಡುವ ಕಾರ್ಯವಿಧಾನ

12. ಲೈಂಗಿಕ ಕಿರುಕುಳವನ್ನು ಎದುರಿಸುತ್ತಿರುವ ಮಹಿಳಾ ಉದ್ಯೋಗಿಯು ಘಟನೆ ನಡೆದ ದಿನಾಂಕದಿಂದ 3 ತಿಂಗಳ ಒಳಗೆ ಲಿಖಿತವಾಗಿ ಅಥವಾ ಆಕೆ ಅಂತಹ ಘಟನೆಗಳ ಸರಣಿಯನ್ನೇ ಅನುಭವಿಸಿದ್ದಲ್ಲಿ, ಕೊನೆಯ ಘಟನೆ ನಡೆದ 3 ತಿಂಗಳ ಒಳಗೆ, ಆಂತರಿಕ ದೂರು ಸಮಿತಿಗೆ ಅಥವಾ ಸ್ಥಳೀಯ ದೂರು ಸಮಿತಿ ದೂರನ್ನು ಸಲ್ಲಿಸಬೇಕು [ಪಿಎಚ್‌ಎಸ್‌ಎ ಎಸ್.9(1)].

13. ಲಿಖಿತವಾಗಿ ದೂರು ನೀಡಲು ಸಾಧ್ಯವಾಗದಿದ್ದಲ್ಲಿ, ಸಮಿತಿಯ ಸದಸ್ಯರೊಬ್ಬರು ದೂರು ನೀಡಲು ಬಯಸುವ ಉದ್ಯೋಗಿಗೆ ಸಹಾಯ ಮಾಡಬೇಕು [ಪಿಎಚ್‌ಎಸ್‌ಎ ಎಸ್.9(1)].

14. 3 ತಿಂಗಳ ಗಡುವಿನೊಳಗೆ ದೂರನ್ನು ನೀಡಲು ಉದ್ಯೋಗಿಗೆ ತಡೆಯಾಗುವಂತಹ ಸನ್ನಿವೇಶಗಳು ಇದ್ದರೆ, ಸಮಿತಿಯು ಕಾಲಮಿತಿಯನ್ನು ವಿಸ್ತರಿಸಬಹುದು. [ಪಿಎಚ್‌ಎಸ್‌ಎ ಎಸ್.9(1)].

ಎಫ್. ತನಿಖಾ ಪ್ರಕ್ರಿಯೆ

15. ವಿಚಾರಣೆಯನ್ನು ಆರಂಭಿಸುವ ಮೊದಲು, ಆಂತರಿಕ ದೂರು ಸಮಿತಿ ಅಥವಾ ಸ್ಥಳೀಯ ದೂರು ಸಮಿತಿಯು ರಾಜೀಸಂಧಾನದ ಮೂಲಕ ವಿಷಯವನ್ನು ಬಗೆಹರಿಸಲು ಪ್ರಯತ್ನಿಸಬಹುದು, ಆದರೆ ಯಾವುದೇ ಹಣಕಾಸು ಒಪ್ಪಂದಗಳನ್ನು ಮಾಡುವಂತಿಲ್ಲ [ಪಿಎಚ್‌ಎಸ್‌ಎ ಎಸ್ 10]

16. ಆಂತರಿಕ ದೂರು ಸಮಿತಿ ಮತ್ತು ಸ್ಥಳೀಯ ದೂರು ಸಮಿತಿಗೆ ನಾಗರಿಕ ನ್ಯಾಯಾಲಯಕ್ಕೆ ಇರುವ ಅಧಿಕಾರಗಳೇ ಇರುತ್ತವೆ. ಅವು ಯಾವುದೇ ವ್ಯಕ್ತಿಗೆ ಹಾಜರಾಗುವಂತೆ ಆಜ್ಞೆ ನೀಡಬಹುದು ಮತ್ತು ಪ್ರಮಾಣ ಮಾಡಿಸಿ, ವ್ಯಕ್ತಿಯನ್ನು ಪರೀಕ್ಷೆ ಮಾಡಬಹುದು ಮತ್ತು ದಾಖಲೆಗಳನ್ನು ಇಡುವುದು ಅಗತ್ಯವಿದೆ. [ಪಿಎಚ್‌ಎಸ್‌ಎ ಎಸ್ 11(3)].

17. ಆಂತರಿಕ ದೂರು ಸಮಿತಿ ಅಥವಾ ಸ್ಥಳೀಯ ದೂರು ಸಮಿತಿಗೆ ದೂರಿನ ಎರಡೂ ಪಕ್ಷಗಳ ಅಹವಾಲು ಕೇಳುವ ಅವಕಾಶ ನೀಡಬೇಕು ಮತ್ತು ವಿಚಾರಣೆಯಲ್ಲಿ ಸಮಿತಿಯು ಕಂಡುಕೊಂಡ ಅಂಶಗಳ ಒಂದು ಪ್ರತಿಯನ್ನು ಎರಡೂ ಪಕ್ಷಕ್ಕೆ ನೀಡಬೇಕು [ಪಿಎಚ್‌ಎಸ್‌ಎ ಎಸ್ 11(1)].

18. ಆಂತರಿಕ ದೂರು ಸಮಿತಿ ಮತ್ತು ಸ್ಥಳೀಯ ದೂರು ಸಮಿತಿಗಳು ಅವರ ವಿಚಾರಣೆಯನ್ನು 90 ದಿನಗಳ ಒಳಗೆ ಪೂರ್ಣಗೊಳಿಸಬೇಕು.

19. ವಿಚಾರಣೆಯು ನಡೆಯುವಾಗ, ಲಿಖಿತ ಕೋರಿಕೆಗೆ ಪ್ರತಿಕ್ರಿಯೆಯಾಗಿ, ಆಂತರಿಕ ದೂರು ಸಮಿತಿ ಅಥವಾ ಸ್ಥಳೀಯ ದೂರು ಸಮಿತಿಯು ಈ ಕೆಳಗಿನ ಶಿಫಾರಸನ್ನು ಮಾಡಬಹುದು:

1. ಲೈಂಗಿಕ ಕಿರುಕುಳದ ಆಪಾದನೆ ಮಾಡುತ್ತಿರುವ ಉದ್ಯೋಗಿಯನ್ನು ಇನ್ನೊಂದು ಕೆಲಸದ ಸ್ಥಳಕ್ಕೆ ವರ್ಗಾವಣೆ ಮಾಡುವುದು; ಅಥವಾ
2. ಉದ್ಯೋಗಿಗೆ 3 ತಿಂಗಳವರೆಗಿನ ಅವಧಿಯ ರಜೆಯನ್ನು ನೀಡುವುದು; ಅಥವಾ
3. ಉದ್ಯೋಗಿಗೆ ಬೇರೆ ಪರಿಹಾರ [ಪಿಎಚ್‌ಎಸ್‌ಎ ಎಸ್.12(1)].

ಜಿ. ವಿಚಾರಣೆಯ ಫಲಿತಾಂಶಗಳು ಮತ್ತು ಶಿಫಾರಸುಗಳು

20. ಆಂತರಿಕ ದೂರು ಸಮಿತಿ ಅಥವಾ ಸ್ಥಳೀಯ ದೂರು ಸಮಿತಿಯು ವಿಚಾರಣೆಯ ಫಲಿತಾಂಶಗಳು ಮತ್ತು ಶಿಫಾರಸುಗಳನ್ನು ಉದ್ಯೋಗದಾತರಿಗೆ ಅಥವಾ ಜಿಲ್ಲಾ ಅಧಿಕಾರಿಯವರಿಗೆ ವಿಚಾರಣೆಯು ಪೂರ್ಣಗೊಂಡ 10 ದಿನಗಳ ಒಳಗೆ ಒದಗಿಸಬೇಕು. ವರದಿಯನ್ನು ಸಂತ್ರಸ್ತೆಗೆ ಮತ್ತು ಆರೋಪಿ, ಇಬ್ಬರಿಗೂ ಕೊಡಬೇಕು [ಪಿಎಚ್‌ಎಸ್‌ಎ ಎಸ್.13(1)]. ಈ ಇಬ್ಬರಿಗೂ ಶಿಫಾರಸುಗಳನ್ನು ಪ್ರಶ್ನಿಸುವ ಹಕ್ಕು ಇದೆ [ಪಿಎಚ್‌ಎಸ್‌ಎ ಎಸ್18].



[redacted]

21. ಉದ್ಯೋಗದಾತರು ಅಥವಾ ಜಿಲ್ಲಾ ಅಧಿಕಾರಿಯವರು 60 ದಿನಗಳ ಒಳಗೆ ಶಿಫಾರಸುಗಳ ಕುರಿತು ಕ್ರಮ ತೆಗೆದುಕೊಳ್ಳಬೇಕು.

22. ಸಮಿತಿಯು ಲೈಂಗಿಕ ಕಿರುಕುಳ ನಡೆದಿದೆ ಎಂದು ನಿರ್ಣಯಿಸಿದರೆ, ಅದು ಉದ್ಯೋಗದಾತರಿಗೆ ಈ ಕೆಳಕಂಡಂತೆ ಶಿಫಾರಸು ಮಾಡಬಹುದು [ಪಿಎಚ್ಎಸ್ಎ ಎಸ್.13(3)]:

1. ಲೈಂಗಿಕ ಕಿರುಕುಳಕ್ಕೆ ಶಿಸ್ತು ಕ್ರಮ ತೆಗೆದುಕೊಳ್ಳುವುದು; ಅಥವಾ
2. ಸಂತ್ರಸ್ತೆಯ ಅಥವಾ ಆಕೆಯ ಕುಟುಂಬಕ್ಕೆ ಸಮಿತಿಯು ಸೂಕ್ತವೆಂದು ಪರಿಗಣಿಸುವ ಮೊತ್ತವನ್ನು ಆರೋಪಿಯ ವೇತನದಿಂದ ಕಡಿತ ಮಾಡಿ ಪಾವತಿಸುವುದು ಅಥವಾ ಆರೋಪಿ ಅಲ್ಲಿ ಕೆಲಸದಲ್ಲಿ ಇಲ್ಲದಿದ್ದರೆ, ಉದ್ಯೋಗದಾತರು ಅದನ್ನು ಪಾವತಿಸುವಂತೆ ನಿರ್ದೇಶನ ನೀಡುವುದು

23. ಪರಿಹಾರವನ್ನು ನಿರ್ಣಯಿಸುವ ಉದ್ದೇಶಕ್ಕಾಗಿ, ಆಂತರಿಕ ದೂರು ಸಮಿತಿ ಅಥವಾ ಸ್ಥಳೀಯ ದೂರು ಸಮಿತಿಯು ಈ ಕೆಳಗಿನ ಸಂಗತಿಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು: [ಪಿಎಚ್ಎಸ್ಎ ಎಸ್.15]

1. ಸಂತ್ರಸ್ತೆಯ ಮಾನಸಿಕ ಆಘಾತ, ನೋವು, ಯಾತನೆ ಮತ್ತು ಭಾವನಾತ್ಮಕ ಹತಾಶೆ;
2. ಲೈಂಗಿಕ ಕಿರುಕುಳದ ಕಾರಣದಿಂದಾಗಿ ಆಕೆ ಅನುಭವಿಸಿದ ಯಾವುದೇ ರೀತಿಯ ವೃತ್ತಿ ಅವಕಾಶದ ನಷ್ಟ
3. ಆರೋಪಿಯ ಆದಾಯ ಮತ್ತು ಹಣಕಾಸು ಸ್ಥಿತಿಗತಿ
4. ಅಂತಹ ಮೊತ್ತವನ್ನು ಒಂದೇ ಸಲಕ್ಕೆ ಕೊಡಬಹುದು ಅಥವಾ ಕಂತುಗಳಾಗಿ ಕೊಡಬಹುದು.

**ಎಚ್. ಲೈಂಗಿಕ ಕಿರುಕುಳದ ಪ್ರಕರಣಗಳ ವಾರ್ಷಿಕ ವರದಿ**

24. ಆಂತರಿಕ ದೂರು ಸಮಿತಿಯು ಅಥವಾ ಸ್ಥಳೀಯ ದೂರು ಸಮಿತಿಯು ದಾಖಲಾದ ಲೈಂಗಿಕ ಕಿರುಕುಳದ ಪ್ರಕರಣಗಳ ಸಂಖ್ಯೆ ಮತ್ತು ಅವುಗಳ ಫಲಿತಾಂಶದ ಕುರಿತು ಉದ್ಯೋಗದಾತರಿಗೆ ಅಥವಾ ಜಿಲ್ಲಾ ಅಧಿಕಾರಿಯವರಿಗೆ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸಬೇಕು. ಈ ಮಾಹಿತಿಯನ್ನು ಜಿಲ್ಲಾ ಅಧಿಕಾರಿಗಳಿಗೆ ಒದಗಿಸಬೇಕು [ಪಿಎಚ್ಎಸ್ಎ ಎಸ್.ಎಸ್.21–22].



[redacted]

ರೇಖಾಚಿತ್ರ 1: ಲೈಂಗಿಕ ಕಿರುಕುಳದ ದೂರನ್ನು ವರದಿ ಮಾಡಲು ಕಾರ್ಯವಿಧಾನ

ಗಾರ್ಮೆಂಟ್ ಕೆಲಸಗಾರಳು ಲೈಂಗಿಕ ಕಿರುಕುಳವನ್ನು ಅನುಭವಿಸುತ್ತಾರೆ

→ ಕೆಲಸಗಾರಳು ಐಸಿಸಿಗೆ ಘಟನೆಯಾದ 3 ತಿಂಗಳ ಒಳಗೆ ಲಿಖಿತ ದೂರು ಸಲ್ಲಿಸುತ್ತಾರೆ

→ ಐಸಿಸಿಯು ಕೆಲಸಗಾರಳನ್ನು ಮತ್ತು ದುಷ್ಕರ್ಮಿಯನ್ನು ಪ್ರತ್ಯೇಕವಾಗಿ ಭೇಟಿ ಮಾಡುತ್ತದೆ.
ಐಸಿಸಿಯು ದೂರನ್ನು ರಾಜೀಸಂಧಾನದ ಮೂಲಕ ಬಗೆಹರಿಸಲು ಪ್ರಯತ್ನಿಸಬಹುದು.

→ ಐಸಿಸಿಯು ದೂರನ್ನು ತನಿಖೆ ಮಾಡುತ್ತದೆ. ಐಸಿಸಿಯು ವ್ಯಕ್ತಿಗೆ ಹಾಜರಾಗಲು ಆಜ್ಞೆ ನೀಡಬಹುದು ಮತ್ತು ದಾಖಲೆಗಳನ್ನು ಇಡುವುದು ಅಗತ್ಯವಿದೆ.

→ ಐಸಿಸಿಯು ವಿಚಾರಣೆಯನ್ನು 90 ದಿನಗಳ ಒಳಗೆ ಪೂರ್ಣಗೊಳಿಸುತ್ತದೆ.

→ ಐಸಿಸಿಯು ತನ್ನ ಫಲಿತಾಂಶಗಳು ಮತ್ತು ಶಿಫಾರಸುಗಳ ವರದಿಯನ್ನು ಉದ್ಯೋಗದಾತರಿಗೆ ಸಲ್ಲಿಸುತ್ತದೆ.
ವರದಿಯನ್ನು ಕೆಲಸಗಾರಳಿಗೆ ಮತ್ತು ಆಪಾದಿತ ದುಷ್ಕರ್ಮಿಗೆ ನೀಡಲಾಗುವುದು, ಅವರು ಶಿಫಾರಸುಗಳನ್ನು ಪ್ರಶ್ನಿಸಬಹುದು.

→ ಲೈಂಗಿಕ ಕಿರುಕುಳ ನಡೆದಿದೆ ಎಂದು ಐಸಿಸಿಯ ನಿರ್ಣಯಿಸಿದರೆ, ಅದು ಈ ಕೆಳಗಿನ ಶಿಫಾರಸು ಮಾಡಬಹುದು:
1. ದುಷ್ಕರ್ಮಿಯ ವಿರುದ್ಧ ಉದ್ಯೋಗದಾತರು ಶಿಸ್ತು ಕ್ರಮ ತೆಗೆದುಕೊಳ್ಳುವುದು
2. ಸಂತ್ರಸ್ತೆಗೆ ದುಷ್ಕರ್ಮಿ ಅಥವಾ ಉದ್ಯೋಗದಾತರು ಪರಿಹಾರ ನೀಡುವುದು

→ ಉದ್ಯೋಗದಾತರು ಸಮಿತಿಯ ಶಿಫಾರಸುಗಳ ಕುರಿತು 90 ದಿನಗಳ ಒಳಗೆ ಕ್ರಮ ತೆಗೆದುಕೊಳ್ಳಬೇಕು.

# ಹಿಂಸೆ ಮತ್ತು ಶೋಷಣೆಯಿಂದ ಮಕ್ಕಳ ರಕ್ಷಣೆ

## ಎ. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ 2012

ವ್ಯಾಖ್ಯಾನಗಳು

1. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ (ಪೋಕ್ಸೊ)ಯನ್ನು 2012ರಲ್ಲಿ ಜಾರಿಗೆ ತರಲಾಯಿತು. ಮಕ್ಕಳ ಜನನಾಂಗದ ಒಳತೂರಿಸುವುದನ್ನು ಒಳಗೊಂಡ ಲೈಂಗಿಕ ಅಪರಾಧ, (ಜನನಾಂಗದ ಒಳತೂರಿಸದೇ ಇರುವ) ಲೈಂಗಿಕ ಅಪರಾಧ ಮತ್ತು ಮಗುವನ್ನು ಅಶ್ಲೀಲ ಚಿತ್ರದ ಉದ್ದೇಶಗಳಿಗೆ ಬಳಸಿಕೊಳ್ಳುವುದೂ ಸೇರಿದಂತೆ, ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸಲು ಪೋಕ್ಸೊ ಕಾಯಿದೆಯನ್ನು ರೂಪಿಸಲಾಗಿದೆ.

2. ಪೋಕ್ಸೊ ಕಾಯಿದೆಯು ಮಗುವನ್ನು 18 ವರ್ಷದ ಕೆಳಗೆ ಇರುವ ಯಾವುದೇ ವ್ಯಕ್ತಿ ಎಂದು ವ್ಯಾಖ್ಯಾನಿಸುತ್ತದೆ. ಪೋಕ್ಸೊ ಅಡಿಯ ಪ್ರಕರಣಗಳಿಗೆ ಮಗುವಿನ ಒಪ್ಪಿಗೆ ಅಪ್ರಸ್ತುತ.

3. ಈ ಕೆಳಗಿನವನ್ನು ಮಾಡಿದಾಗ ವ್ಯಕ್ತಿಯು ಜನನಾಂಗದ ಒಳತೂರಿಸುವ ಲೈಂಗಿಕ ಅಪರಾಧ[1] ಎಸಗಿದ್ದಾನೆ ಎಂದು ಪರಿಗಣಿಸಲಾಗುವುದು:

- ಮಗುವಿನ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ, ಯಾವುದೇ ಪ್ರಮಾಣದಲ್ಲಿ ತನ್ನ ಶಿಶ್ನವನ್ನು ತೂರಿಸುವುದು ಮತ್ತು ಆಕೆಯು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು; ಅಥವಾ
- ಮಗುವಿನ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ, ಯಾವುದೇ ಪ್ರಮಾಣದಲ್ಲಿ ಶಿಶ್ನವಲ್ಲದೇ, ಬೇರೆ ಏನಾದರೂ ವಸ್ತುವನ್ನು ಅಥವಾ ದೇಹದ ಒಂದು ಭಾಗವನ್ನು ತೂರಿಸುವುದು ಮತ್ತು ಆಕೆಯು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು; ಅಥವಾ
- ಮಗುವಿನ ದೇಹದ ಯಾವುದಾದರೂ ಭಾಗವನ್ನು ಉತ್ತೇಜಿಸಿ, ಹುಡುಗಿಯೊಬ್ಬಳ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ ತೂರುವಂತೆ ಮಾಡುವುದು ಮತ್ತು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು; ಅಥವಾ
- ತನ್ನ ಬಾಯಿಯನ್ನು ಮಗುವಿನ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದಲ್ಲಿ ತೂರುವಂತೆ ಮಾಡುವುದು ಮತ್ತು ತನ್ನೊಂದಿಗೆ ಅಥವಾ ಬೇರೆ ಇನ್ನಾರಾದರೂ ವ್ಯಕ್ತಿಯೊಂದಿಗೆ ಹೀಗೆ ಮಾಡುವಂತೆ ಮಾಡುವುದು

4. ವ್ಯಕ್ತಿಯೊಬ್ಬ ಹೀಗೆ ಮಾಡಿದರೆ (ಜನನಾಂಗದ ಒಳತೂರಿಸದೇ ಇರುವ) ಲೈಂಗಿಕ ಹಲ್ಲೆಯನ್ನು ಮಾಡಿದಂತೆ – ಲೈಂಗಿಕ ಉದ್ದೇಶದಿಂದ ಆತ ಮಗುವಿನ ಯೋನಿ, ಶಿಶ್ನ, ಗುದ ಅಥವಾ ಸ್ತನವನ್ನು ಮುಟ್ಟಿದರೆ ಅಥವಾ ಮಗುವು ಅಂತಹ ವ್ಯಕ್ತಿಯ ಅಥವಾ ಬೇರಾವುದೇ ವ್ಯಕ್ತಿಯ ಯೋನಿ, ಶಿಶ್ನ, ಗುದ ಅಥವಾ ಸ್ತನವನ್ನು ಮುಟ್ಟುವಂತೆ ಮಾಡಿದರೆ, ಅಥವಾ ಲೈಂಗಿಕ ಉದ್ದೇಶದಿಂದ ಬೇರೆ ಯಾವುದೇ ರೀತಿಯ ಕ್ರಿಯೆಯು, ತೂರಿಸುವಿಕೆ ಇಲ್ಲದೆಯೇ ದೈಹಿಕವಾಗಿ ಮುಟ್ಟುವುದನ್ನು ಒಳಗೊಂಡಿದ್ದರೆ, ಅದು ಲೈಂಗಿಕ ಅಪರಾಧವನ್ನು ಮಾಡಿದಂತೆ. [2]

5. ಲೈಂಗಿಕ ಹಲ್ಲೆಯು "ತೀವ್ರವಾಗಿದೆ" ಎಂದು ಇಂತಹ ಕೆಲವು ಸನ್ನಿವೇಶಗಳಲ್ಲಿ ವ್ಯಾಖ್ಯಾನಿಸಲಾಗುತ್ತದೆ, ಮಗುವಿಗೆ ಸಂಬಂಧಿಸಿದ ವ್ಯಕ್ತಿಯು ಒಂದು ಟ್ರಸ್ಟ್ ಅಥವಾ ಸಂಸ್ಥೆಯ ಸ್ಥಾನದಲ್ಲಿದ್ದರೆ, ಅಂದರೆ ಕುಟುಂಬದ ಸದಸ್ಯರು, ಸರ್ಕಾರಿ ಸೇವಕರು ಅಥವಾ ಅಧಿಕಾರಿಗಳು, ಮಕ್ಕಳ ಗೃಹದ ಸದಸ್ಯ ಅಥವಾ ಸಿಬ್ಬಂದಿಗಳು, ಶಿಕ್ಷಕರು ಅಥವಾ ವೈದ್ಯರು, ಅಥವಾ ಹಲ್ಲೆಗೀಡಾದ ಮಗುವು ಮಾನಸಿಕ ಅನಾರೋಗ್ಯದಿಂದಿದ್ದರೆ, ಹಲ್ಲೆಯು ತೀವ್ರವಾಗಿದೆ ಎಂದು ಪರಿಗಣಿತವಾಗುತ್ತದೆ.[3]

6. ಒಬ್ಬ ವ್ಯಕ್ತಿಯು ಲೈಂಗಿಕ ಉದ್ದೇಶದಿಂದ, ಈ ಕೆಳಗಿನ ಕೃತ್ಯಗಳನ್ನು ಎಸಗಿದರೆ, ಆ ವ್ಯಕ್ತಿಯು ಮಗುವಿನ ವಿರುದ್ಧ ಲೈಂಗಿಕ ಕಿರುಕುಳ[4] ಎಸಗಿದಂತೆ:

---

[1] POCSO, s.3.
[2] POCSO, s.7.
[3] POCSO, ss. 5 and 9.
[4] POCSO, s.11.



[redacted]

1. ಲೈಂಗಿಕತೆಗೆ ಸಂಬಂಧಿಸಿದ ಪದವನ್ನು ಅಥವಾ ಶಬ್ದವನ್ನು ಕೇಳಬೇಕೆಂಬ ಉದ್ದೇಶದಿಂದ ಯಾವುದೇ ಪದ ಅಥವಾ ಯಾವುದೇ ಶಬ್ದವನ್ನು ಹೇಳಿದರೆ ಅಥವಾ ಮಗುವು ನೋಡಬೇಕೆಂಬ ಉದ್ದೇಶದಿಂದ ಯಾವುದೇ ಅಶ್ಲೀಲ ಭಂಗಿಯನ್ನು ಮಾಡಿದರೆ ಅಥವಾ ಏನಾದರೂ ವಸ್ತುವನ್ನು ಅಥವಾ ದೇಹದ ಭಾಗವನ್ನು ಮಗುವಿಗೆ ತೋರಿಸುವುದು; ಅಥವಾ
2. ಆ ವ್ಯಕ್ತಿಗೆ ಅಥವಾ ಅಂತಹ ವ್ಯಕ್ತಿಗೆ ಮಗುವು ತನ್ನ ದೇಹವನ್ನು ಅಥವಾ ತನ್ನ ದೇಹದ ಯಾವುದೇ ಭಾಗವನ್ನು ಪ್ರದರ್ಶಿಸುವಂತೆ ಮಾಡುವುದು; ಅಥವಾ
3. ಅಶ್ಲೀಲ ಉದ್ದೇಶಗಳಿಗೆ ಯಾವುದೇ ರೀತಿಯ ಅಥವಾ ಯಾವುದೇ ಮಾಧ್ಯಮದ ಏನಾದರೂ ವಸ್ತುವನ್ನು ತೋರಿಸುವುದು; ಅಥವಾ
4. ಮಗುವನ್ನು ನೇರವಾಗಿ ಇಲೆಕ್ಟ್ರಾನಿಕ್, ಡಿಜಿಟಲ್ ಅಥವಾ ಇನ್ನಾವುದೇ ವಿಧಾನದಲ್ಲಿ ನಿರಂತರವಾಗಿ ಅಥವಾ ಪದೇ ಪದೇ ಹಿಂಬಾಲಿಸುತ್ತಿದ್ದರೆ ಅಥವಾ ಗಮನಿಸುತ್ತಿದ್ದರೆ ಅಥವಾ ಸಂಪರ್ಕಿಸುವುದು; ಅಥವಾ
5. ಮಗುವಿನ ದೇಹದ ಯಾವುದೇ ಭಾಗವನ್ನು ಅಥವಾ ಲೈಂಗಿಕ ಕ್ರಿಯೆಯೊಂದರಲ್ಲಿ ಮಗುವಿನ ಒಳಗೊಳ್ಳುವಿಕೆಯನ್ನು ಇಲೆಕ್ಟ್ರಾನಿಕ್, ಫಿಲ್ಮ್ ಅಥವಾ ಡಿಜಿಟಲ್ ಅಥವಾ ಬೇರೆ ಯಾವುದೇ ರೀತಿಯಿಂದ, ಯಾವುದೇ ಮಾಧ್ಯಮದ ರೂಪದಲ್ಲಿ, ಒಂದು ನೈಜ ಅಥವಾ ಕಲ್ಪಿತ ಚಿತ್ರಣವನ್ನು ಬಳಸಿಕೊಳ್ಳುವುದಾಗಿ ಬೆದರಿಸುವುದು; ಅಥವಾ
6. ಮಗುವನ್ನು ಅಶ್ಲೀಲಚಿತ್ರಗಳ ಉದ್ದೇಶಗಳಿಗೆ ಪ್ರಚೋದಿಸುವುದು

7. ವ್ಯಕ್ತಿಯೊಬ್ಬ ಮಗುವನ್ನು ಯಾವುದೇ ಮಾಧ್ಯಮದ ರೂಪದಲ್ಲಿ (ಟಿವಿ ಚಾನೆಲ್‌ಗಳ ಅಥವಾ ಇಂಟರ್ನೆಟ್ ಅಥವಾ ಯಾವುದೇ ಎಲೆಕ್ಟ್ರಾನಿಕ್ ಮಾಧ್ಯಮ ಅಥವಾ ಮುದ್ರಿತ ಮಾಧ್ಯಮದಲ್ಲಿ ಕಾರ್ಯಕ್ರಮ ಅಥವಾ ಜಾಹೀರಾತುಗಳಿಗೆ ಬಳಸಿಕೊಳ್ಳುವುದು, ಅಂತಹ ಕಾರ್ಯಕ್ರಮ ಅಥವಾ ಜಾಹೀರಾತುಗಳು ವೈಯಕ್ತಿಕ ಬಳಕೆ ಅಥವಾ ವಿತರಣೆಯ ಉದ್ದೇಶವನ್ನು ಹೊಂದಿರಲಿ ಅಥವಾ ಬಿಡಲಿ) ಮಗುವನ್ನು ಲೈಂಗಿಕ ತೃಪ್ತಿಗಾಗಿ ಈ ಕೆಳಗಿನವುಗಳೂ ಸೇರಿದಂತೆ, ಅಶ್ಲೀಲಚಿತ್ರಗಳ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರುವ[5] ಅಪರಾಧಕ್ಕೆ ತಪ್ಪಿತಸ್ಥರಾಗುತ್ತಾರೆ:

1. ಮಗುವಿನ ಲೈಂಗಿಕ ಅಂಗಾಂಗಗಳನ್ನು ಚಿತ್ರಿಸುವುದು ಅಥವಾ ನಿರೂಪಿಸುವುದು;
2. ಒಂದು ನೈಜ ಅಥವಾ ಸಿಮುಲೇಟ್ ಮಾಡಿದ ಲೈಂಗಿಕ ಕ್ರಿಯೆಗಳಲ್ಲಿ ಮಗುವನ್ನು ತೊಡಗಿಸಿ ಬಳಸಿಕೊಳ್ಳುವುದು (ಜನನಾಂಗದ ಒಳತೂರಿಸುವಿಕೆ ಸಹಿತವಾಗಿ ಅಥವಾ ರಹಿತವಾಗಿ);
3. ಮಗುವನ್ನು ಅಸಭ್ಯ ಅಥವಾ ಅಶ್ಲೀಲವಾಗಿ ಚಿತ್ರಿಸುವುದು ಅಥವಾ ನಿರೂಪಿಸುವುದು.

8. ಜನನಾಂಗದ ಒಳತೂರಿಸುವಿಕೆಸಹಿತ ಲೈಂಗಿಕ ಹಲ್ಲೆ, ಒಳತೂರಿಸುವಿಕೆರಹಿತ ಲೈಂಗಿಕ ಹಲ್ಲೆ, ಲೈಂಗಿಕ ಕಿರುಕುಳ ಮತ್ತು ಮಗುವನ್ನು ಅಶ್ಲೀಲ ಚಿತ್ರಗಳ ಉದ್ದೇಶಗಳಿಗೆ ಬಳಸಿಕೊಳ್ಳುವುದು, ಇವನ್ನು ಮಾಡುವುದು ಅಥವಾ ಮಾಡಲು ಪ್ರಯತ್ನಿಸುವುದು ಮತ್ತು ಈ ಲೈಂಗಿಕ ಅಪರಾಧಗಳನ್ನು ಎಸಗಲು ಸಹಕರಿಸುವುದು, ಪ್ರೋತ್ಸಾಹಿಸುವುದು ಅಥವಾ ಬೆಂಬಲಿಸುವುದು(ಉತ್ತೇಜಿಸುವುದು), ಈ ಎಲ್ಲದಕ್ಕೆ ಪೋಕ್ಸೊ ಶಿಕ್ಷೆಯನ್ನು ವಿಧಿಸುತ್ತದೆ.[6]

**ಪೋಕ್ಸೊ ಅಡಿಯಲ್ಲಿ ಪೊಲೀಸರ ಕರ್ತವ್ಯಗಳು:**

9. ಲೈಂಗಿಕ ದೌರ್ಜನ್ಯದ ದೂರನ್ನು ತನಿಖೆ ಮಾಡುತ್ತಿರುವ ವೇಳೆ ಮಗುವಿನ ಯೋಗಕ್ಷೇಮವನ್ನು ಪೊಲೀಸರು ರಕ್ಷಿಸಬೇಕು ಎಂದು ಪೋಕ್ಸೊ ಹೇಳುತ್ತದೆ.

10. ಮಗುವೊಂದರ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಹೇಳಿಕೆಯನ್ನು ಸ್ವೀಕರಿಸಿದ ನಂತರ, ಪೊಲೀಸರು ಮಗುವಿನ ಆರೈಕೆ ಮತ್ತು ರಕ್ಷಣೆಗೆ ತಕ್ಷಣದ ಸರಿಯಾದ ವ್ಯವಸ್ಥೆಗಳನ್ನು ಮಾಡಬೇಕು, ಮಗುವಿಗೆ ತುರ್ತು ವೈದ್ಯಕೀಯ ಚಿಕಿತ್ಸೆ ಕೊಡಿಸುವುದು, ಮಗುವನ್ನು ಆಶ್ರಯಗೃಹದಲ್ಲಿ ಇರಿಸುವುದು, ಹೀಗೆ ಅಗತ್ಯವಿದ್ದ ವ್ಯವಸ್ಥೆಯನ್ನು 24 ಗಂಟೆಗಳ ಒಳಗೆ ಮಾಡಬೇಕು.[7]

---

[5] POCSO, s.13.
[6] POCSO, ss. 17 and 18.
[7] POCSO, s.19(5).



[redacted]

11. ಪೊಲೀಸರು ಮಗುವಿನಿಂದಾದ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ದೂರನ್ನು, ಪಡೆದ 24 ಗಂಟೆಗಳ ಒಳಗೆ ಮಕ್ಕಳ ಕಲ್ಯಾಣ ಸಮಿತಿಯ (ಸಿಡಬ್ಲ್ಯೂಸಿ) ಗಮನಕ್ಕೆ ಈ ವಿಷಯವನ್ನು, ತರಬೇಕು ಮತ್ತು ಅದು ಸಿಡಬ್ಲ್ಯೂಸಿ ಮಗುವಿನ ರಕ್ಷಣೆ ಮತ್ತು ಭದ್ರತೆಯ ಕುರಿತು ಮುಂದಿನ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತದೆ.[8]

12. ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕಾರ ಪೊಲೀಸರು ಮಗು (12 ವರ್ಷದ ಒಳಗಿನ) ಅತ್ಯಾಚಾರಕ್ಕೊಳಗಾದರೆ ಅದರ ತೀರ್ಮಾನದ ಪ್ರಕರಣದ ತನಿಖೆಯನ್ನು, ಪೊಲೀಸ್ ಠಾಣೆಯ ಉಸ್ತುವಾರಿಯಲ್ಲಿ, ಪೊಲೀಸರು ಅಪರಾಧದ ಮಾಹಿತಿಯನ್ನು ದಾಖಲಿಸಿಕೊಂಡ ದಿನಾಂಕದಿಂದ ಮೂರು ತಿಂಗಳ ಒಳಗೆ ಮುಗಿಸಬೇಕಾಗಿರುತ್ತದೆ.[9]

ಲೈಂಗಿಕ ಅಪರಾಧಗಳನ್ನು ದಾಖಲಿಸುವುದು ಕಡ್ಡಾಯ

13. ಮಕ್ಕಳ ವಿರುದ್ಧ ಲೈಂಗಿಕ ಅಪರಾಧಗಳನ್ನು ದಾಖಲಿಸುವುದನ್ನು/ವರದಿ ಮಾಡುವುದನ್ನು, ಕಡ್ಡಾಯಗೊಳಿಸಲಾಗಿದೆ. ಇದು ಒಂದು ಮಗು ಲೈಂಗಿಕ ದೌರ್ಜನ್ಯಕ್ಕೊಳಗಾದಾಗ ಆ ಅಪರಾಧವನ್ನು ವರದಿ ಮಾಡಬೇಕೆಂದು ಅರಿವಿರುವ ವ್ಯಕ್ತಿಯ ಮೇಲೆ ಕಾನೂನಾತ್ಮಕ ಕರ್ತವ್ಯವನ್ನು ಹೇರುತ್ತದೆ.[10]

14. ಮಾಧ್ಯಮದ ಸದಸ್ಯರು ಅಥವಾ ಹೋಟೆಲ್, ಲಾಡ್ಜ್, ಆಸ್ಪತ್ರೆ, ಕ್ಲಬ್, ಸ್ಟುಡಿಯೋ ಅಥವಾ ಫೋಟೋ ತೆಗೆಯುವ ಕೇಂದ್ರಗಳು, ಯಾವುದೇ ಮಾಧ್ಯಮದ ಮೂಲಕ ಮಗುವಿನ ಲೈಂಗಿಕ ಶೋಷಣೆ ಮಾಡುವಂತಹ (ಅಶ್ಲೀಲ ಚಿತ್ರ, ಲೈಂಗಿಕತೆಗೆ ಸಂಬಂಧಿಸಿದ ಅಥವಾ ಮಗು ಅಥವಾ ಮಕ್ಕಳ ಅಸಭ್ಯ ಚಿತ್ರಣ ಅಥವಾ ಬಿಂಬಿಸುವಿಕೆ ಮಾಡಿರುವುದೂ ಒಳಗೊಂಡಂತೆ) ಯಾವುದೇ ಬಗೆಯ ವಸ್ತು, ಚಿತ್ರಗಳನ್ನು, ಕಂಡಲ್ಲಿ, ಅವರು ಕೂಡಲೇ ವಿಶೇಷ ಬಾಲನ್ಯಾಯ ಪೊಲೀಸ್ ಘಟಕ್ಕೆ ಅಥವಾ ಸ್ಥಳೀಯ ಪೊಲೀಸರಿಗೆ ತಿಳಿಸಬೇಕು.[11]

15. ವ್ಯಕ್ತಿಯೊಬ್ಬರು ಒಂದು ಮಗುವಿನ ಅಥವಾ ಮಕ್ಕಳ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯವನ್ನು, ವರದಿ ಮಾಡಲು ಅಥವಾ ದೂರು ನೀಡಲು ವಿಫಲಗೊಂಡರೆ, ಆಗ ಆ ವ್ಯಕ್ತಿಗೆ ಆರು ತಿಂಗಳ ಸೆರೆವಾಸ ಅಥವಾ/ಮತ್ತು ದಂಡವನ್ನು, ವಿಧಿಸಿ, ಶಿಕ್ಷಿಸಬಹುದು.[12]

ಸಂತ್ರಸ್ತ ಮಗುವಿನ ರಕ್ಷಣೆ

16. ಮಗುವಿನ ಹೇಳಿಕೆಯನ್ನು, ಸಾಧ್ಯವಿದ್ದಷ್ಟರ ಮಟ್ಟಿಗೆ (ಸಬ್‌ಇನ್ಸ್‌ಪೆಕ್ಟರ್ ಶ್ರೇಣಿಗಿಂತ ಕೆಳಗಿನವರು ಅಲ್ಲದ) ಮಹಿಳಾ ಪೊಲೀಸ್ ಅಧಿಕಾರಿಯಿಂದ, ಮಗುವಿನ ಮನೆಯಲ್ಲಿ, ವಾಸದ ಸಹಜ ಸ್ಥಳದಲ್ಲಿ ಅಥವಾ ಮಗುವು ಆಯ್ಕೆ ಮಾಡಿಕೊಂಡ ಬೇರೆ ಸ್ಥಳದಲ್ಲಿ ದಾಖಲಿಸಿಕೊಳ್ಳಬೇಕು. ಮಗುವಿನ ಹೇಳಿಕೆ ದಾಖಲಿಸಿಕೊಳ್ಳುವ ಪೊಲೀಸ್ ಅಧಿಕಾರಿಯು ಸಮವಸ್ತ್ರವನ್ನು ಧರಿಸಿರಬಾರದು.[13]

17. ಮಗುವಿನ ಹೇಳಿಕೆಯನ್ನು, ಮಗು ಮಾತನಾಡಿದ ಹಾಗೆ, ಮಗುವಿನ ಪೋಷಕರ ಸಮ್ಮುಖದಲ್ಲಿ, ಅಥವಾ ಮಗುವು ವಿಶ್ವಾಸವಿಡುವ ಅಥವಾ ಮಗುವಿಗೆ ನಂಬಿಕೆಯಿರುವ ಬೇರೆ ವ್ಯಕ್ತಿಯ ಸಮ್ಮುಖದಲ್ಲಿ ದಾಖಲಿಸಿಕೊಳ್ಳಬೇಕು. ಸಾಧ್ಯವಿದ್ದ ಕಡೆಗಳಲ್ಲಿ, ಮಗುವಿನ ಹೇಳಿಕೆಯನ್ನು ಆಡಿಯೋ-ವಿಡಿಯೋ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿಯೂ ದಾಖಲಿಸಿಕೊಳ್ಳಬೇಕು.[14]

18. ಮಗುವಿನ ಮೇಲೆ ನಡೆದ ಲೈಂಗಿಕ ಅಪರಾಧದ ತನಿಖೆ ಮಾಡುತ್ತಿರುವ ಪೊಲೀಸ್ ಅಧಿಕಾರಿಯು, ಮಗುವನ್ನು ಪರೀಕ್ಷೆ ಮಾಡುತ್ತಿರುವಾಗ, ಯಾವುದೇ ಸಂದರ್ಭದಲ್ಲಿಯೂ, ಯಾವುದೇ ರೀತಿಯಲ್ಲಿಯೂ ಆಪಾದಿತರ ಸಂಪರ್ಕಕ್ಕೆ ಮಗು ಬರದೇ ಇರುವುದನ್ನು ಖಾತ್ರಿಪಡಿಸಬೇಕು.[15]

---

[8] POCSO, s.19(6) and Ministry of Women and Child Development, *Model Guidelines under Section 39 of The Protection of Children from Sexual Offences Act, 2012*, September 2013.

[9] Cr.P.C. s.173(1A).

[10] POCSO, s.19.

[11] POCSO, s.20.

[12] POCSO, s.21.

[13] POCSO, ss.24(1) and 24(2).

[14] POCSO, s.26.

[15] POCSO, s.24(3).

19. ಯಾವುದೇ ಕಾರಣಕ್ಕಾಗಿಯೂ, ಮಗುವನ್ನು ರಾತ್ರಿಯಿಡೀ ಪೊಲೀಸ್ ಠಾಣೆಯಲ್ಲಿ ಇರಿಸಿಕೊಳ್ಳಲು ಆಸ್ಪದವಿಲ್ಲ.[16]

20. ಮಗುವಿನ ವೈದ್ಯಕೀಯ ಪರೀಕ್ಷೆಯನ್ನು, ಮಗುವಿನ ಪೋಷಕರ ಸಮ್ಮುಖದಲ್ಲಿ, ಅಥವಾ ಮಗುವು ವಿಶ್ವಾಸವಿಡುವ ಅಥವಾ ಮಗುವಿಗೆ ನಂಬಿಕೆಯಿರುವ ಬೇರೆ ವ್ಯಕ್ತಿಯ ಸಮ್ಮುಖದಲ್ಲಿ ನಡೆಸಬೇಕು.[17] ಸಂತ್ರಸ್ತ ಮಗುವು, ಹೆಣ್ಣುಮಗುವಾಗಿದ್ದರೆ, ವೈದ್ಯಕೀಯ ಪರೀಕ್ಷೆಯನ್ನು ಮಹಿಳಾ ವೈದ್ಯರಿಂದ ನಡೆಸಬೇಕು.[18]

21. ಮಗುವಿನ ಗುರುತನ್ನು ಮಾಧ್ಯಮದಿಂದ ರಕ್ಷಿಸುವುದನ್ನು ಪೊಲೀಸರು ಖಾತ್ರಿಪಡಿಸಬೇಕು, ಮಗುವಿನ ಹಿತಾಸಕ್ತಿಗಾಗಿ ವಿಶೇಷ ನ್ಯಾಯಾಲಯದ ನಿರ್ದೇಶನವಿದ್ದಾಗ ಹೊರತುಪಡಿಸಿದರೆ, ಇನ್ನುಳಿದಂತೆ ಮಗುವಿನ ಗುರುತನ್ನು ರಕ್ಷಿಸಬೇಕು.[19]

ನ್ಯಾಯಾಲಯದಲ್ಲಿ ಸಂತ್ರಸ್ತ ಮಗುವನ್ನು ರಕ್ಷಿಸಲು ವಿಶೇಷ ಕ್ರಮಗಳು

22. ಪೋಕ್ಸೊ ಕಾಯಿದೆಯ ಪ್ರಕಾರ ವಿಶೇಷ ನ್ಯಾಯಾಲಯಗಳು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳ ವಿಚಾರಣೆ ನಡೆಸಬೇಕು.[20]

23. ಪೋಕ್ಸೊ ಅಡಿಯಲ್ಲಿ ವ್ಯಕ್ತಿಯೊಬ್ಬರನ್ನು ಯಾವುದೇ ಲೈಂಗಿಕ ಅಪರಾಧವನ್ನು ಎಸಗಿದ್ದಕ್ಕಾಗಿ, ಪ್ರೋತ್ಸಾಹಿಸಿದ್ದಕ್ಕಾಗಿ ಅಥವಾ ಎಸಗಲು ಪ್ರಯತ್ನಿಸಿದ್ದಕ್ಕಾಗಿ ವಿಚಾರಣೆ ನಡೆಸುವಾಗ, ವಿಶೇಷ ನ್ಯಾಯಾಲಯವು ಅಪರಾಧವು ರುಜುವಾತುಗೊಳ್ಳುವುದಕ್ಕೆ ಪ್ರತಿಯಾಗಿ, ವ್ಯಕ್ತಿ ಲೈಂಗಿಕ ಅಪರಾಧವನ್ನು ಎಸಗಿದ್ದಾರೆ, ಪ್ರೋತ್ಸಾಹಿಸಿದ್ದಾರೆ ಅಥವಾ ಪ್ರಯತ್ನಿಸಿದ್ದಾರೆ ಎಂದು ಮೊದಲೇ ಭಾವಿಸುತ್ತದೆ.[21]

24. ಮಕ್ಕಳ ಲೈಂಗಿಕ ದೌರ್ಜನ್ಯದ ಪ್ರಕರಣಗಳನ್ನು ಅಪರಾಧ ವರದಿಯಾದ ದಿನಾಂಕದಿಂದ ಒಂದು ವರ್ಷದೊಳಗೆ ವಿಲೇವಾರಿ ಮಾಡಬೇಕು ಎಂದು ಪೋಕ್ಸೊ ಕಡ್ಡಾಯಗೊಳಿಸುತ್ತದೆ.[22]

25. ವಿಚಾರಣೆಗಳನ್ನು ಕೆಮರಾದಡಿಯಲ್ಲಿ,[23] ಮಗು–ಸ್ನೇಹಿ ರೀತಿಯಲ್ಲಿ ಮತ್ತು ಮಗುವಿನ ಗುರುತನ್ನು ಬಹಿರಂಗಪಡಿಸದೇ ನಡೆಸಬೇಕು. ಮಗುವಿನ ಪಾಲಕರು, ಪೋಷಕರು, ಗೆಳೆಯ ಅಥವ ಸಂಬಂಧಿ ಅಥವಾ ಮಗುವು ವಿಶ್ವಾಸವಿರಿಸುವ ಬೇರೆ ವ್ಯಕ್ತಿಗೆ ಮಾತ್ರ ಆಸ್ಪದ ನೀಡಬಹುದು. ಮಗುವನ್ನು ಸಾಕ್ಷ್ಯಗಳಿಗಾಗಿ ಪದೇ ಪದೇ ಕರೆಯಬಾರದು, ಜೊತೆಗೆ ಮಗುವಿಗೆ ಆಕ್ರಮಣಶೀಲ ರೀತಿಯಲ್ಲಿ ಪ್ರಶ್ನಿಸುವುದು ಅಥವಾ ಮಗುವಿನ ಚಾರಿತ್ರ್ಯವಧೆ ಮಾಡುವುದಕ್ಕೆ ವಿಶೇಷ ನ್ಯಾಯಾಲಯವು ಒಪ್ಪಿಗೆ ಕೊಡಬಾರದು ಎಂದು ಪೋಕ್ಸೊ ಹೇಳುತ್ತದೆ.[24]

26. ಮಗುವಿನ ಸಾಕ್ಷ್ಯವನ್ನು ದಾಖಲಿಸುವ ವೇಳೆಯಲ್ಲಿ, ಯಾವುದೇ ರೀತಿಯಲ್ಲಿ ಮಗುವನ್ನು ಆಪಾದಿತನಿಗೆ ತೋರಿಸಬಾರದು ಎಂಬುದನ್ನು ವಿಶೇಷ ನ್ಯಾಯಾಲಯವು ಖಾತ್ರಿಪಡಿಸಬೇಕು ಮತ್ತು ಮಗುವಿನ ಹೇಳಿಕೆಯನ್ನು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಅಥವಾ ಒಂದೇ ಕಡೆ ಕಾಣುವ ಕನ್ನಡಿಗಳು ಅಥವಾ ಪರದೆಗಳನ್ನು ಅಥವಾ ಬೇರಾವುದೇ ಸಾಧನಗಳನ್ನು ಬಳಸಿಕೊಂಡು ದಾಖಲಿಸಿಕೊಳ್ಳಬೇಕು.[25]

27. ಸಾಕ್ಷ್ಯವನ್ನು ನೀಡುವಾಗ ಮಗುವು ವಿವರಣೆಕಾರ, ವಿಶೇಷ ಶಿಕ್ಷಕರು ಅಥವಾ ಬೇರೆ ವೃತ್ತಿಪರರ ಸಹಾಯವನ್ನು ತೆಗೆದುಕೊಳ್ಳಬಹುದು.[26]

---

[16] POCSO, s.24(4).
[17] POCSO, s.27(3).
[18] POCSO, s.27(2).
[19] POCSO, s.24(5).
[20] POCSO, s.28.
[21] POCSO, s.29.
[22] POCSO, s.35.
[23] POCSO, s.37.
[24] POCSO, s.33.
[25] POCSO, s.36.
[26] POCSO, s.38.

28. ವಿಶೇಷ ನ್ಯಾಯಾಲಯವು ಮಗುವಿನ ಗುರುತನ್ನು ತನಿಖೆಯ ಸಂದರ್ಭದಲ್ಲಿ ಅಥವಾ ವಿಚಾರಣೆ ನಡೆಯುವಾಗ, ಈ ಯಾವುದೇ ಸಮಯದಲ್ಲಿಯೂ ಬಹಿರಂಗಪಡಿಸದೇ ಇರುವುದನ್ನು ಖಾತ್ರಿಪಡಿಸಬೇಕು.[27]

ಪರಿಹಾರ

29. ವಿಶೇಷ ನ್ಯಾಯಾಲಯವು ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಗುವಿಗೆ ನೀಡಬೇಕಿರುವ ಪರಿಹಾರವನ್ನು ನಿರ್ಧರಿಸುತ್ತದೆ. ಮಗುವಿನ ವೈದ್ಯಕೀಯ ಚಿಕಿತ್ಸೆ ಮತ್ತು ಪುನರ್ವಸತಿಯನ್ನು ಬೆಂಬಲಿಸುವ ಉದ್ದೇಶದಿಂದ ಪರಿಹಾರವನ್ನು ನೀಡಲಾಗುವುದು.

30. ಪೋಕ್ಸೊ ನಿಯಮಗಳು 2012, [28] ಸಂತ್ರಸ್ತ ಮಗುವಿಗೆ ಕೊಡಬೇಕಾದ ಪರಿಹಾರಗಳ ವಿವರಗಳನ್ನು ರೂಪಿಸಿದೆ. ವಿಶೇಷ ನ್ಯಾಯಾಲಯವು ಪರಿಹಾರವನ್ನು ವಿಚಾರಣೆಯ ಕೊನೆಯಲ್ಲಿ ಕೊಡುವುದು ಮಾತ್ರವಲ್ಲದೇ, ಮಗುವಿನ ಪುನಶ್ಚೇತನ ಅಥವಾ ಪುನರ್ವಸತಿಯ ತತ್‌ಕ್ಷಣದ ಅಗತ್ಯಗಳನ್ನು ಪೂರೈಸಲು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿಕೊಂಡ ನಂತರ ಯಾವುದೇ ಹಂತದಲ್ಲಿಯಾದರೂ ಮಧ್ಯಂತರ ಆಧಾರದಲ್ಲಿ ಪರಿಹಾರವನ್ನು ಕೊಡುವಂತೆ ಆದೇಶ ನೀಡಬಹುದು ಎಂದು ಪೋಕ್ಸೊ ನಿಯಮಗಳು ಹೇಳಿವೆ. [29]

31. ರಾಷ್ಟ್ರೀಯ ಮತ್ತು ರಾಜ್ಯ ಹಂತದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಕೂಡ ಪೋಕ್ಸೊ ಅನುಷ್ಠಾನದ ಮೇಲ್ವಿಚಾರಣೆ ನೋಡುತ್ತ, ನಿಗಾವಹಿಸುವ ಅಗತ್ಯವಿದೆ. [30]

**ಬಿ. ಬಾಲ ನ್ಯಾಯ (ಮಕ್ಕಳ ಕಾಳಜಿ ಮತ್ತು ರಕ್ಷಣೆ) ಕಾಯಿದೆ 2015**

32. ಬಾಲ ನ್ಯಾಯ (ಮಕ್ಕಳ ಕಾಳಜಿ ಮತ್ತು ರಕ್ಷಣೆ) ಕಾಯಿದೆ 2015 (ಬಾಲ ನ್ಯಾಯ ಕಾಯಿದೆ)ಯನ್ನು ಜನವರಿ 1 2016ರಿಂದ ಜಾರಿಗೆ ತರಲಾಗಿದೆ. ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತೆ ಕಾಣುವ ಅಥವಾ ಹಾಗೆ ಆರೋಪಿಸಲಾದ ಮತ್ತು ಕಾಳಜಿ ಹಾಗೂ ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಡೀಕರಿಸಿ, ತಿದ್ದುಪಡಿ ಮಾಡಿದೆ.

ವ್ಯಾಖ್ಯಾನಗಳು

33. ಕಾಯಿದೆಯು ಮಗು ಮತ್ತು ಎಳೇಹರೆಯದವರು, ಇಬ್ಬರನ್ನೂ 18 ವರ್ಷದ ಒಳಗಿರುವ ವ್ಯಕ್ತಿ ಎಂದು ವ್ಯಾಖ್ಯಾನಿಸುತ್ತದೆ. [31]

34. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು ಎಂದರೆ ಅಪರಾದವನ್ನು ಎಸಗಿದ್ದಾರೆ ಎಂದು ಆಪಾದಿಸಲಾದ ಅಥವಾ ಹಾಗೆ ಕಂಡುಬರುವ ಮಗು ಮತ್ತು ಅಪರಾಧ ನಡೆದ ದಿನಾಂಕದಂದು 18 ವರ್ಷದ ಕೆಳಗೆ ಇರುವ ಯಾವುದೇ ಮಗು ಎಂದರ್ಥ. [32]

---

[27] POCSO, s.33(7).

[28] Rule 7 of the POCSO Rules 2012.

[29] POCSO Rules 2012, Rule 7(1). This includes any immediate medical needs that the child may have. Rule 7 (3) sets out the criteria to be taken into account while fixing the amount of compensation. This includes the severity of the mental or physical harm or injury suffered by the child; the expenditure incurred or likely to be incurred on his/her medical treatment for physical and/or mental health; and any disability suffered by the child as a result of the offence.

[30] POCSO, s.44(1).

[31] Juvenile Justice Act, ss. 2(12) and 2(35).

[32] Juvenile Justice Act, s.2(13).



[redacted]r

35. ಕಾಳಜಿ ಮತ್ತು ರಕ್ಷಣೆಯ ಅಗತ್ಯವಿರುವ ಮಗು ಎಂದರೆ ಈ ಕೆಳಗಿನ ಅಂಶಗಳನ್ನು ಹೊಂದಿರುವ ಮಗು ಎಂದರ್ಥ:

1. ಮನೆ ಅಥವಾ ಜೀವನೋಪಾಯದ ಮಾರ್ಗಗಳು ಇಲ್ಲದೇ ಇರುವಂತೆ ಕಂಡುಬಂದ ಮಗು;[33]
2. ಭಿಕ್ಷೆ ಬೇಡುತ್ತ, ಬೀದಿಯಲ್ಲಿ ಜೀವಿಸುತ್ತ ಅಥವಾ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುತ್ತ ಕೆಲಸ ಮಾಡುತ್ತಿರುವಂತೆ ಕಂಡುಬಂದ ಮಗು;
3. ವ್ಯಕ್ತಿಯೊಂದಿಗೆ ಅಥವಾ ಬೇರೆ ಮಗುವನ್ನು ಗಾಯಗೊಳಿಸಿದ, ಶೋಷಣೆ ಮಾಡಿದ, ನಿಂದಿಸಿದ ಅಥವಾ ನಿರ್ಲಕ್ಷ್ಯ ಮಾಡಿದ ವ್ಯಕ್ತಿಯೊಂದಿಗೆ ಅಥವಾ ಬೇರೆ ಮಗುವಿಗೆ ಮಾಡಿದಂತೆ ತನಗೂ ಮಾಡುವುದಾಗಿ ಬೆದರಿಸಿದ ವ್ಯಕ್ತಿಯೊಂದಿಗೆ ಬದುಕುತ್ತಿರುವ ಮಗು;
4. ಮಾನಸಿಕ ಅನಾರೋಗ್ಯಕ್ಕೆ ಒಳಗಾದ, ದೈಹಿಕ ಸವಾಲು ಎದುರಿಸುವ ಅಥವಾ ಸಾವಿಗೆಹತ್ತಿರದ ಅಥವಾ ಗುಣಪಡಿಸಲಾಗದ ಕಾಯಿಲೆಯಿಂದ ನರಳುತ್ತಿರುವ ಮತ್ತು ಆಕೆಯ ಅಥವಾ ಅವನ ಕಾಳಜಿ ತೆಗೆದುಕೊಳ್ಳಲು ಅಥವಾ ಬೆಂಬಲಿಸುವ ಯಾರೂ ಇಲ್ಲದೇ ಇರುವಂತಹ ಮಗು;
5. ಮಗುವಿಗೆ ಪೋಷಕರು ಅಥವಾ ಪಾಲಕರು ಇದ್ದರೂ, ಅವರು ಮಗುವಿಗೆ ಕಾಳಜಿ ಅಥವಾ ಆರೈಕೆ ಒದಗಿಸಲು ಅನರ್ಹರಾಗಿದ್ದು ಅಥವಾ ಅಸಮರ್ಥರು ಎಂದು ಕಂಡುಬಂದರೆ ಅಥವಾ ಆರೈಕೆ, ಕಾಳಜಿ ಮಾಡಲು ಅಥವಾ ಬೆಂಬಲಿಸಲು ಯಾರೂ ಇಲ್ಲದ ಮಗು;
6. ಅಪ್ಪ, ಅಮ್ಮ ಇಲ್ಲದ ಅಥವಾ ಯಾರೂ ಆರೈಕೆ, ಕಾಳಜಿ ನೀಡಲು ಇಚ್ಛೆಪಡದ ಮಗು;
7. ತಪ್ಪಿಸಿಕೊಂಡ ಅಥವಾ ಓಡಿಹೋದ ಮಗು;
8. ಕಿರುಕುಳಕ್ಕೆ ಒಳಗಾದ ಅಥವಾ ಒಳಗಾಗುತ್ತಿರುವ ಅಥವಾ ಒಳಗಾಗಬಹುದಾದ ಮಗು (ಹಿಂಸಿಸಲಾದ ಅಥವಾ ಲೈಂಗಿಕವಾಗಿ ಅಥವಾ ಕ್ರಿಮಿನಲ್ ಆಗಿ ಶೋಷಣೆಗೊಳಾಗಿದ್ದೂ ಸೇರಿದಂತೆ);
9. ಸುಲಭವಾಗಿ ಈಡಾಗಬಹುದಾದ ಮತ್ತು ಡ್ರಗ್ ದುರುಪಯೋಗ ಅಥವಾ ಕಳ್ಳಸಾಗಾಣಿಕೆಗೆ ಪ್ರಚೋದಿಸುವ ಸಾದ್ಯತೆ ಇರುವ ಮಗು;
10. ಅನ್ಯಾಯಯುತವಾದ ಮತ್ತು ಅಸ್ವೀಕಾರಾರ್ಹ ಲಾಭಗಳಿಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವ ಅಥವಾ ಮಾಡಿಕೊಳ್ಳಬಹುದಾದ ಮಗು;
11. ಸಶಸ್ತ್ರ ಪಡೆಗಳೊಂದಿಗೆ ಸಂಘರ್ಷದ ಪರಿಣಾಮದಿಂದ ಸಂತ್ರಸ್ತವಾಗಿರುವ ಮಗು;
12. ಮದುವೆಯ ವಯಸ್ಸನ್ನು ತಲುಪುವ ಮೊದಲೇ (18 ವರ್ಷಗಳು) ಮದುವೆಗೆ ಒಳಗಾಗುವ ಸಂಭಾವ್ಯತೆ ಹತ್ತಿರವಿರುವ ಮಗು

36. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಜುವೆನಿಲ್ ನ್ಯಾಯ ಮಂಡಳಿಗಳಿಗೆ ಕಾಯಿದೆಯು ಈ ಕೆಳಗಿನವುಗಳೂ ಸೇರಿದಂತೆ ಹಲವಾರು ಮಾರ್ಗದರ್ಶಿ ನಿಯಮಗಳನ್ನು ಅಥವಾ ತತ್ವಗಳನ್ನು ರೂಪಿಸಿದೆ:[34]

- *ಭಾಗವಹಿಸುವಿಕೆಯ ತತ್ವ:* ಪ್ರತೀ ಮಗುವಿಗೂ ಅವರ ಹಿತಾಸಕ್ತಿಯನ್ನು ಪ್ರಭಾವಿಸುವಂತಹ ಎಲ್ಲ ಪ್ರಕ್ರಿಯೆಗಳು ಮತ್ತು ನಿರ್ಧಾರಗಳಲ್ಲಿ ಭಾಗವಹಿಸುವ ಮತ್ತು ವಿಚಾರಣೆಯಲ್ಲಿ ಕೇಳಲ್ಪಡುವ ಹಕ್ಕು ಇದೆ, ಮಗುವಿನ ವಯಸ್ಸು ಮತ್ತು ಪ್ರೌಢತೆಯನ್ನು ಗಮನದಲ್ಲಿಟ್ಟುಕೊಂಡು, ಮಗುವಿನ ದೃಷ್ಟಿಕೋನಗಳನ್ನು ಪರಿಗಣಿಸುವ ಅಗತ್ಯವಿದೆ.
- *ಹಿತಾಸಕ್ತಿಯ ತತ್ವ:* ಮಗುವಿಗೆ ಸಂಬಂಧಿಸಿದ ಎಲ್ಲ ನಿರ್ಧಾರಗಳು ಮಗುವಿನ ಅತ್ಯುತ್ತಮ ಹಿತಾಸಕ್ತಿಯಲ್ಲಿವೆ ಮತ್ತು ಮಗುವಿನ ಸಂಪೂರ್ಣ ಅಭಿವೃದ್ಧಿ ಸಾಧಿಸಲು ಸಹಾಯ ಮಾಡುತ್ತದೆ ಎಂಬುದನ್ನು ಮುಖ್ಯವಾಗಿ ಪರಿಗಣಿಸಿದ್ದನ್ನು ಆಧರಿಸಿರಬೇಕು.
- *ಸುರಕ್ಷತೆಯ ತತ್ವ:* ಮಗುವು ಆರೈಕೆ ಮತ್ತು ರಕ್ಷಣಾ ವ್ಯವಸ್ಥೆಯ ಸಂಪರ್ಕದಲ್ಲಿರುವಾಗ ಸುರಕ್ಷಿತವಾಗಿದೆ ಮತ್ತು ಯಾವುದೇ ಹಾನಿ, ನಿಂದನೆ, ಕಿರುಕುಳಕ್ಕೆ ಒಳಗಾಗುತ್ತಿಲ್ಲ ಅಥವಾ ಕೆಟ್ಟದಾಗಿ ನಡೆಸಿಕೊಳ್ಳುತ್ತಿಲ್ಲ ಎಂಬುದನ್ನು ಖಾತ್ರಿಪಡಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.
- *ಸಮಾನತೆಯ ಮತ್ತು ತಾರತಮ್ಯ-ರಹಿತ ತತ್ವ:* ಮಗುವಿನ ವಿರುದ್ಧ ಲಿಂಗ, ಜಾತಿ, ಜನಾಂಗೀಯತೆ, ಹುಟ್ಟಿದ ಸ್ಥಳ, ಅಂಗವಿಕಲತೆಯೂ ಸೇರಿದಂತೆ ಯಾವುದೇ ನೆಲೆಯಲ್ಲಿ ತಾರತಮ್ಯ ಮಾಡಬಾರದು ಮತ್ತು ಲಭ್ಯತೆ, ಅವಕಾಶಗಳು ಮತ್ತು ನೋಡಿಕೊಳ್ಳುವಿಕೆಯ ಸಮಾನತೆಯನ್ನು ಪ್ರತೀ ಮಗುವಿಗೂ ಒದಗಿಸಬೇಕು.

37. ಮಕ್ಕಳಿಗೆ ಸಂಬಂಧಿಸಿದ ಪೊಲೀಸರ ಎಲ್ಲ ಕಾರ್ಯಭಾರಗಳನ್ನು ಸಮನ್ವಯಗೊಳಿಸಲು, ರಾಜ್ಯ ಸರ್ಕಾರಗಳು ವಿಶೇಷ ಬಾಲನ್ಯಾಯ ಪೊಲೀಸು ಘಟಕಗಳನ್ನು ಪ್ರತೀ ಜಿಲ್ಲೆ ಮತ್ತು ನಗರಗಳಲ್ಲಿ ಸ್ಥಾಪಿಸಬೇಕು, ಇದಕ್ಕೆ ಡೆಪ್ಯುಟಿ

[33] Juvenile Justice Act, s.2(14).
[34] Juvenile Justice Act, s.3.

[redacted]

ಸೂಪರಿಂಟೆಂಡೆಂಟ್ ಶ್ರೇಣಿ ಅಥವಾ ಅದಕ್ಕಿಂತ ಮೇಲೆ ಇರುವ ಪೊಲೀಸ್ ಅಧಿಕಾರಿಗಳು ಮುಖ್ಯಸ್ಥರಾಗಿರಬೇಕು ಮತ್ತು ವಿಶೇಷವಾಗಿ ತರಬೇತಿ ಹೊಂದಿದ ಪೊಲೀಸ್ ಅಧಿಕಾರಿಗಳು ಮತ್ತು ಇಬ್ಬರು ಮಕ್ಕಳ ಕಲ್ಯಾಣ ವಿಷಯಗಳಲ್ಲಿ ಅನುಭವವಿರುವ ಇಬ್ಬರು ಸಾಮಾಜಿಕ ಕಾರ್ಯಕರ್ತರು, ಅವರಲ್ಲೊಬ್ಬರು ಮಹಿಳೆಯಾಗಿರಬೇಕು, ಇವರೆಲ್ಲರೂ ಈ ಘಟಕದಲ್ಲಿರಬೇಕು.[35]

38. ರಾಷ್ಟ್ರೀಯ ಮತ್ತು ರಾಜ್ಯ ಹಂತದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಕೂಡ ಬಾಲ ನ್ಯಾಯ ಕಾಯಿದೆಯ ಅನುಷ್ಠಾನದ ಮೇಲ್ವಿಚಾರಣೆ ನೋಡುತ್ತ, ನಿಗಾವಹಿಸುವ ಅಗತ್ಯವಿದೆ.[36]

**ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು**

39. ಬಾಲ ನ್ಯಾಯ ಕಾಯಿದೆಯು ರಾಜ್ಯ ಸರ್ಕಾರಗಳು ಪ್ರತೀ ಜಿಲ್ಲೆಯಲ್ಲಿ ಬಾಲ ನ್ಯಾಯ ಮಂಡಳಿಯನ್ನು ರಚಿಸುವುದನ್ನು ಅಗತ್ಯಗೊಳಿಸಿದ್ದು, ಇದು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಿಸಿದಂತೆ ವಿಶೇಷ ಅಧಿಕಾರಗಳನ್ನು ಮತ್ತು ಕಾರ್ಯಭಾರಗಳನ್ನು ಹೊಂದಿರುತ್ತದೆ.[37] ಬಾಲ ನ್ಯಾಯ ಮಂಡಳಿಯು ಒಬ್ಬರು ಪ್ರಧಾನ ಮ್ಯಾಜಿಸ್ಟ್ರೇಟ್ ಮತ್ತು ಇಬ್ಬರು ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡಿದ್ದು, ಇವರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರಬೇಕು.[38] ಮಂಡಳಿಯು ಮಗುವಿನ ಬಂಧನ, ವಿಚಾರಣೆ, ನಂತರದ ಕಾಳಜಿ ಮತ್ತು ಪುನರ್ವಸತಿಯ ಪ್ರಕ್ರಿಯೆಯುದ್ದಕ್ಕೂ ಮಗುವಿನ ಹಕ್ಕುಗಳು ಹಾಗೂ ಮಗುವಿಗೆ ಹೇಳಿ, ಭಾಗವಹಿಸುವಂತೆ ಮಾಡುವುದನ್ನು ಖಾತ್ರಿಪಡಿಸಬೇಕು ಹಾಗೂ ಮಗುವಿಗೆ ಕಾನೂನಿನ ಸಹಾಯ ದೊರಕುವುದನ್ನು ಖಾತ್ರಿಪಡಿಸಬೇಕು.[39]

40. ಪೊಲೀಸರು ಕಾನೂನಿನೊಂದಿಗೆ ಸಂಘರ್ಷದಲ್ಲಿದೆ ಎಂದು ಆಪಾದಿಸಲಾದ ಮಗುವನ್ನು ಬಂಧಿಸಿದ ಕೂಡಲೇ, ಮಗುವನ್ನು ವಿಶೇಷ ಬಾಲ ನ್ಯಾಯ ಪೊಲೀಸ್ ಘಟಕದಲ್ಲಿ ಇರಿಸಬೇಕು ಅಥವಾ ಮಗುವನ್ನು ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಯ ಸುಪರ್ದಿಗೊಪ್ಪಿಸಬೇಕು. ಅವರು ಮಗುವಿನ ಪೋಷಕರು ಅಥವಾ ಪಾಲಕರನ್ನು ಅವರು ಕಂಡಲ್ಲಿ, ಅವರಿಗೆ ತಿಳಿಸಬೇಕು ಮತ್ತು ಮಗುವನ್ನು ಬಂಧಿಸಿದ 24 ಗಂಟೆಯ ಒಳಗೆ ಬಾಲ ನ್ಯಾಯ ಮಂಡಳಿಯ ಎದುರು ಹಾಜರುಪಡಿಸಬೇಕು.[40] ಮಂಡಳಿಯು ವಿಚಾರಣೆಯನ್ನು ಪೂರ್ಣಗೊಳಿಸಬೇಕು ಮತ್ತು 4 ತಿಂಗಳುಗಳ ಒಳಗೆ ಮಗುವಿಗೆ ಸಂಬಂಧಿಸಿದಂತೆ ಆದೇಶಗಳನ್ನು ನೀಡಬೇಕು (ಹೆಚ್ಚೆಂದರೆ 2 ತಿಂಗಳ ಗರಿಷ್ಠ ವಿಸ್ತರಣೆಗೆ ಒಳಪಟ್ಟು).[41]

41. 18 ವರ್ಷಕ್ಕೆ ಮೇಲ್ಪಟ್ಟ ಯಾರೇ ವ್ಯಕ್ತಿಯನ್ನು ಆತ ಅಥವಾ ಆಕೆ ಮಗುವಾಗಿದ್ದಾಗ (18 ವರ್ಷಕ್ಕಿಂತ ಕೆಳಗೆ) ಮಾಡಿದ ಅಪರಾಧಕ್ಕೆ ಬಂಧಿಸಿದರೆ, ವಿಚಾರಣೆ ಪ್ರಕ್ರಿಯೆಯ ಅವಧಿಯಲ್ಲಿ ಮಗುವಿನಂತೆಯೇ ನಡೆಸಿಕೊಳ್ಳಬೇಕು.[42]

42. ಬಾಲ ನ್ಯಾಯ ಮಂಡಳಿಯು ವಿಚಾರಣೆ ನಡೆಸಿದ ನಂತರ ಮಗುವು ಒಂದು ಚಿಕ್ಕ ಅಪರಾಧ, ಒಂದು ಗಂಭೀರ ಅಪರಾಧ ಅಥವಾ 16 ವರ್ಷಕ್ಕಿಂತ ಕೆಳಗಿನ ಮಗು ತುಂಬ ಘೋರವಾದ ಅಪರಾಧ ಎಸಗಿದ್ದಾರೆ ಎಂದು ಕಂಡುಕೊಂಡ ನಂತರ, ಮಂಡಳಿಯು ಇದಕ್ಕೆ ಅನಗುಣವಾಗಿ, ಅವರಿಗೆ ಸೂಕ್ತವೆನ್ನಿಸಿದಂತೆ, ಈ ಕೆಳಗಿನವೂ ಸೇರಿದಂತೆ ಆದೇಶವನ್ನು ನೀಡಬಹುದು:[43]

1. ಮಗುವಿಗೆ ಉಪದೇಶ ಅಥವಾ ವಾಗ್ದಂಡನೆ ವಿಧಿಸಿದ ನಂತರ ಮನೆಗೆ ಹೋಗಲು ಆಸ್ಪದ ನೀಡುವುದು;
2. ಮಗುವಿಗೆ ಗುಂಪು ಸಮಾಲೋಚನೆಯಲ್ಲಿ ಭಾಗವಹಿಸುವಂತೆ ನಿರ್ದೇಶಿಸುವುದು;
3. ಮಗುವಿಗೆ ಸಮುದಾಯ ಸೇವೆಯನ್ನು ಮೇಲ್ವಿಚಾರಣೆಯಲ್ಲಿ ಮಾಡುವಂತೆ ಆದೇಶಿಸುವುದು;
4. ಮಗು ಅಥವಾ ಪೋಷಕರಿಗೆ ದಂಡ ಪಾವತಿಸುವಂತೆ ಆದೇಶಿಸುವುದು;
5. ಮಗುವಿನ ಸನ್ನಡತೆಯ ಷರತ್ತಿನ ಮೇಲೆ (ಪ್ರಬೇಶನ್) ಬಿಡುಗಡೆ ಮಾಡುವಂತೆ ಮತ್ತು ಪೋಷಕರು, ಪಾಲಕರು ಅಥವಾ ಬೇರಾವುದೇ ಸೂಕ್ತ ವ್ಯಕ್ತಿಯ ಕಾಳಜಿ ಮತ್ತು ಮೇಲ್ವಿಚಾರಣೆಯಲ್ಲಿ 3 ವರ್ಷಗಳವರೆಗೆ ಇಡುವಂತೆ ಹೇಳುವುದು;

---

[35] Juvenile Justice Act, s.107.
[36] Juvenile Justice Act, s.109.
[37] Juvenile Justice Act, ss. 4(1) and 8.
[38] Juvenile Justice Act, ss.4(2)-(4).
[39] Juvenile Justice Act, ss.8(3).
[40] Juvenile Justice Act, s.10(1).
[41] Juvenile Justice Act, s.14.
[42] Juvenile Justice Act, s.6(1).
[43] Juvenile Justice Act, s.18(1).

6. ಮಗುವಿನ ಸನ್ನಡತೆಯ ಷರತ್ತಿನ ಮೇಲೆ (ಪ್ರಬೇಶನ್) ಬಿಡುಗಡೆ ಮಾಡುವಂತೆ ಮತ್ತು ಸೂಕ್ತ ವ್ಯವಸ್ಥೆಯಡಿಯ ಕಾಳಜಿ ಮತ್ತು ಮೇಲ್ವಿಚಾರಣೆಯಲ್ಲಿ 3 ವರ್ಷಗಳವರೆಗೆ ಇಡುವಂತೆ ಹೇಳುವುದು;
7. ಮಗುವನ್ನು ವಿಶೇಷ ಸುಧಾರಣಾ ಗೃಹಕ್ಕೆ 3 ವರ್ಷಗಳವರೆಗೆ ಎಷ್ಟು ಸಮಯವಾದರೂ ಕಳಿಸುವಂತೆ ನಿರ್ದೇಶಿಸುವುದು.

43. ಯಾವುದೇ ಪ್ರಕರಣದಲ್ಲಿ, ಮಗುವಿಗೆ 16+ ವರ್ಷವಾಗಿದ್ದಾಗ ಘೋರವಾದ ಅಪರಾಧವನ್ನು (ಕನಿಷ್ಠ ಶಿಕ್ಷೆ 7 ವರ್ಷಗಳ ಜೈಲು ವಾಸ ವಿಧಿಸುವಂತಹ ಅಪರಾಧಗಳು)[44] ಮಾಡಿದೆ ಎಂದು ಆಪಾದಿಸಲಾಗಿದ್ದರೆ, ಅಪರಾಧವನ್ನು ಎಸಗುವ ಮತ್ತು ಅದರ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳುವ ಮಗುವಿನ ಸಾಮರ್ಥ್ಯದ ಕುರಿತು ಬಾಲ ನ್ಯಾಯ ಮಂಡಳಿಯು 3 ತಿಂಗಳ ಒಳಗೆ ಪ್ರಾಥಮಿಕ ಮೌಲ್ಯಮಾಪನ ಮಾಡಬೇಕು ಮತ್ತು ಮಗುವನ್ನು ವಯಸ್ಕರ ಹಾಗೆ ವಿಚಾರಣೆ ನಡೆಸುವ ಕುರಿತು ಆದೇಶವನ್ನು ನೀಡಬಹುದು ಮತ್ತು ಪ್ರಕರಣವನ್ನು ಮಕ್ಕಳ ನ್ಯಾಯಾಲಯಕ್ಕೆ ವರ್ಗಾಯಿಸಬೇಕು.[45]

44. ಮಕ್ಕಳ ನ್ಯಾಯಾಲಯವು ಮಗುವನ್ನು ವಯಸ್ಕ ಎಂದು ಪರಿಗಣಿಸಬೇಕೆ, ಬೇಡವೇ ಎಂದು (ಮಗುವಿನ ವಿಶೇಷ ಅಗತ್ಯಗಳನ್ನು ಗಮನಕ್ಕೆ ತಂದುಕೊಂಡು ಮತ್ತು ಮಗು ಸ್ನೇಹಿ ವಾತಾವರಣವನ್ನು ಕಾಯ್ದುಕೊಂಡು) ನಿರ್ಧರಿಸಬಹುದು.[46] ಮಕ್ಕಳ ನ್ಯಾಯಾಲಯವು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿನ ಪುನರ್ವಸತಿಗಾಗಿ ವೈಯಕ್ತಿಕ ಕಾಳಜಿ ಯೋಜನೆಯೂ ಸೇರಿದಂತೆ ಒಂದು ಅಂತಿಮ ಆದೇಶವನ್ನು ಖಾತ್ರಿಪಡಿಸಬೇಕು.[47]

45. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಯಾವುದೇ ಮಗುವನ್ನು ಗಲ್ಲು ಶಿಕ್ಷೆ ಅಥವಾ ಬಿಡುಗಡೆಯ ಸಾಧ್ಯತೆಯೇ ಇಲ್ಲದ ಜೀವಾವಧಿ ಶಿಕ್ಷೆಗೆ ಗುರಿಪಡಿಸಬಾರದು.[48]

**ಕಾಳಜಿ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳು**

46. ಬಾಲ ನ್ಯಾಯ ಕಾಯಿದೆಯು ರಾಜ್ಯ ಸರ್ಕಾರಗಳು ಪ್ರತೀ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿ ರಚಿಸುವುದನ್ನು ಅಗತ್ಯಗೊಳಿಸಿದ್ದು, ಇದು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಿಸಿದಂತೆ ವಿಶೇಷ ಅಧಿಕಾರಗಳನ್ನು ಮತ್ತು ಕಾರ್ಯಭಾರಗಳನ್ನು ಹೊಂದಿರುತ್ತದೆ.[49] ಸಮಿತಿಯು ಒಬ್ಬರು ಅಧ್ಯಕ್ಷರು ಮತ್ತು ನಾಲ್ಕು ಬೇರೆ ಸದಸ್ಯರನ್ನು ಹೊಂದಿದ್ದು, ಅವರಲ್ಲಿ ಕನಿಷ್ಠ ಒಬ್ಬರು ಮಕ್ಕಳ/ಮಗು ಪರಿಣಿತರಾಗಿರಬೇಕಿದ್ದು, ಒಬ್ಬರು ಮಹಿಳೆಯಾಗಿರಬೇಕು.[50] ಸಮಿತಿಯು ಕಾಳಜಿ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಕಾಳಜಿ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿಯ ಪ್ರಕರಣಗಳೊಂದಿಗೆ ವ್ಯವಹರಿಸುವ ಅಧಿಕಾರವನ್ನು ಹೊಂದಿರುತ್ತದೆ.[51]

47. ಕಾಳಜಿ ಮತ್ತು ರಕ್ಷಣೆಯ ಅಗತ್ಯವಿರುವ ಯಾವುದೇ ಮಗುವನ್ನು ಸಮಿತಿಯ ಮುಂದೆ ಪೊಲೀಸ್ ಅಧಿಕಾರಿ; ಮಕ್ಕಳ ಕಲ್ಯಾಣ ಅಧಿಕಾರಿ; ಸರ್ಕಾರಿ ಅಧಿಕಾರಿ/ಸೇವಕರು; ಸಾಮಾಜಿಕ ಕಾರ್ಯಕರ್ತರು; ನರ್ಸ್ ಅಥವಾ ಡಾಕ್ಟರ್; ಸಾರ್ವಜನಿಕ ಹಿತಾಸಕ್ತಿಯುಳ್ಳ ನಾಗರಿಕ; ಇವರಲ್ಲಿ ಯಾರಾದರೂ ಹಾಜರುಪಡಿಸಬಹುದು ಅಥವಾ ಮಗು ತಾನಾಗಿಯೇ ಬರಬಹುದು.[52]

48. ಮಕ್ಕಳ ಕಲ್ಯಾಣ ಸಮಿತಿಯು ವಿಚಾರಣೆಯನ್ನು ನಡೆಸುತ್ತದೆ. ಸಮಿತಿಯು ಮಗುವನ್ನು ಮಕ್ಕಳ ಗೃಹ ಅಥವಾ ಆಶ್ರಯಶಾಲೆಕ್ಕೆ ಅಥವಾ ಸೂಕ್ತ ವ್ಯವಸ್ಥೆಗೆ ಅಥವಾ ಸೂಕ್ತ ವ್ಯಕ್ತಿಯ ಬಳಿಗೆ ಕಳಿಸುವ ಆದೇಶವನ್ನು ಜಾರಿಗೊಳಿಸಬಹುದು ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಯಿಂದ ಒಂದು ಸಾಮಾಜಿಕ ತನಿಖೆಗೆ ಆದೇಶಿಸುತ್ತದೆ (15 ದಿನಗಳ ಒಳಗೆ ಇದನ್ನು

---

[44] Juvenile Justice Act, s.2(33).
[45] Juvenile Justice Act, ss. 15 and 18(3).
[46] Juvenile Justice Act, s.19.
[47] Juvenile Justice Act, s.19(2).
[48] Juvenile Justice Act, s.21.
[49] Juvenile Justice Act, ss. 27(1).
[50] Juvenile Justice Act, ss.27(2).
[51] Juvenile Justice Act, s.29(1).
[52] Juvenile Justice Act, s.31(1).



[redacted]

ಪೂರ್ಣಗೊಳಿಸಬೇಕು).[53] ಎದುರು ಇರುವ ಮಗುವು ಕಾಳಜಿ ಮತ್ತು ರಕ್ಷಣೆ ಅಗತ್ಯವಿರುವ ಮಗು ಎಂದು ಒಮ್ಮೆ ಅವರಿಗೆ ತೃಪ್ತಿಕರವಾಗಿ ಅನ್ನಿಸಿದರೆ, ಮಕ್ಕಳ ಕಲ್ಯಾಣ ಸಮಿತಿಯು ಈ ಕೆಳಗಿನವುಗಳೂ ಸೇರಿದಂತೆ, ಹಲವಾರು ಆದೇಶಗಳನ್ನು (4 ತಿಂಗಳುಗಳ ಒಳಗೆ)[54] ನೀಡಬಹುದು: [55]

1. ಮಗುವನ್ನು ಪೋಷಕರು ಅಥವಾ ಪಾಲಕರ ಬಳಿ ಮೇಲ್ವಿಚಾರಣೆಸಹಿತವಾಗಿ ಅಥವಾ ಮೇಲ್ವಿಚಾರಣೆ ಇಲ್ಲದೆಯೇ ಇರಿಸುವುದು;
2. ಮಗುವನ್ನು ದೀರ್ಘಕಾಲೀನ ಅವಧಿಗೆ ಅಥವಾ ತಾತ್ಕಾಲಿಕ ಕಾಳಜಿ ತೆಗೆದುಕೊಳ್ಳಲು ಸೂಕ್ತ ವ್ಯಕ್ತಿಯೊಬ್ಬರ ಬಳಿ ಇರಿಸುವುದು;
3. ಮಕ್ಕಳ ಗೃಹದಲ್ಲಿ ಅಥವಾ ಸೂಕ್ತ ಸೌಲಭ್ಯದಲ್ಲಿ ಅಥವಾ ವಿಶೇಷ ಪರಿಣಿತಿಯ ದತ್ತು ಸಂಸ್ಥೆಯಲ್ಲಿ ಇರಿಸುವುದು;
4. ಮಗುವನ್ನು ಸಾಕುವ ಆದೇಶ;
5. ಮಗುವನ್ನು ಇರಿಸಲಾದ ಕಡೆ ಆ ವ್ಯಕ್ತಿ ಅಥವಾ ಸಂಸ್ಥೆಗೆ ಮಗುವಿನ ಕಾಳಜಿ, ರಕ್ಷಣೆ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ ಆದೇಶಗಳು;
6. ಅನಾಥ ಅಥವಾ ಪರಿತ್ಯಕ್ತ ಮಗುವಿನ ಪ್ರಕರಣದಲ್ಲಿ, ಮಗುವು ದತ್ತು ತೆಗೆದುಕೊಳ್ಳಲು ಕಾನೂನಾತ್ಮಕವಾಗಿ ಅರ್ಹವಿದೆ ಎಂಬ ಘೋಷಣೆ ಮಾಡುವುದು.

ಮಗುವಿನ ವಿರುದ್ಧ ಅಪರಾಧಗಳು

49. ವಿಚಾರಣೆ ಅಥವಾ ತನಿಖೆ ಅಥವಾ ನ್ಯಾಯಾಂಗ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳು, ನಿಯತಕಾಲಿಕಗಳು, ಆಡಿಯೋ–ವಿಶುವಲ್ ಮಾಧ್ಯಮ ಅಥವಾ ಬೇರೆ ರೀತಿಯ ಸಂವಹನಾ ಮಾಧ್ಯಮಗಳಲ್ಲಿ ವರದಿಗಳು ಕಾನೂನಿನ ಜೊತೆ ಸಂಘರ್ಷದಲ್ಲಿರುವ ಮಗು, ಕಾಳಜಿ ಮತ್ತು ರಕ್ಷಣೆಯ ಅಗತ್ಯವಿರುವ ಮಗು ಅಥವಾ ಸಂತ್ರಸ್ತ ಮಗು ಅಥವಾ ಅಪರಾಧದ ಸಾಕ್ಷಿಯನ್ನು ಗುರುತಿಸುವುದಕ್ಕೆ ಕಾರಣವಾಗುವಂತೆ ಹೆಸರು, ವಿಳಾಸ, ಶಾಲೆ ಅಥವಾ ಬೇರೆ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಬಾರದು, ಮಗುವಿನ ಅತ್ಯುತ್ತಮ ಹಿತಾಸಕ್ತಿಯಲ್ಲಿ ಹಾಗೆ ಮಾಡಬಹುದು ಎಂದು ಮಕ್ಕಳ ಕಲ್ಯಾಣ ಸಮಿತಿಯು ಒಪ್ಪಿಗೆ ಕೊಟ್ಟಾಗ ಮಾತ್ರವೇ ಬಹಿರಂಗಪಡಿಸಬೇಕು.[56]

50. ಮಗುವಿನ ಉಸ್ತುವಾರಿ ಅಥವಾ ನಿಯಂತ್ರಣವನ್ನು ನೋಡಿಕೊಳ್ಳುವ ಯಾವುದೇ ವ್ಯಕ್ತಿ ಮಗುವಿನ ಮೇಲೆ ಹಲ್ಲೆ ಮಾಡುವುದು, ಮಗುವನ್ನು ಬಿಟ್ಟುಬಿಡುವುದು, ನಿಂದಿಸುವುದು, ಪ್ರದರ್ಶಿಸುವುದು ಅಥವಾ ಉದ್ದೇಶಪೂರಿತವಾಗಿ ನಿರ್ಲಕ್ಷಿಸುವುದು ಅಥವಾ ಮಗುವಿಗೆ ಅನಗತ್ಯ ಮಾನಸಿಕ ಅಥವಾ ದೈಹಿಕ ಯಾತನೆ ಉಂಟುಮಾಡುವ ರೀತಿಯಲ್ಲಿ ನಿರ್ಲಕ್ಷಿಸಿದರೆ, ಅಂತಹ ವ್ಯಕ್ತಿಗೆ 3 ವರ್ಷಗಳವರೆಗೆ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು.[57]

51. ಮಗುವನ್ನು ಭಿಕ್ಷೆಗೆ ಬಳಸುವ ಅಥವಾ ನೇಮಿಸಿಕೊಳ್ಳುವ ಅಥವಾ ಮಗು ಭಿಕ್ಷೆ ಬೇಡುವಂತೆ ಮಾಡುವ ವ್ಯಕ್ತಿಗೆ 5 ವರ್ಷಗಳವರೆಗೆ ಜೈಲುಶಿಕ್ಷೆ ಅಥವಾ ದಂಡವನ್ನು ವಿಧಿಸಲಾಗುವುದು.[58]

52. ಯಾರಾದರೂ ಮಗುವಿಗೆ ಮತ್ತೇರಿಸುವ ಪಾನೀಯ, ಅಮಲೇರಿಸುವ ಡ್ರಗ್, ತಂಬಾಕು ಅಥವಾ ಹೊಗೆಸೊಪ್ಪಿನ ಉತ್ಪನ್ನಗಳು ಅಥವಾ ಸೈಕೋಟ್ರೋಫಿಕ್ ವಸ್ತುಗಳನ್ನು ಕೊಟ್ಟರೆ ಅಥವಾ ಕೊಡುವಂತೆ ಮಾಡಿದರೆ, ವೈದ್ಯರ ಸೂಚನೆಗಳು ಇದ್ದಾಗ ಹೊರತುಪಡಿಸಿ, ಅಂಥವರನ್ನು 7 ವರ್ಷಗಳ ಕಠಿಣ ಜೈಲುಶಿಕ್ಷೆಗೆ ಒಳಪಡಿಸಲಾಗುವುದು ಮತ್ತು ದಂಡವನ್ನೂ ವಿಧಿಸಬಹುದು.[59]

53. ಯಾರಾದರೂ ಮಗುವನ್ನು ಮತ್ತೇರಿಸುವ ಪಾನೀಯ, ಅಮಲೇರಿಸುವ ಡ್ರಗ್, ತಂಬಾಕು ಅಥವಾ ಹೊಗೆಸೊಪ್ಪಿನ ಉತ್ಪನ್ನಗಳು ಅಥವಾ ಸೈಕೋಟ್ರೋಫಿಕ್ ವಸ್ತುಗಳ ಮಾರಾಟಕ್ಕೆ, ಅಲೆದಾಟಕ್ಕೆ, ಹೊತ್ತೊಯ್ಯುವುದಕ್ಕೆ, ಪೂರೈಸುವುದಕ್ಕೆ ಅಥವಾ ಕಳ್ಳಸಾಗಣಿಕೆ ಮಾಡುವುದಕ್ಕೆ ಬಳಸಿದರೆ, ಅಂಥವರಿಗೆ 7 ವರ್ಷಗಳವರೆಗಿನ ಕಠಿಣ ಜೈಲುಶಿಕ್ಷೆಗೆ ಒಳಪಡಿಸಲಾಗುವುದು ಮತ್ತು ದಂಡವನ್ನೂ ವಿಧಿಸಬಹುದು. [60]

---

[53] Juvenile Justice Act, s.36.
[54] Juvenile Justice Act, s36(2).
[55] Juvenile Justice Act, s37(1).
[56] Juvenile Justice Act, s.74(1).
[57] Juvenile Justice Act, s.75.
[58] Juvenile Justice Act, s.76(1).
[59] Juvenile Justice Act, s.77.
[60] Juvenile Justice Act, s.78.

60. ಬಾಲ ಕಾರ್ಮಿಕ ಕಾಯಿದೆಯು 14 ವರ್ಷ ಕೆಳಗಿನ ಮಕ್ಕಳನ್ನು ಯಾವುದೇ ವೃತ್ತಿ ಅಥವಾ ಪ್ರಕ್ರಿಯೆಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವುದನ್ನು ಈ ಕೆಳಗಿನ ಸಂದರ್ಭಗಳನ್ನು ಹೊರತುಪಡಿಸಿ, ನಿಷೇಧಿಸುತ್ತದೆ;

- ಮಗು ಶಾಲಾ ಅವಧಿಯ ನಂತರ ಅಥವಾ ರಜೆಯ ಅವಧಿಯಲ್ಲಿ ತನ್ನ ಕುಟುಂಬಕ್ಕೆ ಅಥವಾ ಕುಟುಂಬದ ಉದ್ಯಮಕ್ಕೆ (ಅಪಾಯಕಾರಿ ವೃತ್ತಿ ಅಥವಾ ಪ್ರಕ್ರಿಯೆ ಅಲ್ಲದ ಉದ್ಯಮ) ಸಹಾಯ ಮಾಡುತ್ತಿದ್ದರೆ;
- ಮಗುವು ಕಲಾವಿದರಾಗಿ ಜಾಹೀರಾತು, ಸಿನಿಮಾಗಳು, ದೂರದರ್ಶನ, ಕ್ರೀಡೆಯೂ ಸೇರಿದಂತೆ, ಆದರೆ ಸರ್ಕಸ್ ಹೊರತುಪಡಿಸಿ ಆಡಿಯೋ–ವಿಡಿಯೋ ಮನೋರಂಜನಾ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದರೆ.

ಅಂತಹ ಕೆಲಸವು ಮಗುವಿನ ಶಾಲಾ ಶಿಕ್ಷಣವನ್ನು ಪರಿಣಾಮಿಸದೇ ಇದ್ದಾಗ ಮಾತ್ರ ಮಾಡಬಹುದು.[66]

61. ಬಾಲ ಕಾರ್ಮಿಕ ಕಾಯಿದೆಯು 18 ತುಂಬದ ಹರೆಯದವರನ್ನು ಅಪಾಯಕಾರಿ ವೃತ್ತಿ ಮತ್ತು ಪಕ್ರಿಯೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ನಿಷೇಧಿಸುತ್ತದೆ.[67]

62. ಷರತ್ತುಗಳನ್ನು (ಪ್ಯಾರಾ 42ರಲ್ಲಿ ಮೇಲೆ ಹೇಳಿದಂತಹ) ಉಲ್ಲಂಘಿಸುವಂತಹ ಕೆಲಸಗಳಲ್ಲಿ ಮಗುವನ್ನು (14 ವರ್ಷಕ್ಕಿಂತ ಕೆಳಗಿನ) ನೇಮಿಸಿಕೊಂಡರೆ ಅಥವಾ ಕೆಲಸ ಮಾಡಲು ಆಸ್ಪದ ಕೊಟ್ಟರೆ, ಅವರಿಗೆ 6 ವರ್ಷದಿಂದ 2 ವರ್ಷಗಳವರೆಗಿನ ಅವಧಿಗೆ ಜೈಲುಶಿಕ್ಷೆ ವಿಧಿಸಬಹುದು ಅಥವಾ ದಂಡ ವಿಧಿಸಲಾಗುವುದು ಅಥವಾ ಎರಡನ್ನೂ ವಿಧಿಸಲಾಗುವುದು. ಮಗುವನ್ನು ವಾಣಿಜ್ಯಕ ಉದ್ದೇಶಗಳಿಗೆ ಕೆಲಸ ಮಾಡಲು ಆಸ್ಪದ ಕೊಡದಿದ್ದರೆ, ಪೋಷಕರು ಅಥವಾ ಪಾಲಕರನ್ನು ಶಿಕ್ಷಿಸುವುದಿಲ್ಲ.[68]

63. ಹರೆಯದವರನ್ನು ಅಪಾಯಕಾರಿ ವೃತ್ತಿ ಅಥವಾ ಪ್ರಕ್ರಿಯೆಯಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವ ಯಾರಿಗೇ ಆದರೂ 6 ವರ್ಷದಿಂದ 2 ವರ್ಷಗಳವರೆಗಿನ ಅವಧಿಗೆ ಜೈಲುಶಿಕ್ಷೆ ವಿಧಿಸಬಹುದು ಅಥವಾ ದಂಡ ವಿಧಿಸಲಾಗುವುದು ಅಥವಾ ಎರಡನ್ನೂ ವಿಧಿಸಲಾಗುವುದು.[69]

64. ತಮ್ಮ ಮಗುವನ್ನು ಅಥವಾ ಹರೆಯದವರನ್ನು ಈ ಹೊಸ ಕಾನೂನು ಷರತ್ತುಗಳನ್ನು ಉಲ್ಲಂಘಿಸುವಂತಹ ಕೆಲಸ ಮಾಡಲು ಒಪ್ಪಿಗೆ ಕೊಡುವ, ಅವಕಾಶ ಕೊಡುವ ಪೋಷಕರು ಅಥವಾ ಪಾಲಕರನ್ನು ಮೊದಲ ಸಲ ಶಿಕ್ಷಿಸುವುದಿಲ್ಲ.[70]

65. ರಾಜ್ಯ ಸರ್ಕಾರಗಳು ಮಗು ಮತ್ತು ಹರೆಯದವರ ಕಾರ್ಮಿಕ ಪುನರ್ವಸತಿ ನಿಧಿಯನ್ನು ಸ್ಥಾಪಿಸುವ ಅಗತ್ಯವಿದ್ದು, ಬಾಲ ಕಾರ್ಮಿಕ ಕಾಯಿದೆಯನ್ನು ಉಲ್ಲಂಘಿಸುವ ಉದ್ಯೋಗದಾತರಿಗೆ ವಿಧಿಸಿದ ಶುಲ್ಕವನ್ನು ಈ ನಿಧಿಗೆ ತುಂಬಬೇಕು.[71]

---

[66] Child Labour Act, s.5 amending the Child Labour (Prohibition and Regulation) Act 1986, s.3.
[67] Child Labour Act, s.6 inserting s.3A in the Child Labour (Prohibition and Regulation) Act 1986.
[68] Child Labour Act, s.18 amending the Child Labour (Prohibition and Regulation) Act 1986, s.14.
[69] Child Labour Act, s.18 amending the Child Labour (Prohibition and Regulation) Act 1986, s.14.
[70] Child Labour Act, s.18 amending the Child Labour (Prohibition and Regulation) Act 1986, s.14.
[71] Child Labour Act, s.19 inserting s.14B in the Child Labour (Prohibition and Regulation) Act 1986.



[redacted]

## 18 ವರ್ಷದ ಕೆಳಗಿನ ಹುಡುಗಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸುವುದು ಅತ್ಯಾಚಾರ

### ಸುಪ್ರೀಂ ಕೋರ್ಟ್ ತೀರ್ಪು – ಅಕ್ಟೋಬರ್ 2017

*ಇಂಡಿಪೆಂಡೆಂಟ್ ಥಾಟ್ ವಿರುದ್ಧ ಭಾರತ ಕೇಂದ್ರ ಸರ್ಕಾರ ಮತ್ತು ಇನ್ನೊಬ್ಬರು,*

*ರಿಟ್ ಪೆಟಿಶನ್ (ಸಿವಿಲ್), 2013ರ ಸಂಖ್ಯೆ 382*

ಈ ಪ್ರಕರಣದಲ್ಲಿ, ಗಂಡ ಮತ್ತು ಹೆಂಡತಿಯ ನಡುವಣ ಲೈಂಗಿಕ ಕ್ರಿಯೆಯು, ಆಕೆ 15ರಿಂದ 18ರ ಒಳಗಿನ ಹುಡುಗಿಯಾಗಿದ್ದರೆ, ಅತ್ಯಾಚಾರ ಎನ್ನಿಸಿಕೊಳ್ಳುವುದೇ ಎಂದು ನಿರ್ಣಯಿಸುವಂತೆ ಸುಪ್ರೀಂ ಕೋರ್ಟ್‌ಅನ್ನು ಕೇಳಿಕೊಳ್ಳಲಾಯಿತು. ಈ ಪ್ರಕರಣವು, ಪುರುಷನೊಬ್ಬ 15 ವರ್ಷಕ್ಕಿಂತ ಮೇಲಿನ ಹುಡುಗಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸಿದ್ದೇ ಆಗಲ್ಲಿ, ಆ ಹುಡುಗಿ ಅವನ ಹೆಂಡತಿಯಾಗಿದ್ದ ಪಕ್ಷದಲ್ಲಿ ಅದು ಅತ್ಯಾಚಾರವಲ್ಲ ಎಂದು ಹೇಳಿರುವ ಭಾರತೀಯ ದಂಡ ಸಂಹಿತೆಯ (ಐಪಿಸಿ) ಎಸ್.375ರ ವಿನಾಯಿತಿ 2ನ್ನು ವಿಶೇಷವಾಗಿ ಆಕ್ಷೇಪಿಸುವಂತಿದೆ.

ನ್ಯಾಯಾಲಯವು ಐಪಿಸಿಯ ಉಪಬಂಧಗಳು ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ (ಪೋಕ್ಸೋ)ಯ ನಡುವೆ ಸಂಘರ್ಷವಿದ್ದದ್ದನ್ನು ಗಮನಿಸಿತು: ಮದುವೆಯಾದ ಹೆಣ್ಣುಮಗುವಿನ ಮೇಲೆ ನಡೆಯುವ ಅತ್ಯಾಚಾರವು (15ರಿಂದ 18 ವರ್ಷದ ಒಳಗಿನ ಹೆಣ್ಣುಮಗು) ಅತ್ಯಾಚಾರವಲ್ಲ ಎಂದು ಐಪಿಸಿ ಹೇಳುತ್ತದೆ ಮತ್ತು ಆದ್ದರಿಂದ ಐಪಿಸಿ ಎಸ್.375 ವಿನಾಯಿತಿ 2ರ ಪ್ರಕಾರ ಇದು ಒಂದು ಕ್ರಿಮಿನಲ್ ಅಪರಾಧವಲ್ಲ; ಆದರೆ ಪೋಕ್ಸೋ ಎಸ್.5 (ಎನ್) ಅಡಿಯಲ್ಲಿ ಇದು ಆಕ್ರಮಣಶೀಲ ಲೈಂಗಿಕ ಹಲ್ಲೆಯಾಗಿದ್ದು, ಮಗುವಿನ ಮೇಲೆ ತೀವ್ರ ಲೈಂಗಿಕ ಹಲ್ಲೆಯನ್ನು ಮಾಡಿದಾಗ, ಆತ ಮಗುವಿಗೆ ಮದುವೆಯಂತಹ ಸಂಬಂಧದಿಂದ ಸಂಬಂಧ ಹೊಂದಿದ್ದರೂ, ಅದು ಕೂಡ ಲೈಂಗಿಕ ಹಲ್ಲೆಯೇ ಎಂದು ಹೇಳುತ್ತದೆ.

ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ 18 ವರ್ಷದೊಳಗಿನ ಹುಡುಗಿಯೊಂದಿಗೆ, ಲೈಂಗಿಕ ಕ್ರಿಯೆ ನಡೆಸುವುದು ಆಕೆ ಮದುವೆಯಾಗಿದ್ದಾಳೋ, ಇಲ್ಲವೋ ಎಂಬುದನ್ನು ಹೊರತುಪಡಿಸಿಯೂ, ಅದು ಅತ್ಯಾಚಾರವೇ ಎಂಬ ಅಭಿಪ್ರಾಯವನ್ನು ಎತ್ತಿಹಿಡಿಯಿತು:

- ಒಂದು ಮಗು ಎಂದರೆ 18 ವರ್ಷದೊಳಗಿನ ವ್ಯಕ್ತಿ, ಘನತೆಯಿಂದ ಬದುಕುವ ಹಕ್ಕು ಸೇರಿದಂತೆ, ಮಾನವ ಹಕ್ಕುಗಳ ರಕ್ಷಣೆಯನ್ನು ಹೊಂದುವ ಅರ್ಹತೆ ಅಥವಾ ಅಧಿಕಾರ ಹೊಂದಿರುವ ಒಂದು ವ್ಯಕ್ತಿ ಎಂದು.

- 18 ವರ್ಷಗಳ ಕೆಳಗಿನ ಹುಡುಗಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸುವುದು ಅತ್ಯಾಚಾರ, ಆಕೆಯ ಒಪ್ಪಿಗೆಯೊಂದಿಗೆ ಮಾಡಬಹುದು ಅಥವಾ ಆಕೆಯ ಒಪ್ಪಿಗೆಯಿಲ್ಲದೆ ಮಾಡಬಹುದು, ಆತನ ಗಂಡನೇ ಮಾಡಬಹುದು ಅಥವಾ ಬೇರೆ ಯಾರಾದರೂ ಮಾಡಬಹುದು, ಆದರೆ ಅದು ಅತ್ಯಾಚಾರವೇ.

- ಮದುವೆಯಾದ ಹೆಣ್ಣು ಮಗು ಮತ್ತು ಮದುವೆಯಾಗದ ಹೆಣ್ಣು ಮಗುವಿನ ನಡುವೆ ಒಂದು ಅನಗತ್ಯ ಮತ್ತು ಕೃತಕ ಭಿನ್ನತೆಯನ್ನು ಹುಟ್ಟುಹಾಕುವ ಮೂಲಕ ಐಪಿಸಿ ಎಸ್.375ರ ವಿನಾಯಿತಿ 2, ತಾರತಮ್ಯವನ್ನುಂಟು ಮಾಡುತ್ತಿದೆ.

- ಈ ಕೃತಕ ಭಿನ್ನತೆಯು ಅತಾರ್ಕಿಕ, ಜೊತೆಗೆ ತಾರತಮ್ಯವನ್ನು ಎಸಗುವಂತಿದೆ, ಇದು ಹೆಣ್ಣು ಮಗುವಿನ ಅತ್ಯುತ್ತಮ ಹಿತಾಸಕ್ತಿಯಲ್ಲಿ ಇಲ್ಲ: ಮದುವೆಯಾಗದ 15ರಿಂದ 18 ವರ್ಷದವರೆಗಿನ ಹುಡುಗಿಯರು ಲೈಂಗಿಕ ಕ್ರಿಯೆಗೆ ಸಮಂಜಸವಾಗಿ ಒಪ್ಪಿಗೆ ಕೊಡಲಾರರು ಎಂದರೆ, ಅದೇ ರೀತಿಯಾಗಿ ಮದುವೆಯಾದ 15ರಿಂದ 18 ವರ್ಷದವರೆಗಿನ ಹುಡುಗಿಯರು ಕೂಡ ಲೈಂಗಿಕ ಕ್ರಿಯೆಗೆ ಸಮಂಜಸವಾಗಿ ಒಪ್ಪಿಗೆ ಕೊಡಲಾರರು.

- 18 ವರ್ಷದ ಒಳಗಿನ ಎಲ್ಲ ಹುಡುಗಿಯರೂ "ಮಗು" ಸ್ಥಾನಮಾನವನ್ನು ಹೊಂದಿದ್ದಾರೆ ಮತ್ತು ಆ ಸ್ಥಾನಮಾನಕ್ಕೆ ಸಂಬಂಧಿಸಿರುವ ಎಲ್ಲ ಹಕ್ಕುಗಳು ಮತ್ತು ರಕ್ಷಣೆಗಳಿಗೆ ಅರ್ಹರಾಗಿರುತ್ತಾರೆ. ಮದುವೆಯ ಕಾರಣದಿಂದಾಗಿ "ಮಗು ಸ್ಥಾನಮಾನ"ವು ಕಳೆದುಹೋಗುವುದಿಲ್ಲ.

- ಐಪಿಸಿ ಎಸ್.375 ವಿನಾಯಿತಿ 2ರ ಅಡಿಯ ಕೃತಕ ಭಿನ್ನತೆಯು ಸಂವಿಧಾನದ 14, 15(3)ನೇ ಅನುಚ್ಛೇದ ಮತ್ತು 21ನೇ ಅನುಚ್ಛೇದಗಳಿಗೆ ವಿರುದ್ಧವಾಗಿದೆ; ಜೊತೆಗೆ ಮಗುವಿನ ಹಕ್ಕುಗಳ ಒಡಂಬಡಿಕೆ ಮತ್ತು

ಮಹಿಳೆಯರ ವಿರುದ್ಧ ಎಲ್ಲ ವಿಧದ ತಾರತಮ್ಯವನ್ನು ನಿವಾರಿಸುವುದರ ಕುರಿತ ಒಡಂಬಡಿಕೆಯೂ ಸೇರಿದಂತೆ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಒಡಂಬಡಿಕೆಗಳ ಅಡಿಯ ಭಾರತದ ಬದ್ಧತೆಗೆ ವಿರುದ್ಧವಾಗಿದೆ. ಇದು ಹೆಣ್ಣು ಮಗುವಿನ ದೇಹದ ಪೂರ್ಣತೆಗೆ ಮತ್ತು ಆಕೆಯ ಸಂತಾನೋತ್ಪತ್ತಿ ಆಯ್ಕೆಗೆ ವಿರುದ್ಧವಾಗಿದೆ.

ನ್ಯಾಯಾಲಯವು ಐಪಿಸಿ ಎಸ್. 375ರ ವಿನಾಯಿತಿ 2 ಸಾಂವಿಧಾನಿಕವಾಗಿ ಇರುವ ಸಲುವಾಗಿ, ವಿನಾಯಿತಿ 2ಅನ್ನು ಹೀಗೆ ಪರಿಗಣಿಸಬೇಕು ಎಂದು ನ್ಯಾಯಾಲಯವು ನಿರ್ಣಯಿಸಿತು: "ಪುರುಷನೊಬ್ಬ, ತನ್ನದೇ ಹೆಂಡತಿಯ ಜೊತೆ, ಲೈಂಗಿಕ ಸಂಭೋಗ ಅಥವಾ ಲೈಂಗಿಕ ಕ್ರಿಯೆಯ ಕೃತ್ಯಗಳನ್ನು ನಡೆಸಿದಾಗ, ಹೆಂಡತಿಯು 18 ವರ್ಷಕ್ಕಿಂತ ಕೆಳಗಿನವಳು ಅಲ್ಲದಿದ್ದರೆ, ಆಗ ಅದು ಅತ್ಯಾಚಾರವಲ್ಲ. ಆದರೆ ಹೆಂಡತಿಯು 18 ವರ್ಷಕ್ಕಿಂತ ಕೆಳಗಿನವಳಾದರೆ ಅದು ಅತ್ಯಾಚಾರ."

ಸುಪ್ರೀಂ ಕೋರ್ಟ್ ಕರ್ನಾಟಕ ರಾಜ್ಯವು ಅಳವಡಿಸಿಕೊಂಡ ದೃಷ್ಟಿಕೋನವನ್ನು ಅನುಮೋದಿಸಿದೆ. ಕರ್ನಾಟಕ ರಾಜ್ಯ ಶಾಸನಸಭೆಯು ಬಾಲ್ಯ ವಿವಾಹ ನಿಷೇಧ ಕಾಯಿದೆಯಲ್ಲಿ (ಪಿಸಿಎಂಎ) ಹೊಸ ಉಪಬಂಧವನ್ನು ಸೇರಿಸಿದೆ. ಅದೆಂದರೆ – ಯಾವುದೇ ಶಾಸ್ತ್ರೋಕ್ತವಾಗಿ ಮಾಡಿದ ಬಾಲ್ಯ ವಿವಾಹವು ಊರ್ಜಿತವಲ್ಲ. ಪಿಸಿಎಂಎ ಅಡಿಯಲ್ಲಿ ಹೆಣ್ಣು ಮಗುವಿನ ಗಂಡನು ಬಾಲ್ಯ ವಿವಾಹಕ್ಕಾಗಿ ಮತ್ತು ಪೋಕ್ಸೋ ಅಡಿಯಲ್ಲಿ ಮರ್ಮಭೇದಕ ಲೈಂಗಿಕ ಹಲ್ಲೆ ಅಥವಾ ಆಕ್ರಮಣಶೀಲ ಮರ್ಮಭೇದಕ ಲೈಂಗಿಕ ಹಲ್ಲೆಗಾಗಿ ಶಿಕ್ಷಾರ್ಹನಾಗುತ್ತಾನೆ. ಜೊತೆಗೆ ಗಂಡ ಮತ್ತು ಹೆಣ್ಣು ಮಗು ಒಂದೇ ಅಥವಾ ಹಂಚಿಕೊಂಡ ಮನೆಯಲ್ಲಿ ಒಟ್ಟಿಗೇ ಜೀವಿಸುತ್ತಿದ್ದರೆ, ಐಪಿಸಿ ಅಡಿಯಲ್ಲಿ ಅತ್ಯಾಚಾರಕ್ಕಾಗಿ ಶಿಕ್ಷಾರ್ಹನಾಗುತ್ತಾನೆ.



[redacted]

# ಮಹಿಳೆಯರ ವಿರುದ್ಧ ಹಿಂಸೆಗೆ ಸಂಬಂಧಿಸಿದ ಹೈಕೋರ್ಟಿನ ಮಹತ್ವದ ಪ್ರಕರಣಗಳು 2015–2017

## ಬಿಹಾರ್ ಹೈಕೋರ್ಟ್

### ಸುರೇಶ್ ಶರ್ಮಾ & ಇನ್ನೊಬ್ಬರು ವಿರುದ್ಧ ಬಿಹಾರ್ ರಾಜ್ಯ

ವಾಸ್ತವಾಂಶಗಳು

ಪಿ ಎನ್ನುವವರು ಪರಿಶಿಷ್ಟ ಜಾತಿಯ ಮ ಎನ್ನುವವರನ್ನು ಮದುವೆಯಾಗಿದ್ದರು. ಒಂದು ದಿನ ಪಿ ಮತ್ತು ಅವರ ಗೆಳೆಯ ದಿಲೀಪ್ ಕುಮಾರ್ (ಆಪಾದಿತ) ಎನ್ನುವವರ ಮನೆಯನ್ನು ಮೋಟರ್‌ಸೈಕಲ್ಲಿನಲ್ಲಿ ಸುರೇಶ್ ಶರ್ಮಾ (ಎಸ್‌ಎಸ್) ಮತ್ತು ದಿಲೀಪ್ ಕುಮಾರ್ (ಆಪಾದಿತ) ಎನ್ನುವವರ ಮನೆಯನ್ನು ದಾಟಿ ಹೋಗುತ್ತಿದ್ದರು. ಎಸ್‌ಎಸ್ ಪಿಯ ಮೋಟರ್‌ಸೈಕಲ್ಲನ್ನು ಬಲವಂತವಾಗಿ ತಡೆದು ನಿಲ್ಲಿಸಿ, ಅವನ ಹೆಂಡತಿಯ ಜಾತಿಗೆ ಸಂಬಂಧಿಸಿದಂತೆ ನಿಂದಿಸಿದ. ತದನಂತರ ಎಸ್‌ಎಸ್ ತಾನು ಪಿಓಎ ಕಾಯಿದೆಯ ಪರಿಚ್ಛೇದ 3(1)(ಎಸ್) ಅಡಿಯಲ್ಲಿ ಯಾವುದೇ ಅಪರಾಧವನ್ನು ಎಸಗಿಲ್ಲವೆಂದೂ, ಏಕೆಂದರೆ ಪಿ ಪರಿಶಿಷ್ಟ ಜಾತಿಯವನು ಅಲ್ಲ, ಅವನ ಹೆಂಡತಿ ಮಾತ್ರ ಆ ಜಾತಿಯವರು ಹಾಗೂ ಆ ಸಮಯದಲ್ಲಿ ಆಕೆ ಅಲ್ಲಿ ಇರಲಿಲ್ಲ ಎಂದು ಸಮರ್ಥಿಸಿಕೊಂಡ. ಅದರಂತೆ ಎಸ್‌ಎಸ್ ತನ್ನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ವಾದಿಸಿದ.

ಕಂಡುಕೊಂಡ ಅಂಶಗಳು:

- ಆಪಾದಿತನೊಬ್ಬ ಪಿಓಎ ಕಾಯಿದೆಯಡಿಯಲ್ಲಿ ಜಾಮೀನನ್ನು ಕೋರಿಕೊಂಡಾಗ, ನ್ಯಾಯಾಲಯವು ಎಫ್‌ಐಆರ್‌ನಲ್ಲಿ ವರದಿಯಾದ ಘಟನೆಗಳನ್ನು ಪರಿಗಣಿಸಬೇಕು:

  ಎ) ಮೊದಲ ನೋಟಕ್ಕೇ ದೌರ್ಜನ್ಯ ಎಸಗಿದ್ದಾಗಿ ಕಂಡುಬಂದರೆ ತಕ್ಷಣವೇ ಜಾಮೀನನ್ನು ನಿರಾಕರಿಸುವುದು

  ಬಿ) ಮೊದಲ ನೋಟಕ್ಕೆ ದೌರ್ಜನ್ಯ ಎಸಗಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಕಂಡುಬಂದರೆ ಜಾಮೀನಿನ ಅರ್ಜಿಯನ್ನು ಪರಿಗಣಿಸುವುದು. ಇದರರ್ಥ ಇದ್ದಕ್ಕಿದ್ದಂತೆ ಜಾಮೀನಿನ ಅರ್ಜಿಯನ್ನು ಸ್ವೀಕರಿಸುವುದು ಎಂದೇನಲ್ಲ, ಬದಲಿಗೆ ನ್ಯಾಯಾಲಯವು ಸನ್ನಿವೇಶಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ನಡೆಸುವುದು ಮತ್ತು ಜಾಮೀನು ನೀಡಬಹುದೇ ಅಥವಾ ನಿರಾಕರಿಸಬಹುದೇ ಎಂದು ನಿರ್ಧರಿಸುತ್ತದೆ.

- ವ್ಯಕ್ತಿಯೊಬ್ಬ ಇನ್ನೊಬ್ಬ ವ್ಯಕ್ತಿಯನ್ನು ಸಾರ್ವಜನಿಕವಾಗಿ ಜಾತಿಯ ಆಧಾರದ ಮೇಲೆ, ನಿಂದಿಸಿದ್ದರೆ, ಆ ವ್ಯಕ್ತಿಯು ಪಿಓಎ ಕಾಯಿದೆಯ ಎಸ್.3(1)(ಎಸ್) ಅಡಿಯಲ್ಲಿ ಅಪರಾಧ ಎಸಗಿದ ತಪ್ಪಿತಸ್ಥ ಆಗಬಹುದು, ಜಾತಿಯ ಹೆಸರನ್ನು ತೆಗೆದುಕೊಂಡು ನಿಂದಿಸಿದಾಗ ಎಸ್.ಸಿ. ಅಥವಾ ಎಸ್.ಟಿ. ಗೆ ಸೇರಿದ ವ್ಯಕ್ತಿಯು ಅಲ್ಲಿ ಇರದಿದ್ದರೂ ಅವರು ತಪ್ಪಿತಸ್ಥರಾಗುತ್ತಾರೆ. ಪರಿಶಿಷ್ಟ ಜಾತಿ ಅಥವಾ ಬುಡಕಟ್ಟಿನ ಸದಸ್ಯರಾಗಿರುವ ವ್ಯಕ್ತಿಯ ನಿಂದನೆಯು, ನಿಜವಾಗಿ ಹಾಜರು ಇರುವ, ಆದರೆ ದಲಿತರು ಅಲ್ಲದೇ ಇರುವ ಇನ್ನೋರ್ವ ವ್ಯಕ್ತಿಯ ಮೂಲಕ ನಡೆಯಬಹುದು, ಉದಾಹರಣೆಗೆ ದಲಿತ ಮಹಿಳೆಯ ಗಂಡ.

### ನಿಖಿಲ್ ಪ್ರಿಯದರ್ಶಿನಿ ಮತ್ತು ಇನ್ನೊಬ್ಬರು ವಿರುದ್ಧ ಪೊಲೀಸ್ ಮಹಾನಿರ್ದೇಶಕರ ಮೂಲಕ ಬಿಹಾರ್ ರಾಜ್ಯ (30.03.2017)

ವಾಸ್ತವಾಂಶಗಳು

ಎನ್‌ಪಿ ಮತ್ತು ಎ ಗೆಳೆಯರು. ಎನ್‌ಪಿ ನಿಧಾನವಾಗಿ ಎ ಕುರಿತು ಲೈಂಗಿಕ ಮಾತುಗಳನ್ನು ಆಡತೊಡಗಿದ ಮತ್ತು ಲೈಂಗಿಕ ಸಂದೇಶಗಳನ್ನು ಕಳಿಸತೊಡಗಿದ, ಏಕೆಂದರೆ ಅವನು ಅವಳೊಂದಿಗೆ ಲೈಂಗಿಕ ಸಂಬಂಧ ಹೊಂದಲು ಬಯಸಿದ್ದ. ಎನ್‌ಪಿ ವರ್ತನೆಯ ಕುರಿತಾಗಿ ಅವನ ಕುಟುಂಬದವರಲ್ಲಿ ಹೇಳಲು ಎ ಅವನ ಮನೆಗೆ ಹೋದಳು. ಅವಳು ಮನೆಯ ಹೊರಗೆ ನಿಂತಿರುವಾಗ, ಅವನ ಕುಟುಂಬದವರು ಅವಳನ್ನು ನಿಂದಿಸಿದರು. ಅವರು ಅವಳನ್ನು ಕೆಳ ಜಾತಿಯ ಹೆಸರುಗಳಿಂದ ಕರೆದರು ಮತ್ತು 'ಹರಿಜನ' ಪದವನ್ನು ಬಳಸಿದರು ಮತ್ತು ಅವನ ಕುಟುಂಬದವರೆಲ್ಲರೂ ಸೇರಿ ಸಾರ್ವಜನಿಕರ ಎದುರಿನಲ್ಲಿ ಆಕೆಯನ್ನು ಅವಮಾನಿಸಿ, ತೇಜೋಭಂಗ ಮಾಡಿದರು. ಆಕೆಯನ್ನು ಹೀಗೆ ಜಾತಿಯ ಹೆಸರಿನಿಂದ ಸಾರ್ವಜನಿಕರ ಎದುರಿನಲ್ಲಿ ನಿಂದನೆ ಮಾಡಿದ್ದು ಪಿಓಎ ಕಾಯಿದೆಯ ಎಸ್.3(1)(ಆರ್) ಮತ್ತು ಎಸ್.3(1)(ಎಸ್) ಅಡಿಯಲ್ಲಿ ಅಪರಾಧವಾಗುತ್ತದೆ.



[redacted]

ಕಂಡುಕೊಂಡ ಅಂಶಗಳು:

- ಸಂತ್ರಸ್ತರೊಬ್ಬರು ಎಫ್ಐಆರ್ ಸಲ್ಲಿಸಿದಾಗ, ಸಾಮಾನ್ಯವಾದ ನಿಯಮ ಎಂದರೆ ನ್ಯಾಯಾಲಯವು ಅದನ್ನು ಒಪ್ಪಿಕೊಳ್ಳಬೇಕು ಮತ್ತು ವರದಿ ಮಾಡಿದ ಘಟನೆಗಳ ಕುರಿತಾಗಿ ಅಗತ್ಯವಿರುವ ತನಿಖೆ ಮಾಡಲು ಆರಂಭಿಸಬೇಕು.
- ನ್ಯಾಯಾಲಯವು ಕೆಲವು ನಿರ್ದಿಷ್ಟವಾಗಿ ಮತ್ತು ತುಂಬಾ ಅಪರೂಪದ ಸನ್ನಿವೇಶಗಳಲ್ಲಿ ಮಾತ್ರ ಪ್ರಕರಣವನ್ನು ತಳ್ಳಿಹಾಕಬಹುದು ಮತ್ತು ತನಿಖೆ ನಡೆಸಲು ನಿರಾಕರಿಸಬಹುದು. ಆ ಪ್ರಕರಣಗಳು ಈ ಕೆಳಗಿನಂತಿವೆ:

  ಎ) ವರದಿ ಮಾಡಿದ ಘಟನೆಗಳು ಯಾವುದೇ ಅಪರಾಧಗಳನ್ನು ಹೊಂದಿಲ್ಲ ಅಥವಾ ಯಾವುದೇ ರೀತಿಯಲ್ಲಿ ಆಪಾದಿತರು ಅದರಲ್ಲಿ ಭಾಗಿಯಾಗಿಲ್ಲ ಎಂದು ನ್ಯಾಯಾಲಯಕ್ಕೆ ತುಂಬ ಸ್ಪಷ್ಟವಾಗಿ ಎದ್ದು ಕಾಣಬೇಕು;

  ಬಿ) ಆರೋಪವನ್ನು ವರದಿ ಮಾಡುತ್ತಿರುವ ವ್ಯಕ್ತಿಯು ದುರುದ್ದೇಶದಿಂದ ಹಾಗೆ ಮಾಡುತ್ತಿದ್ದಾರೆ, ಅಂದರೆ ಅನಗತ್ಯವಾಗಿ ಅಪರಾಧವೊಂದನ್ನು ವರದಿ ಮಾಡುವುದು ನ್ಯಾಯ ಕೇಳುವ ಅಥವಾ ತಮ್ಮ ಹಕ್ಕುಗಳ ರಕ್ಷಣೆಯನ್ನು ಕೋರುವ ಬದಲಿಗೆ ಆಪಾದಿತರಿಗೆ ತೊಂದರೆ ಉಂಟು ಮಾಡಲು ಎಂದು ನ್ಯಾಯಾಲಯವು ಕಾಣುವಂತಿರಬೇಕು; ಅಥವಾ

  ಸಿ) ವರದಿ ಮಾಡಿದ ಘಟನೆಗಳು ತೀರಾ ಅಸಂಗತ ಮತ್ತು ಸತ್ಯಾಂಶವಾಗಿರುವ ಸಾಧ್ಯತೆ ತೀರಾ ಕಡಿಮೆ ಇರಬೇಕು.

- ಸ್ಥಳವು "ಸಾರ್ವಜನಿಕರ ಎದುರಿನಲ್ಲಿ" ಎಂಬುದು ಸ್ಪಷ್ಟವಿಲ್ಲದಿದ್ದ ಪಕ್ಷದಲ್ಲಿ (ಉದಾಹರಣೆಗೆ, ಮನೆಯ ಅಥವಾ ಕಟ್ಟಡವೊಂದರ ಎದುರಿಗೆ ಘಟನೆಗಳು ನಡೆದಿದ್ದರೆ), ಎಫ್ಐಆರ್ ಅನ್ನು ತಳ್ಳಿ ಹಾಕಲು ಇದನ್ನು ಒಂದು ಮೌಲಿಕ ಕಾರಣವಾಗಿ ನ್ಯಾಯಾಲಯವು ಬಳಸಲಾಗದು. ನ್ಯಾಯಾಲಯವು ಪ್ರಕರಣವನ್ನು ಒಪ್ಪಿಕೊಳ್ಳಬೇಕು ಮತ್ತು ಘಟನೆ ನಡೆದ ಸ್ಥಳವು ಸಾರ್ವಜನಿಕರ ಎದುರಿನಲ್ಲೋ ಅಥವಾ ಅಲ್ಲವೋ ಎಂಬುದನ್ನು ವಿಚಾರಣೆಯಲ್ಲಿ ಕೇಳಲಾಗುವುದು.

**ಮಹಾರಾಷ್ಟ್ರ ಹೈಕೋರ್ಟ್**

**ಜಯಾ ಸಗದೆ ವಿರುದ್ಧ ಮಹಾರಾಷ್ಟ್ರ ರಾಜ್ಯ (04/09/2015)**

- ಮಹಿಳೆಯೊಬ್ಬರು ಕೌಟುಂಬಿಕ ಹಿಂಸೆಯ ಸಂತ್ರಸ್ತೆಯಾಗಿದ್ದಾಗ, ಆಕೆಗೆ ಸೇವೆ ಒದಗಿಸುವವರ (ಎನ್‌ಜಿಒಗಳು, ಸಮಾಲೋಚಕರು ಅಥವಾ ಪೊಲೀಸರು) ಬೆಂಬಲವನ್ನು ಕೋರುವ ಹಕ್ಕು ಇದೆ. ಈ ಸೇವಾ ಒದಗಿಸುವವರು ಆಕೆಗೆ ಲಭ್ಯವಿರುವ ಎಲ್ಲ ಆಯ್ಕೆಗಳ ಕುರಿತು (ದೂರನ್ನು ಸಲ್ಲಿಸುವ ಹಕ್ಕು ಅಥವಾ ಮಧ್ಯಸ್ತಿಕೆಯನ್ನು ಕೋರುವುದೂ ಸೇರಿದಂತೆ) ಮಾಹಿತಿ ನೀಡಬೇಕು. ಎಲ್ಲಕ್ಕಿಂತ ಮುಖ್ಯ ಸಂಗತಿ ಎಂದರೆ ಸೇವೆಯನ್ನು ಒದಗಿಸುವವರು, ಮಹಿಳೆಗೆ ಹೇಗೆ ಮುಂದುವರೆಯಬೇಕು ಎಂದು ಅಂತಿಮ ನಿರ್ಧಾರವನ್ನು ಅವಳೇ ಮಾಡುವ ರೀತಿಯಲ್ಲಿ ಆಯ್ಕೆಯನ್ನು ನೀಡುವುದನ್ನು ಖಾತ್ರಿಪಡಿಸಬೇಕು.
- ಸಮಾಲೋಚನೆ ಅಥವಾ ಮಧ್ಯಸ್ತಿಕೆಯನ್ನು ಹಲವಾರು ಆಯ್ಕೆಗಳಲ್ಲಿ ಒಂದು ಎಂಬಂತೆ ಪ್ರಸ್ತುತಪಡಿಸಬೇಕು ಮತ್ತು ಕೌಟುಂಬಿಕ ಹಿಂಸೆಯ ಸಂತ್ರಸ್ತರಿಗೆ ದೂರನ್ನು ಇತ್ಯರ್ಥಪಡಿಸಿಕೊಳ್ಳಲು ಒಪ್ಪುವಂತೆ ಒತ್ತಾಯಪಡಿಸತಕ್ಕದ್ದಲ್ಲ. ಸಂತ್ರಸ್ತೆಯು ಸ್ವತಃ ತಾನಾಗಿಯೇ ಮತ್ತು ಪೂರ್ಣ ಅರಿವಿನಿಂದ ಒಪ್ಪಿಗೆಯನ್ನು ನೀಡಿದಾಗ ಮಾತ್ರವೇ ಕೈಗೆತ್ತಿಕೊಳ್ಳಬಹುದು.
- ಸೇವೆ ಒದಗಿಸುವವರು ತಮ್ಮ ಕಚೇರಿಗಳಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಎದ್ದು ಕಾಣುವಂತೆ ಪ್ರದರ್ಶಿಸುವ ಬಾಧ್ಯತೆಯನ್ನು ಹೊಂದಿದ್ದಾರೆ: (1) ಕೌಟುಂಬಿಕ ಹಿಂಸೆಯ ಸಂತ್ರಸ್ತೆ ತಮ್ಮ ಮುಂದಿನ ಹೆಜ್ಜೆಗಳನ್ನು ಆಯ್ಕೆ ಮಾಡಿಕೊಳ್ಳಲು ಸ್ವತಂತ್ರರಿದ್ದಾರೆ ಮತ್ತು (2) ಅವರ ಒಪ್ಪಿಗೆಯಿಂದ ಮಾತ್ರವೇ ಮಧ್ಯಸ್ತಿಕೆಯನ್ನು ಪ್ರಯತ್ನಿಸಲಾಗುವುದು.
- ಮಧ್ಯಸ್ತಿಕೆ ಮತ್ತು ಸಮಾಲೋಚನೆಯು ಗಂಭೀರ ಹಿಂಸೆಯ ಪ್ರಕರಣಗಳಿಗೆ ಸಮರ್ಪಕವಾದ ಆಯ್ಕೆಗಳಲ್ಲ. ಬದಲಾಗಿ ಸೇವಾ ಒದಗಿಸುವವರು ಸಂಬಂಧಿತ ಪೊಲೀಸ್ ಅಥವಾ ನ್ಯಾಯಾಂಗ ಅಧಿಕಾರಿಯೊಂದಿಗೆ "ಕೌಟುಂಬಿಕ ಘಟನೆ ವರದಿ" (ಡಿಐಆರ್)ಯನ್ನು ದಾಖಲಿಸಿಕೊಳ್ಳಬೇಕು.

### 4. ಅಕ್ಷಯ್ ಮನೋಜ್ ಜೈಸಿಂಘಾನಿ ವಿರುದ್ಧ ಮಹಾರಾಷ್ಟ್ರ ರಾಜ್ಯ (09/01/2017)

**ವಾಸ್ತವಾಂಶಗಳು**

ಈ ಪ್ರಕರಣದಲ್ಲಿ ಸಂತ್ರಸ್ತೆಯು ಒಬ್ಬ ಹುಡುಗಿಯಾಗಿದ್ದು, ಆಕೆಯು ಆಪಾದಿತನಾದ ತನ್ನದೇ ವಯಸ್ಸಿನ ಹುಡುಗನೊಂದಿಗೆ ಸ್ನೇಹದಿಂದಿದ್ದಳು. ಆತ ಅವಳನ್ನು ಒಂದು ಪಾರ್ಟಿಗೆ ಆಹ್ವಾನಿಸಿದ, ಆಕೆಯು ಅವನಿಗೆ ಉಡುಗೊರೆಗಳನ್ನು ಕೂಡ ತಂದಿದ್ದಳು. ನಂತರ ಆತ ಆಕೆಯನ್ನು ಬೇರೆ ಹೋಟೆಲಿಗೆ ಕರೆದುಕೊಂಡು ಹೋದ. ಆತ ಆಕೆಯನ್ನು ಮದುವೆಯಾಗುವುದಾಗಿ ಆಶ್ವಾಸನೆ ನೀಡಿ, ತನ್ನೊಂದಿಗೆ ಲೈಂಗಿಕ ಸಂಪರ್ಕ ಬೆಳೆಸುವಂತೆ ಮನವೊಲಿಸಿದ. ಸಂತ್ರಸ್ತೆಯು ಅವನ ಪೋಷಕರಿಗೆ ಈ ವಿಚಾರ ತಿಳಿಸಿದಳು, ಆದರೆ ಅವರು ಏನೂ ಉತ್ತರಿಸಲಿಲ್ಲ. ಆಕೆ ಗರ್ಭಿಣಿಯಾದಳು.

**ಕಂಡುಕೊಂಡ ಅಂಶಗಳು:**

- ಒಬ್ಬ ವ್ಯಕ್ತಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸಲು ಮಹಿಳೆಯು ಒಪ್ಪಿಗೆ ಕೊಟ್ಟಿರುವುದು, ಆತ ಮದುವೆಯಾಗುವ ಆಶ್ವಾಸನೆ ಕೊಟ್ಟಿದ್ದರಿಂದ ಎನ್ನುವುದನ್ನು ನಿರೂಪಿಸಿದರೂ, ಅದು ಎಲ್ಲ ಪ್ರಕರಣಗಳಲ್ಲಿಯೂ ಅತ್ಯಾಚಾರ ಆಗುವುದಿಲ್ಲ. ಸಂತ್ರಸ್ತೆಯು ವಯಸ್ಕಳಾಗಿದ್ದು, ಉತ್ತಮವಾಗಿ ಸುಶಿಕ್ಷಿತಳಾಗಿದ್ದರೆ, ಆಗ ಒಬ್ಬ ವ್ಯಕ್ತಿಯೊಂದಿಗೆ ಲೈಂಗಿಕ ಸಂಬಂಧಗಳನ್ನು ಬೆಳೆಸುವುದರಿಂದ ಆಗುವ ಪರಿಣಾಮಗಳನ್ನು ಸಂತ್ರಸ್ತೆಯು ಅರ್ಥ ಮಾಡಿಕೊಂಡಿದ್ದಾಳೆ ಎಂದು ಪರಿಗಣಿಸಲಾಗುತ್ತದೆ.
- ಇಬ್ಬರು ವ್ಯಕ್ತಿಗಳು ಒಂದು ಸಮಯದಲ್ಲಿ ಪ್ರೀತಿಸುತ್ತಿದ್ದು, ನಿಶ್ಚಿತಾರ್ಥ ಆಗಿದ್ದರೂ, ಕೆಲವೊಮ್ಮೆ ಸಂಬಂಧಗಳು ಮುರಿದು ಬೀಳುತ್ತವೆ ಮತ್ತು ಜೋಡಿಗಳು ಬೇರ್ಪಡುತ್ತವೆ ಎನ್ನುವ ವಾಸ್ತವವೂ ಇದೆ. ಹೀಗೆ ಆದಾಗ, ಮಹಿಳೆಯು ಇದ್ದಕ್ಕಿಂತೆ ಮದುವೆಯ ಸುಳ್ಳು ಆಶ್ವಾಸನೆಯ ಕಾರಣದಿಂದಾಗಿ ತಾನು ಅವನೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ಭಾಗಿಯಾಗಿದ್ದೆ ಎಂಬ ಆರೋಪವನ್ನು ತನ್ನಿಂದತಾನೆ ಮಾಡುವಂತಿಲ್ಲ. ಪುರುಷನೊಬ್ಬ ಮಹಿಳೆಯೊಂದಿಗೆ ಲೈಂಗಿಕ ಕ್ರಿಯೆಯನ್ನು ನಡೆಸುವುದು ಆಕೆಯನ್ನು ಮದುವೆಯಾಗಲೇ ಬೇಕೆಂಬ ಕಡ್ಡಾಯವನ್ನು ಆತನ ಮೇಲೆ ಹೇರುವುದಿಲ್ಲ ಎಂಬುದನ್ನು ಮಹಿಳೆಯು ಮನಗಾಣುವ ಅಗತ್ಯವಿದೆ.
- ನ್ಯಾಯಾಲಯವು ಮದುವೆಯ ಸುಳ್ಳು ಆಶ್ವಾಸನೆಯಿಂದ ಅತ್ಯಾಚಾರವಾಯಿತು ಎಂಬ ವಾದವನ್ನು, ಪುರುಷ ಸಂತ್ರಸ್ತೆಗೆ ಅವಳನ್ನು ಖಂಡಿತವಾಗಿಯೂ ಮದುವೆಯಾಗುತ್ತೇನೆ ಎಂದು ಆಶ್ವಾಸನೆ ನೀಡಿದ್ದು ಅವನೊಂದಿಗೆ ಲೈಂಗಿಕ ಕ್ರಿಯೆ ನಡೆಸಲು ಅವಳನ್ನು ಪಡೆಯುವ ಒಂದು ಉದ್ದೇಶವಾಗಿ ಎಂದು ಸಾಬೀತಾದರೆ ಮಾತ್ರ ಸ್ವೀಕರಿಸುತ್ತದೆ.

### 5. ರೂಪೇಶ್ ಸಾಮಂತ್ ವಿರುದ್ಧ ಗೋವಾ ರಾಜ್ಯ – ಗೋವಾದಲ್ಲಿರುವ ಬಾಂಬೆ ಹೈಕೋರ್ಟ್ (30.10.2015)

**ವಾಸ್ತವಾಂಶಗಳು**

ಪುರುಷನೊಬ್ಬ ತನ್ನ ಮೂವರು ಮಹಿಳಾ ಉದ್ಯೋಗಿಗಳಿಗೆ ನಿರಂತರವಾಗಿ ಕಿರುಕುಳ ಕೊಡುತ್ತಿದ್ದ ಎಂದು ಆರೋಪಿಸಲಾಗಿತ್ತು. ಆತನ ವರ್ತನೆಯು ದೈಹಿಕವಾಗಿ ಹಿಂಸಾತ್ಮಕವಾಗಿ ಅಥವಾ ಆಕ್ರಮಣಕಾರಿಯಾಗಿ ಇರಲಿಲ್ಲ, ಆದರೆ ಆ ಮೂವರು ಮಹಿಳೆಯರು ನೋಡಲು ಹೇಗೆ ಕಾಣುತ್ತಾರೆ, ಅವರು ಹಾಕಿದ ಬಟ್ಟೆ ಇವುಗಳ ಕುರಿತು ಅನುಚಿತವಾದ ಮಾತುಗಳನ್ನಾಡುವುದು, ಅವರ ಒಪ್ಪಿಗೆ ಇಲ್ಲದೇ ಅವರನ್ನು ಮುಟ್ಟುವುದು, ಅವರಿಗೆ ಲೈಂಗಿಕ ಸಂದೇಶಗಳನ್ನು ಕಳಿಸುವುದು ಮತ್ತು ಬಲವಂತದ ಚುಂಬನ ನೀಡುವುದು, ಇವುಗಳನ್ನು ಒಳಗೊಂಡಿತ್ತು.

**ಕಂಡುಕೊಂಡ ಅಂಶಗಳು:**

- ಒಬ್ಬ ಪುರುಷನ ವರ್ತನೆಯು ಯಾವುದೇ ಹಿಂಸಾತ್ಮಕ ದಾಳಿ ಅಥವಾ ದೈಹಿಕ ಆಕ್ರಮಣವಿಲ್ಲದಿದ್ದರೂ, ಆತ ಆರೋಪಿಯಾಗಿರಬಹುದು ಮತ್ತು ಆತನ ಮೇಲೆ ತಪ್ಪು ಹೊರೆಸಬಹುದು. ಹಲ್ಲೆಯ ಆಪಾದನೆಯು ಅದು ಉಂಟುಮಾಡಿರುವ ಮಾನಸಿಕ ಹಾನಿಯನ್ನೇ ಸಂಪೂರ್ಣವಾಗಿ ಅವಲಂಬಿರಸಿರಬಹುದು. ಉದಾಹರಣೆಗೆ, ನಿರಂತರವಾಗಿ ಅನುಚಿತ ಮಾತುಗಳನ್ನು ಆಡುವುದು ಮತ್ತು ಲೈಂಗಿಕ ಸಂದೇಶಗಳನ್ನು ಕಳಿಸುವುದು, ಇಂತಹ ಕ್ರಿಯೆಗಳು ಸತತವಾಗಿ ಮುಂದುವರೆದಲ್ಲಿ, ಅವನ್ನು ಹಲ್ಲೆ ಅಥವಾ ಕಿರುಕುಳ ಎಂದೇ ಪರಿಗಣಿಸಲಾಗುವುದು.
- ಈ ಬಗೆಯ ಲೈಂಗಿಕ ಕಿರುಕುಳದಂತಹ ಪ್ರಕರಣಗಳಲ್ಲಿ, ಮಹಿಳೆಯರು ಅವರ ಹೆಸರು ಅಥವಾ ಗೌರವವನ್ನು ಅನ್ಯಾಯಯುತವಾಗಿ ಪ್ರಶ್ನಿಸಿದಂತೆ ಎಂದು ಭಾವಿಸಬಹುದು ಮತ್ತು ಅದರಿಂದಾಗಿ ಅವರು ಎಫ್ಐಆರ್ ದಾಖಲಿಸುವುದಕ್ಕೆ ಸಂಬಂಧಿಸಿ ಹಿಂಜರಿಯುವಂತೆ ಮಾಡಬಹುದು ಎಂಬುದನ್ನು ನ್ಯಾಯಾಲಯವು ಅರ್ಥಮಾಡಿಕೊಳ್ಳುತ್ತದೆ.



[redacted]

ಈ ಪರಿಗಣನೆಗಳನ್ನು ಆಧರಿಸಿದ ಯಾವುದೇ ವಿಳಂಬವನ್ನು ನ್ಯಾಯಾಲಯವು ವಿಳಂಬದ ಸಮರ್ಥನೀಯ ಕಾರಣ ಎಂದು ಪರಿಗಣಿಸುತ್ತದೆ ಮತ್ತು ಇದನ್ನು ನ್ಯಾಯಾಲಯ ಅಥವಾ ಪೊಲೀಸರು ಎಫ್‌ಐಆರ್ ದಾಖಲಿಸಿಕೊಳ್ಳುವುದಕ್ಕೆ ಅಥವಾ ದೂರಿನ ಕುರಿತು ತನಿಖೆ ನಡೆಸುವುದಕ್ಕೆ ನಿರಾಕರಿಸಲು ಕಾರಣವಾಗಿ ಬಳಸಿಕೊಳ್ಳುವಂತಿಲ್ಲ.

**ತೆಲಂಗಾಣ ಹೈಕೋರ್ಟ್**

**6.3 ಬೋಡ ರಾಕೇಶ ನಾಯಿಕ್ ವಿರುದ್ಧ ತೆಲಂಗಾಣ ರಾಜ್ಯ (21/12/2016)**

- ದೌರ್ಜನ್ಯಗಳ ತಡೆ ಕಾಯಿದೆ (ಪಿಒಎ ಕಾಯಿದೆ) ಅಡಿಯಲ್ಲಿ ಬರುವ ದೌರ್ಜನ್ಯಗಳನ್ನು ಒಳಗೊಂಡ ಪ್ರಕರಣಗಳ ವಿಚಾರದಲ್ಲಿ, ತನಿಖೆಯ ಹಂತವನ್ನು ಸಾಮಾನ್ಯ ನ್ಯಾಯಾಲಯ ಮತ್ತು ವಿಶೇಷ ನ್ಯಾಯಾಲಯಗಳು, ಎರಡೂ ನಡೆಸಬಹುದಾಗಿದೆ.
- ಆದಾಗ್ಯೂ, ಎಲ್ಲ ದೌರ್ಜನ್ಯ ಪ್ರಕರಣಗಳ ವಿಚಾರಣೆಗಳನ್ನು ವಿಶೇಷ ನ್ಯಾಯಾಲಯಗಳಿಂದ ನಡೆಸಬೇಕು.

**ಉತ್ತರ ಪ್ರದೇಶ ಹೈಕೋರ್ಟ್**

**7. ಸುಶಿಲ್ ವಿರುದ್ಧ ಉತ್ತರ ಪ್ರದೇಶ ರಾಜ್ಯ (13/05/2016)**

**ವಾಸ್ತವಾಂಶಗಳು:**

15 ವರ್ಷದ ಹುಡುಗಿಯೊಬ್ಬಳು ತನ್ನ ತಾಯಿಯೊಂದಿಗೆ ಹುಲ್ಲು ಕೊಯ್ಯುತ್ತ ಗದ್ದೆಯಲ್ಲಿದ್ದಳು. ಆಚೆ ಪಕ್ಕದಲ್ಲಿ ಇದ್ದ ಮನೆಯಿಂದ ಯಾರೋ ಕರೆದರೆಂದು ತಾಯಿಯು ತನ್ನ ಮಗಳನ್ನು ಗದ್ದೆಯಲ್ಲಿ ಒಬ್ಬಳನ್ನೇ ಬಿಟ್ಟು ಹೋದಳು. ಅಲ್ಲಿಗೆ ಬಂದ ಪುರುಷನೊಬ್ಬ ಹುಡುಗಿ ಒಬ್ಬಳೇ ಇದ್ದುದ್ದನ್ನು ಕಂಡು, ಅತ್ಯಾಚಾರ ಎಸಗಿದ. ಹುಡುಗಿಯನ್ನು ಚೂರಿಯಿಂದ ಬೆದರಿಸಿ, ಆತ ತನ್ನೊಂದಿಗೆ ಸಮೀಪವಿರುವ ರೈಲ್ವೆ ನಿಲ್ದಾಣಕ್ಕೆ ಬರುವಂತೆ ಒತ್ತಾಯಿಸಿದ, ಅಲ್ಲಿ ಇನ್ನೂ ಇಬ್ಬರು ಗಂಡಸರು ಆಕೆಯ ಮೇಲೆ ಅತ್ಯಾಚಾರ ಮಾಡಿದರು. ಮೂವರು ಗಂಡಸರಿಗೆ ಅತ್ಯಾಚಾರದ ಅಪರಾಧವನ್ನು ಹೊರಿಸಲಾಯಿತು, ಆದರೆ ಅವರು ಆ ಹುಡುಗಿ "ದೇಹ ಮಾರಿಕೊಳ್ಳುವವಳು", ಆಕೆ ತಮ್ಮ ಮೇಲೆ ಸುಳ್ಳು ಆರೋಪ ಹೊರಿಸುತ್ತಿದ್ದಾಳೆ ಎಂದು ಎಂದು ವಾದಿಸಿದರು.

**ಕಂಡುಕೊಂಡ ಅಂಶಗಳು:**

- ಪುರುಷನೊಬ್ಬನ ವಿರುದ್ಧ ಸಂತ್ರಸ್ತೆಯೊಬ್ಬಳ ಸಾಕ್ಷ್ಯ ಮಾತ್ರವೇ ಇದ್ದರೂ, ಸಂತ್ರಸ್ತೆಯ ಹೇಳಿಕೆಯು ವಿಶ್ವಾಸಾರ್ಹವಾಗಿದ್ದರೆ, ಆತ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ ಆರೋಪಿ ಎಂದು ಕಾಣಬಹುದು.
- ಅತ್ಯಾಚಾರವಾಗಿದೆ ಎಂದು ವರದಿ ಮಾಡುವ ಮಹಿಳೆಯರು ಸಾಮಾಜಿಕ ಕಳಂಕದ ಕಾರಣದಿಂದಾಗಿ ತುಂಬ ದುರ್ಬಲ ಸ್ಥಿತಿಯಲ್ಲಿರುತ್ತಾರೆ, ಹೀಗಾಗಿ ಅನೇಕ ಮಹಿಳೆಯರು ಅತ್ಯಾಚಾರದ ಸುಳ್ಳು ಆರೋಪವನ್ನು ಮಾಡುವುದು ಅಸಂಭವನೀಯ ಎಂದು ನ್ಯಾಯಾಲಯವು ಅರ್ಥ ಮಾಡಿಕೊಳ್ಳುತ್ತದೆ.
- ಎಲ್ಲ ಮಹಿಳೆಯರು, ವೇಶ್ಯೆಯರೂ ಸೇರಿದಂತೆ, ಲೈಂಗಿಕ ಕ್ರಿಯೆಗೆ ನಿರಾಕರಿಸುವ ಹಕ್ಕು ಮತ್ತು ಗೌರವ ಹಾಗೂ ಘನತೆಯ ಹಕ್ಕೂ ಸೇರಿದಂತೆ, ಎಲ್ಲ ರೀತಿಯ ಮೂಲಭೂತ ಹಕ್ಕುಗಳನ್ನು ಹೊಂದಿದ್ದಾರೆ.
- ಅತ್ಯಾಚಾರದ ಮಹಿಳಾ ಸಂತ್ರಸ್ತರ ಸಾಕ್ಷ್ಯಗಳನ್ನು, ಅವರ ಸ್ಥಾನಮಾನ ಅಥವಾ ಸ್ಥಿತಿಗತಿ ಏನೇ ಇದ್ದರೂ, ವಿಶ್ವಾಸಾರ್ಹ ಎನ್ನಿಸಿದರೆ ನಂಬಬೇಕು.
- ಪುರುಷನೊಬ್ಬ ಆಯುಧ ಅಂದರೆ ಚಾಕು, ಚೂರಿ ತೋರಿಸಿ ಬೆದರಿಸಿದ ಎಂದು ತನ್ನೊಂದಿಗೆ ಲೈಂಗಿಕ ಕ್ರಿಯೆ ನಡೆಸಲು ಮಹಿಳೆ ಆಸ್ಪದ ಕೊಟ್ಟರೆ, ಅದನ್ನು ಮೌಲಿಕ ಒಪ್ಪಿಗೆ ಎಂದು ಹೇಳಲಾಗದು.

**ಜಾರ್ಖಂಡ್ ಹೈಕೋರ್ಟ್**

**8. ಸುನಿತಾ ಕುಮಾರಿ ವಿರುದ್ಧ ಜಾರ್ಖಂಡ್ ಮತ್ತು ಇತರರು (15/10/2017)**

**ವಾಸ್ತವಾಂಶಗಳು:**

ಸುನಿತಾ, 15 ವರ್ಷದ ಹುಡುಗಿಯಾಗಿದ್ದು, ಪುರುಷನೊಬ್ಬನಿಂದ ಅತ್ಯಾಚಾರಕ್ಕೊಳಗಾಗಿ, ಬಸಿರಿಯಾದಳು. ಅವಳು 23 ವಾರಗಳ ಬಸಿರಿಯಾಗಿದ್ದಾಗ, ಬಸಿರನ್ನು ಹೊರತೆಗೆಸಲು ಒಪ್ಪಿಗೆಯನ್ನು ಕೋರಿದಳು.

ಕಂಡುಕೊಂಡ ಅಂಶಗಳು:

- ಅತ್ಯಾಚಾರಕ್ಕೆ ಒಳಗಾದ 18 ವರ್ಷಗಳ ಕೆಳಗಿನ ಹುಡುಗಿಯರು ತುಂಬ ಗಂಭೀರವಾದ ಆಘಾತಕ್ಕೆ ಒಳಗಾಗಿರುತ್ತಾರೆ. ಅವರು ಅತ್ಯಾಚಾರದ ಫಲವಾಗಿ ಬಸಿರಿಯಾದರೆ, ಮಗುವಿಗೆ ಜನ್ಮ ನೀಡುವುದು ಆಕೆಯ ಕಳಂಕದ ಹಾಗೂ ಆಘಾತದ ಭಾವನೆಗಳನ್ನು ಇನ್ನಷ್ಟು ತೀವ್ರವಾಗಿ ಹೆಚ್ಚಿಸಬಹುದು.

- ನ್ಯಾಯಾಲಯವು ಮಹಿಳೆಗೆ ಗರ್ಭಪಾತ ಮಾಡಿಸಿಕೊಳ್ಳಲು ಒಪ್ಪಿಗೆ ನೀಡುವುದೇ ಎಂಬುದನ್ನು ಪರಿಶೀಲಿಸುವಾಗ, ಮಗುವಿಗೆ ಜನ್ಮ ನೀಡುವುದು ಆ ಮಹಿಳೆಗೆ ಉಂಟುಮಾಡಬಹುದಾದ ಹಾನಿಯ ಅಪಾಯವನ್ನು ಕೂಡ ಪರಿಗಣಿಸಬೇಕು. ಈ ಪ್ರಕರಣದಲ್ಲಿ, "ಅಂತಹ ಬಸಿರಿನಿಂದ ಉಂಟಾಗಬಹುದಾದ ಕ್ಷೋಭೆ"ಯನ್ನು "ಗರ್ಭಿಣಿ ಹೆಂಗಸಿನ ಮಾನಸಿಕ ಆರೋಗ್ಯಕ್ಕೆ ಉಂಟುಮಾಡುವ ತೀವ್ರ ಹಾನಿ" ಎಂದು ನೋಡಬೇಕು.

- ಸಾಮಾನ್ಯವಾಗಿ 20 ವಾರಕ್ಕೂ ಹೆಚ್ಚು ಸಮಯವಾಗಿರುವ ಗರ್ಭಿಣಿಗೆ ಗರ್ಭಪಾತ ಮಾಡಿಸಿಕೊಳ್ಳಲು ನ್ಯಾಯಾಲಯವು ಒಪ್ಪಿಗೆ ನೀಡುವುದಿಲ್ಲ, ಆದರೆ ಕೆಲವು ಪ್ರಕರಣಗಳಲ್ಲಿ (ಉದಾಹರಣೆಗೆ ಹುಡುಗಿಯು ಅಪ್ರಾಪ್ತಳಾಗಿದ್ದು, ಆಕೆಯು ತೀವ್ರವಾದ ಮಾನಸಿಕ ಕ್ಷೋಭೆಗೆ ತುತ್ತಾಗಿದ್ದರೆ), ಒಪ್ಪಿಗೆಯನ್ನು ನೀಡಬಹುದು. ಎಲ್ಲಕ್ಕಿಂತ ಹೆಚ್ಚು, ಈ ಪ್ರಕರಣಗಳಲ್ಲಿ, ಸರ್ಕಾರವು ವೈದ್ಯಕೀಯ ಖರ್ಚು, ಆಕೆ ಮತ್ತು ಆಕೆಯ ಪೋಷಕರ ಆಹಾರ ಮತ್ತು ವಸತಿಯ ಖರ್ಚು ಸೇರಿದಂತೆ ಸೇರಿದಂತೆ ಹುಡುಗಿಯ ಎಲ್ಲ ಖರ್ಚುಗಳನ್ನು ಪಾವತಿಸುವಂತೆ ಆದೇಶ ನೀಡಬಹುದು.

[redacted]

# ವಿಭಾಗ 2

## ಸಾಧನಗಳು ಮತ್ತು ತಪಶೀಲು ಪಟ್ಟಿ

[redacted]

## ಮಹಿಳೆ ಅಥವಾ ಹುಡುಗಿಯ ಮೇಲೆ ನಡೆದ ಹಿಂಸೆಯ ಹೇಳಿಕೆ ಕೊಡುವಾಗ ನೀಡಬೇಕಾದ ಮಾಹಿತಿಗಳ ತಪಶೀಲು ಪಟ್ಟಿ/ಚೆಕ್‌ಲಿಸ್ಟ್

ನೀವು ಪೊಲೀಸ್ ಠಾಣೆಗೆ ಹಿಂಸೆಯ ಸಂತ್ರಸ್ತರ ಜೊತೆ ಅಪರಾಧದ ಹೇಳಿಕೆ ನೀಡಲು ಹೋಗುತ್ತಿದ್ದರೆ, ನಿಮಗೆ ಸಹಾಯವಾಗಲು ಈ ಪಟ್ಟಿ/ ಚೆಕ್‌ಲಿಸ್ಟ್‌ಅನ್ನು ಬಳಸಿಕೊಳ್ಳಿ, ಪೊಲೀಸ್ ಅಧಿಕಾರಿಯು ಈ ಕೆಳಗಿನ ಮಾಹಿತಿಯನ್ನು ದಾಖಲಿಸಿಕೊಳ್ಳುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.

- ಹೇಳಿಕೆ ನೀಡುವ ವ್ಯಕ್ತಿಯ ಹೆಸರು, ವಿಳಾಸ ಮತ್ತು ವಯಸ್ಸು, ಹೇಳಿಕೆ ಕೊಡುತ್ತಿರುವ ವ್ಯಕ್ತಿ ಸಂತ್ರಸ್ತೆಯೋ, ಮೂರನೇ ವ್ಯಕ್ತಿಯೋ ಅಥವಾ ಸಾಕ್ಷಿಯೋ ಎಂಬುದನ್ನು ತಿಳಿಸಿ.
- ಸಂತ್ರಸ್ತೆಯ ಸ್ಥಳ, ಗುರುತು ಮತ್ತು/ಅಥವಾ ವಿವರಣೆ (ಸಂತ್ರಸ್ತೆಯು ಉಪಸ್ಥಿತಿ ಇಲ್ಲದಿದ್ದರೆ) .
- ಆರೋಪಿಯು ನೋಡಲು ಹೇಗಿದ್ದಾರೆ ಎಂಬ ವಿವರಗಳು: ಕೂದಲಿನ ಬಣ್ಣ, ಎತ್ತರ, ಬಟ್ಟೆ, ಏನಾದರೂ ವಿಭಿನ್ನ ಲಕ್ಷಣಗಳು. ಪೊಲೀಸ್ ಅಥವಾ ಸೇನಾ ವ್ಯಕ್ತಿಯೇ? ಸಾರ್ವಜನಿಕ ವ್ಯಕ್ತಿಯೇ?
- ಸಂತ್ರಸ್ತೆ ಅಥವಾ ಸಾಕ್ಷಿಗೆ ಆರೋಪಿಯ(ಗಳ) ಹೆಸರು ಮತ್ತು ವಿಳಾಸ ಗೊತ್ತಿದ್ದರೆ. ಈ ಹಿಂದೆ ಹಿಂಸೆ ಅಥವಾ ಲೈಂಗಿಕ ಅಪರಾಧಗಳನ್ನು ಎಸಗಿದ ದಾಖಲೆ ಇದೆಯೇ?
- ಘಟನೆಯ ಸ್ಥಳ, ಸಮಯ ಮತ್ತು ದಿನಾಂಕದ ವಿವರಗಳು (ಸಾಧ್ಯವಿದ್ದಷ್ಟು ನಿರ್ದಿಷ್ಟವಾಗಿರಲಿ).
- ಘಟನೆಯ ಯಾವುದಾದರೂ ಸಾಕ್ಷಿಗಳ ಹೆಸರು ಮತ್ತು ವಿವರಗಳು (ಗೊತ್ತಿದ್ದರೆ).
- ಐಪಿಸಿ/ಪಿಒಎ/ಎಸ್‌ಎಚ್‌ಎ ಕಾನೂನುಗಳ ಸಂಬಂಧಿತ ವಿಭಾಗಗಳು: ಸಂಬಂಧಿತ ಎಲ್ಲ ಕಾನೂನುಗಳ ಎಲ್ಲ ವಿಭಾಗಗಳನ್ನು ಒಳಗೊಳ್ಳಿ.
- ಘಟನೆಯ ಲಕ್ಷಣದ ಪ್ರಪ್ರಥಮ ಮಾಹಿತಿ – ನಿಮಗೆ ಗೊತ್ತಿದ್ದಷ್ಟು ಮಟ್ಟಿಗೆ, ಘಟನೆಯ ವಿವರಗಳನ್ನು ಅನುಕ್ರಮವಾದ ರೀತಿಯಲ್ಲಿ ವಿವರಿಸಲು ಪ್ರಯತ್ನಿಸಿ, ಸಂತ್ರಸ್ತೆಯು ಮೊದಲು ಆರೋಪಿಯ(ಗಳ) ಸಂಪರ್ಕಕ್ಕೆ ಬಂದಾಗ ಎಲ್ಲಿದ್ದರು, ಆರೋಪಿಯು(ಗಳು) ಮಾಡಿದ ಸನ್ನೆಗಳು/ಮಾತನಾಡಿದ ಪದಗಳು, ನಡೆದ ಘಟನೆಗಳು, ಮಾಡಿದ ಬಲಪ್ರಯೋಗದ ಬೆದರಿಕೆ/ಬಳಸಿದ ಬಲಪ್ರಯೋಗ/ಬಳಸಿದ ಶಸ್ತ್ರಗಳು, ನಡೆಸಿದ ಲೈಂಗಿಕ ಕ್ರಿಯೆಗಳು, ಭಾಗಿಯಾದ ಇನ್ನಿತರ ಆರೋಪಿಗಳು.
- ಘಟನೆಯು ಹೇಗೆ ಕೊನೆಗೊಂಡಿತು ಎಂಬ ವಿವರಣೆ. ಸಂತ್ರಸ್ತೆಯು ಘಟನೆಯ ನಂತರ ತಕ್ಷಣವೇ ಏನು ಮಾಡಿದರು? ಘಟನೆಯ ನಂತರ ಸಂತ್ರಸ್ತೆಯನ್ನು ಯಾರು ನೋಡಿದರು? ಘಟನೆಯ ನಂತರ ಸಂತ್ರಸ್ತೆಯು ಮಾತನಾಡಿದ ಮೊದಲ ವ್ಯಕ್ತಿ ಯಾರು?
- ಸಂತ್ರಸ್ತೆಗೆ ಆದ ಗಾಯಗಳ ವಿವರಗಳು (ಹೊರಗಿನ ಮತ್ತು ಒಳಗಿನ ಗಾಯ) ಮತ್ತು ವೈದ್ಯಕೀಯ ಸಹಾಯವನ್ನು ಕೊಡಲಾಗಿದೆಯೇ/ಕೊಡುವ ಅಗತ್ಯವಿದೆಯೇ [ಎಫ್‌ಐಆರ್ ದಾಖಲಿಸಿದ ತಕ್ಷಣದಲ್ಲಿ ಪೊಲೀಸ್ ಅಧಿಕಾರಿಯು ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಕರೆದುಕೊಂಡು ಹೋಗಬೇಕು].
- ಘಟನೆಯು ನಡೆದ ಸಂದರ್ಭದಲ್ಲಿ ಸಂತ್ರಸ್ತೆಯು ಧರಿಸಿದ ಬಟ್ಟೆಯ ವಿವರಗಳು; ಬಟ್ಟೆಗೆ ಆಗಿರುವ ಹಾನಿ (ಉದಾ: ಮುದುಡಿದೆ ಅಥವಾ ಹರಿದಿದೆ ಅಥವಾ ಮಣ್ಣಾಗಿದೆ); ಬಟ್ಟೆಯನ್ನು ಏನು ಮಾಡಿದರು?
- ಆರೋಪಿಯು(ಗಳು) ಸಂತ್ರಸ್ತೆಯ ವೈಯಕ್ತಿಕ ವಸ್ತುಗಳನ್ನು ಏನಾದರೂ ತೆಗೆದುಕೊಂಡಿದ್ದರೆ ಅದರ ವಿವರಗಳು.
- ಸಂತ್ರಸ್ತೆಗೆ ಬೇರೆ ಏನಾದರೂ ನಿರ್ದಿಷ್ಟ ದುರ್ಬಲತೆಗಳಿದ್ದರೆ, ಅದರ ವಿವರಗಳು – ಉದಾ: ವಯಸ್ಸು; ಅಂಗವಿಕಲತೆ.



[redacted]

## ಪ್ರಕರಣ ದಾಖಲೀಕರಣ ಮತ್ತು ಸಾಕ್ಷ್ಯಗಳ ಸಂಗ್ರಹಣೆ

ಟಿಪ್ಪಣಿ: ಕಾನೂನು ಕಾರ್ಯಕರ್ತರು/ಎಚ್.ಆರ್.ಡಿ.ಗೆ ಬೆಂಬಲಿಸಬೇಕೆಂದು ಅಥವಾ ನಿರ್ವಹಿಸಬೇಕೆಂದು ಕೋರುವ ಎಲ್ಲ ವಿಎಡಬ್ಲ್ಯುಜಿ ಪ್ರಕರಣಗಳು ಅವರಿಗೆ ಸಂತ್ರಸ್ತೆ, ಸಂತ್ರಸ್ತೆಯ ಗೆಳೆಯ/ತಿ ಅಥವಾ ಕುಟುಂಬದ ಸದಸ್ಯರು, ಸಾಕ್ಷಿ ಅಥವಾ ಸಮುದಾಯದ ಪ್ರತಿನಿಧಿಯಿಂದ ವರದಿಯಾಗಿರಬಹುದು. ಆದರೆ ಕಾನೂನು ಕಾರ್ಯಕರ್ತರು/ಎಚ್.ಆರ್.ಡಿ.ಯವರು ನೇರವಾಗಿ ಪ್ರಕರಣದ ಕುರಿತು ಸಲಹೆ ಮಾಡುವ ಮೊದಲು, ಅವರು ಸಂತ್ರಸ್ತೆ ಅಥವಾ ಅಪರಾಧ ನಡೆಯುವ ಸಮಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಭೇಟಿ ಮಾಡಬೇಕು. ಮೂರನೇ ವ್ಯಕ್ತಿ ವರದಿ ಮಾಡುವುದು, ಉದಾ: ಘಟನೆಯನ್ನು ನೇರವಾಗಿ <u>ನೋಡಿಲ್ಲದ</u> ಕುಟುಂಬದ ಸದಸ್ಯರು ಅಥವಾ ಗೆಳೆಯರು, ಕಾನೂನು ಕಾರ್ಯಕರ್ತರು/ ಎಚ್.ಆರ್.ಡಿ. ಪ್ರಕರಣದ ಕುರಿತು ಸಲಹೆ ನೀಡಲು ಅಗತ್ಯವಾದ ಕಾನೂನಾತ್ಮಕ ಮಾನದಂಡಗಳನ್ನು ಸರಿಗಟ್ಟುವುದಿಲ್ಲ.

### ಸಂತ್ರಸ್ತೆಯೊಂದಿಗೆ ಮೊದಲ ಸಂಪರ್ಕ

1. ಸಂತ್ರಸ್ತೆಯು ದೈಹಿಕ ಅಥವಾ ಲೈಂಗಿಕ ಹಿಂಸೆಯನ್ನು ಅನುಭವಿಸಿದ ನಂತರ ತತ್‌ಕ್ಷಣವೇ ಅಥವಾ ಕೂಡಲೇ ನಿಮ್ಮ ಬಳಿ ಬಂದರೆ ಅಥವಾ ನಿಮ್ಮಲ್ಲಿಗೆ ಯಾರಾದರೂ ಕಳುಹಿಸಿದರೆ, ಈ ಕೆಳಗಿನವುಗಳನ್ನು ಮಾಡಿರಿ:

- ಸಂತ್ರಸ್ತೆಯ ತತ್‌ಕ್ಷಣದ ಅಗತ್ಯಗಳು ಏನೆಂದು ಪರಿಶೀಲಿಸಿ. ಉದಾ: ಆರೋಗ್ಯ (ದೈಹಿಕ/ಮಾನಸಿಕ), ಸಾಂಸ್ಕೃತಿಕ, ಅಂಗವಿಕಲತೆ(ದೈಹಿಕ/ಮಾನಸಿಕ), ಕೌಟುಂಬಿಕ (ಮಗು ಅಥವಾ ವಯಸ್ಕರ ಕಾಳಜಿಯ ವಿಚಾರ ಅಥವಾ ಸಮಸ್ಯೆಗಳು).
- ಸಂತ್ರಸ್ತೆಗೆ ನಿಮ್ಮ ಜೊತೆಗೆ ವೈದ್ಯಕೀಯ ಸಹಾಯ/ಪರೀಕ್ಷೆಗಾಗಿ ಆಸ್ಪತ್ರೆ ಅಥವಾ ವೈದ್ಯಕೀಯ ಕೇಂದ್ರಕ್ಕೆ ಬರುವಂತೆ ಮನವೊಲಿಸಿ.
- ಸಂತ್ರಸ್ತೆಯನ್ನು ಅವರ ಆಯ್ಕೆಯ ಒಂದು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಿರಿ.
- ಇನ್ನೂ ಹೆಚ್ಚಿನ ಹಾನಿಯ ಅಪಾಯದಿಂದ, ವಿಶೇಷವಾಗಿ ಸಂತ್ರಸ್ತೆಗೆ ಶಂಕಿತರು ಗೊತ್ತಿರುವ ಸಂದರ್ಭದಲ್ಲಿ, ಆಕೆಯನ್ನು ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳಿ. ಕೌಟುಂಬಿಕ ಹಿಂಸೆಯ ಪ್ರಕರಣಗಳಾಗಿದ್ದರೆ, ಮಕ್ಕಳನ್ನು ಅಪಾಯದಿಂದ ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳಿ.
- ಸಂತ್ರಸ್ತೆಯೊಂದಿಗೆ, ಆಕೆಯ ಕುಟುಂಬದೊಂದಿಗೆ ಅಥವಾ ಅವರ ಸ್ಥಳದಲ್ಲಿದ್ದಾಗ ಆರೋಗ್ಯ ಮತ್ತು ಸುರಕ್ಷತೆಯೂ ಸೇರಿದಂತೆ ನಿಮ್ಮ ಸ್ವಂತ ಯೋಗಕ್ಷೇಮದ ಕುರಿತು ಮುನ್ನೆಚ್ಚರಿಕೆ ತೆಗೆದುಕೊಳ್ಳಿ.
- ಆ ಸ್ಥಳದಲ್ಲಿರುವ, ಸಂತ್ರಸ್ತೆಯ ಬಟ್ಟೆ ಅಥವಾ ಏನಾದರೂ ಅವರಿಗೆ ಸಂಬಂಧಿಸಿದ ವಸ್ತುಗಳು/ಆಸ್ತಿ, ಈ ರೀತಿಯ ಯಾವುದೇ ವಿಧಿವಿಜ್ಞಾನದ ಸಾಕ್ಷ್ಯಗಳನ್ನು ತಕ್ಷಣವೇ ಸುರಕ್ಷಿತವಾಗಿಡಿ. ಸಂತ್ರಸ್ತೆಗೆ ಸಾಧ್ಯವಿದ್ದರೆ ಬೇರೆ ಬಟ್ಟೆಗಳನ್ನು ಹಾಕಿಕೊಳ್ಳುವಂತೆ ಮಾಡಿ.
- ಆ ಸನ್ನಿವೇಶ ಮತ್ತು ಶಂಕಿತರ ಕುರಿತು ಸಾಧ್ಯವಿದ್ದಷ್ಟೂ ಮಾಹಿತಿಯನ್ನು ಎಷ್ಟು ಸಾಧ್ಯವೋ ಅಷ್ಟು ಬೇಗನೆ ಪಡೆಯಿರಿ ಮತ್ತು ಮಾಹಿತಿಯನ್ನು ದಾಖಲಿಸಿಕೊಳ್ಳಿ.
- ಸಂತ್ರಸ್ತೆ ಮತ್ತು ಆಕೆಯ ಗಾಯಗಳ ಫೋಟೋ ತೆಗೆದುಕೊಳ್ಳಲು ಆಕೆಯ ಒಪ್ಪಿಗೆಯನ್ನು ಪಡೆದುಕೊಳ್ಳಿ. ಸಂತ್ರಸ್ತೆಯ ದೈಹಿಕ ಚಹರೆ ಮತ್ತು ಬಟ್ಟೆಯ ಸ್ಥಿತಿಗತಿ ಕುರಿತು ಒಂದು ಟಿಪ್ಪಣಿ ಮಾಡಿಕೊಳ್ಳಿ, ಅವು ಸಾಕ್ಷಾಧಾರದ ಪರಿಣಾಮವನ್ನು ಹೊಂದಿರುವ ಸಾಧ್ಯತೆ ಇದೆ.

### ಸಂತ್ರಸ್ತೆಯೊಂದಿಗೆ ಆರಂಭಿಕ ಸಂದರ್ಶನ

2. ಸಂತ್ರಸ್ತೆಯನ್ನು ಅವರ ಆಯ್ಕೆಯ ಒಂದು ಸುರಕ್ಷಿತ ಸ್ಥಳದಲ್ಲಿ ಭೇಟಿ ಮಾಡಿ.

3. ಈ ಕೆಳಗಿನ ಮಾಹಿತಿಯನ್ನು ಬರಹದಲ್ಲಿ ದಾಖಲಿಸಿಕೊಳ್ಳಿ.
   - ನಿಮಗೆ ಪ್ರಕರಣವನ್ನು ಯಾರು ವರದಿ ಮಾಡಿದರು?
   - ಸಂತ್ರಸ್ತೆಯ ವಿವರಗಳು: ಪೂರ್ಣ ಹೆಸರು (ಆದರೆ ಗಮನಿಸಿ: ಗುರುತನ್ನು ತುಂಬಾ ಗೌಪ್ಯವಾಗಿಡಿ, ಅವರ ಗುರುತನ್ನು ಬಹಿರಂಗಪಡಿಸಲು ಸಂತ್ರಸ್ತೆಯ ಒಪ್ಪಿಗೆ ಇದ್ದರೆ ಮಾತ್ರ ಹೇಳಬಹುದು), ವಿಳಾಸ (ಗ್ರಾಮ ಮತ್ತು ಜಿಲ್ಲೆ), ವಯಸ್ಸು, ಏನಾದರೂ ನಿರ್ದಿಷ್ಟ ದುರ್ಬಲತೆಗಳು? ಉದಾ: ಮಗು (18 ವರ್ಷಕ್ಕಿಂತ ಕೆಳಗೆ); ಮಾನಸಿಕ ಅಥವಾ ದೈಹಿಕ ಅಂಗವಿಕಲತೆ



[redacted]

- [illegible]
- [illegible]
- [illegible]
- [illegible]
- [illegible]
- [illegible]
- [illegible]
- [illegible]
- [illegible]
- [illegible]

4. ಸಂತ್ರಸ್ತೆಯ ಆಪಾದನೆಯನ್ನು ಕೋರ್ಟಿಗೆ ವರದಿ ಮಾಡಿದ್ದರೆ, ಕೋರ್ಟಿನ ಕಾರ್ಯವಿಧಾನವನ್ನು ವಿವರವಾಗಿ ಬರೆಯಿರಿ.

5. ಸಂತ್ರಸ್ತೆಗೆ [illegible] [illegible] [illegible] ಬರೆಯಿರಿ. ಸಂತ್ರಸ್ತೆಯ [illegible] ಕಾರ್ಯಕರ್ತರನ್ನು ಭೇಟಿಯಾಗಲು ಬಯಸುತ್ತಾರಾ ಎಂದು ಕೇಳಿ. [illegible] ಒಂದು ಒಳ್ಳೆಯ ವಿಚಾರ ಎಂದು ಬರೆಯಿರಿ.

ಪ್ರಕರಣದ ಫೈಲ್ ಅಥವಾ ಕಡತವನ್ನು ಸಿದ್ಧಪಡಿಸಿ.

6. ಪ್ರಕರಣ ಆರಂಭವಾಗುತ್ತಿದ್ದಂತೆಯೇ, ಒಂದು ಪ್ರಕರಣ ಕಡತ ಅಥವಾ ಕೇಸ್ ಫೈಲ್ ಆರಂಭಿಸಿ. ಸಂತ್ರಸ್ತೆಯೊಂದಿಗೆ ಮೊದಲ ಭೇಟಿ ಮತ್ತು ಮೊದಲ ಸಂಪರ್ಕದ ದಿನಾಂಕವನ್ನು ದಾಖಲಿಸಿ. (ಎರಡೂ ಬೇರೆಯಾಗಿದ್ದರೆ). ನೀವು ಮೊದಲ ಸಲ ಭೇಟಿಯಾದ ನಂತರ, ನೀವು ಸಂತ್ರಸ್ತೆಗೆ ನೀಡಿದ ಆರಂಭಿಕ ಮಾಹಿತಿಯನ್ನು/ಸಲಹೆಯನ್ನು ದಾಖಲಿಸಿ.

7. ಪ್ರಕರಣಕ್ಕೆ ಸಂಬಂಧಿಸಿದಂತೆ ನಿಮ್ಮ ಎಲ್ಲ ಸಂಭಾಷಣೆಗಳು, ಸಂದರ್ಶನಗಳು ಹಾಗೂ ಭೇಟಿಗಳ ಅನುಕ್ರಮವಾದ ಟಿಪ್ಪಣಿಯನ್ನು ಮಾಡಿ – ಸಂತ್ರಸ್ತೆಯೊಂದಿಗೆ, ಸಾಕ್ಷಿಗಳೊಂದಿಗೆ, ಸಂತ್ರಸ್ತೆಯ ಕುಟುಂಬ ಸದಸ್ಯರೊಂದಿಗೆ, ಸರ್ಕಾರಿ ಅಧಿಕಾರಿಗಳೊಂದಿಗೆ, ಪೊಲೀಸರೊಂದಿಗೆ, ಮಾಧ್ಯಮ ಪ್ರತಿನಿಧಿಗಳೊಂದಿಗೆ, ಸಹ-ಕಾರ್ಯಕರ್ತರೊಂದಿಗೆ ಇತ್ಯಾದಿಗಳೊಂದಿಗೆ ನಡೆಸಿದ ಭೇಟಿಗಳ ಟಿಪ್ಪಣಿ ಮಾಡಿ. ನಿಮ್ಮ ಎಲ್ಲ ಟಿಪ್ಪಣಿಗಳಿಗೆ ದಿನಾಂಕ ಹಾಕಿ, ಸಹಿ ಮಾಡಿ.

8. ಪ್ರಕರಣಕ್ಕೆ ಸಂಬಂಧಿಸಿದಂತೆ ನೀವು ಪಡೆದುಕೊಳ್ಳುವ ಎಲ್ಲ ದಾಖಲೆಗಳ ಮತ್ತು ಸಾಮಗ್ರಿಗಳ ಒಂದು ಪ್ರತಿಯನ್ನು ಇಟ್ಟುಕೊಂಡು ಫೈಲ್ ಮಾಡಿಡಿ. (ಇವು ನೀವು ಸಂದರ್ಶನಗಳು ಹಾಗೂ ಭೇಟಿಗಳ ಸಂದರ್ಭಗಳಲ್ಲಿ ಮಾಡಿಕೊಂಡ ನಿಮ್ಮ ಸ್ವಂತ ಟಿಪ್ಪಣಿಗಳು; ಸಂತ್ರಸ್ತರ ಮತ್ತು ಸಾಕ್ಷಿಗಳ ಹೇಳಿಕೆಗಳು; ಸಾಕ್ಷ್ಯಗಳ ಪಟ್ಟಿಗಳು; ಪ್ರಥಮ ಮಾಹಿತಿಯ ಪ್ರತಿಗಳು ಮತ್ತು ಇತರ ಪೊಲೀಸ್ ದಾಖಲೆಗಳು; ವೈದ್ಯಕೀಯ ಸಾಕ್ಷಿ ಮತ್ತು/ಅಥವಾ ವರದಿಗಳು; ಇವೆಲ್ಲವನ್ನೂ ಒಳಗೊಂಡಿರುತ್ತವೆ.)



[redacted]

ತದನಂತರದ ಕ್ರಮ

9. ಸಂತ್ರಸ್ತೆಯ ಒಪ್ಪಿಗೆಯೊಂದಿಗೆ, ಸಂತ್ರಸ್ತೆಯ ಪ್ರಕರಣವನ್ನು ಬೆಂಬಲಿಸುವ ಅಥವಾ ಅದಕ್ಕೆ ಸರಿಹೊಂದಿಕೊಳ್ಳುವ ಸಾಕ್ಷ್ಯಗಳನ್ನು ಹುಡುಕಿರಿ. ಯಾರಾದರೂ ಸಾಕ್ಷಿಗಳನ್ನು ಭೇಟಿಯಾಗಲು ಮತ್ತು ಸಂದರ್ಶನ ಮಾಡಲು ಪ್ರಯತ್ನಿಸಿ.

10. ಸಂದರ್ಶನಗಳು ಮತ್ತು ಎಲ್ಲ ಸಂಭಾಷಣೆಗಳನ್ನು ದಾಖಲಿಸಿಕೊಂಡು, ದಿನಾಂಕ ಹಾಕಿ, ಸಹಿ ಮಾಡಿರಿ ಮತ್ತು ನಂತರ ಅದನ್ನು ಪ್ರಕರಣದ ಫೈಲಿಗೆ ಸೇರಿಸಿ ಇಡಿ.

11. ದುರ್ಬಲರಾದ ಅಥವಾ ಹೆದರಿಕೆಗೊಳಗಾದ ಸಂತ್ರಸ್ತರು ಮತ್ತು ಸಾಕ್ಷಿಗಳನ್ನು ಗುರುತಿಸಿ ಮತ್ತು ಅವರೊಂದಿಗೆ ಅಪಾಯದ ಅಂದಾಜು/ಸುರಕ್ಷತೆಯ ಯೋಜನೆಯನ್ನು ಚರ್ಚಿಸಿರಿ. ಆರೋಪಿತ ದುಷ್ಕರ್ಮಿಗಳು ಸಾಕ್ಷಿಗಳಿಗೆ ಒಡ್ಡುವ ಬೆದರಿಕೆ, ಪ್ರಭಾವಬೀರಿ ಹೆದರಿಸುವುದು ಅಥವಾ ಕಿರುಕುಳಗಳನ್ನು ಪೊಲೀಸರಿಗೆ ವರದಿ ಮಾಡಲು ಹೇಳಿರಿ.

12. ನೀವು ಸಾಕ್ಷಿಗಳಿಗೆ ಯಾವ ಬಗೆಯ ಹೆಚ್ಚುವರಿ ಬೆಂಬಲವನ್ನು ಒದಗಿಸಿದ್ದೀರಿ ಅಥವಾ ಸಾಕ್ಷಿಗಳಿಗೆ ಯಾವ ಸೌಲಭ್ಯಗಳನ್ನು (ಕಾನೂನು ಸಹಾಯ; ಸಮಾಲೋಚಕರ ವಿವರಗಳು) ದೊರಕಿಸಿಕೊಳ್ಳಲು ಸಹಾಯ ಮಾಡಿದ್ದೀರಿ ಎಂಬುದನ್ನು ದಾಖಲಿಸಿಕೊಳ್ಳಿ.

**ಅಪರಾಧ ನ್ಯಾಯ ಸಂಸ್ಥೆಗಳು ಮತ್ತು ಅಥವಾ ಪ್ರಕರಣಗಳಿಗೆ ಸಮುದಾಯದ ಪ್ರತಿಕ್ರಿಯೆಗಳ ಮೇಲ್ವಿಚಾರಣೆ ಮಾಡುವುದು**

13. ಪ್ರಕರಣವನ್ನು ಪೊಲೀಸರಿಗೆ ವರದಿ ಮಾಡಲಾಯಿತೇ ಅಥವಾ ಬೇರೆ ಸರ್ಕಾರಿ ಸಂಸ್ಥೆಗೆ ವರದಿ ಮಾಡಿದರೇ? ಪ್ರಕರಣವನ್ನು ಯಾರು ವರದಿ ಮಾಡಿದರು – ಸಂತ್ರಸ್ತೆ/ಸಂತ್ರಸ್ತೆಯ ಕುಟುಂಬ/ನೀವು/ಬೇರೆ ಯಾರಾದರೂ?

14. ಪ್ರಕರಣವನ್ನು ಇವರಲ್ಲಿ ಯಾರಿಗೆ ವರದಿ ಮಾಡಲಾಯಿತು – ಪೊಲೀಸ್, ಸರ್ಕಾರಿ ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು ಅಥವಾ ಸಂಸ್ಥೆಗಳು, ಸಮುದಾಯದ ನಾಯಕರು?

15. ಪ್ರಕರಣವನ್ನು ವರದಿ ಮಾಡಿದ ನಂತರ ಸಂತ್ರಸ್ತೆಯು ಯಾವ ಬಗೆಯ ಬೆಂಬಲವನ್ನು ಪಡೆದರು?

16. ಯಾರು ಯಾವ ಕ್ರಮವನ್ನು ತೆಗೆದುಕೊಂಡರು?

17. ಪ್ರಕರಣಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ಎಲ್ಲ ಕ್ರಮಗಳನ್ನು ದಾಖಲಿಸಿ – ನಿಮ್ಮ ದಾಖಲೆಗಳನ್ನು ಆಗಾಗ ಪರಿಶೀಲಿಸಿ, ಯಾವುದೇ ಹೊಸ ವಿವರಗಳಿದ್ದರೆ, ಅವನ್ನು ಸೇರಿಸಿ, ಪರಿಷ್ಕರಿಸಿ ಅಂದರೆ ಅಪ್–ಡೇಟ್ ಮಾಡಿಡಿ.

**ಪ್ರಕರಣದೊಂದಿಗೆ ವ್ಯವಹರಿಸುವಾಗ ನೀವು ಎದುರಿಸಿದ ಸಮಸ್ಯೆಗಳು/ಸವಾಲುಗಳು**

18. ಪ್ರಕರಣದೊಂದಿಗೆ ವ್ಯವಹರಿಸುವಾಗ ನೀವು ಎದುರಿಸಿದ ಯಾವುದೇ ಸಮಸ್ಯೆಗಳು ಅಥವಾ ಸವಾಲುಗಳನ್ನು ದಾಖಲಿಸಿ – ಸಂತ್ರಸ್ತೆ, ಆಕೆಯ ಕುಟುಂಬ, ಸಮುದಾಯ, ಸ್ಥಳೀಯ ನಾಯಕರು, ಪೊಲೀಸ್, ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು, ಮಾಧ್ಯಮ, ಇವರೆಲ್ಲರ ಜೊತೆ ವ್ಯವಹರಿಸುವಾಗ ನಿಮಗೆ ಎದುರಾದ ಸಮಸ್ಯೆ ಅಥವಾ ಸವಾಲುಗಳು ಏನು?

**ನೀವು ಕಲಿತ ಪಾಠಗಳು**

19. ಈ ಪ್ರಕರಣದೊಂದಿಗೆ ವ್ಯವಹರಿಸಿದ್ದರಿಂದ ನೀವು ಕಲಿತ ಪಾಠಗಳನ್ನು ದಾಖಲಿಸಿ:

- ಏನು ತುಂಬ ಸುಲಭವಾಗಿದೆ ಅಥವಾ ಸುಗಮವಾಗಿದೆ ಎಂದು ನೀವು ಕಂಡುಕೊಂಡಿರಿ?
- ಯಾವುದು ನಿಮಗೆ ಕಷ್ಟವೆನ್ನಿಸಿತು?
- ನಿಮಗೆ ಸಾಕಷ್ಟು ಕಾನೂನು ಜ್ಞಾನ ಇದೆಯೇ?
- ನಿಮಗೆ ಹೆಚ್ಚುವರಿ ಏನಾದರೂ ಮಾಹಿತಿ ಅಥವಾ ತರಬೇತಿಯ ಅಗತ್ಯವಿದೆಯೇ/ತರಬೇತಿ ಬೇಕು ಎಂದು ಅನ್ನಿಸಿದೆಯೇ?



[redacted]

## ವಿಎಡಬ್ಲ್ಯುಜಿ ಪ್ರಕರಣಗಳ ಪೊಲೀಸ್ ತನಿಖೆಯ ಮೇಲೆ ನಿಗಾವಹಿಸಲು ತಪಶೀಲು ಪಟ್ಟಿ

### ಪೊಲೀಸ್ ತನಿಖೆಯ ಪರಿಣಾಮಕಾರತೆಯನ್ನು ಮೌಲ್ಯಾಂಕನ ಮಾಡಲು ಪಡೆಯಬೇಕಿರುವ ಮಾಹಿತಿಗಳು

1. ಸಂತ್ರಸ್ತೆಯನ್ನು ನೋಡಿಕೊಂಡ ರೀತಿ

- ಸಂತ್ರಸ್ತೆಯು ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ಕೊಡಲು ಎಲ್ಲಿಗೆ ಹೋಗಬೇಕು? ಅದು ಖಾಸಗಿ ಅಥವಾ ಸಾರ್ವಜನಿಕ ಸ್ಥಳವೋ? ಉದಾ: ಪೊಲೀಸ್ ಠಾಣೆಯಲ್ಲಿ ಸಮವಸ್ತ್ರದಲ್ಲಿರುವ ಡೆಸ್ಕಿನಲ್ಲಿರುವ ಅಧಿಕಾರಿಯೇ ಅಥವಾ ವಿಎಡಬ್ಲ್ಯುಜಿ ಜೊತೆ ವ್ಯವಹರಿಸುವ ಪರಿಣಿತರ ಘಟಕವೇ? ಆಕೆ ಬಹಳ ಹೊತ್ತಿನವರೆಗೆ ಕಾಯಬೇಕಾಯಿತೇ?
- ಪೊಲೀಸರು ಪ್ರಕರಣವನ್ನು ತನಿಖೆ ಮಾಡಲು ವಿಶೇಷ ತರಬೇತಿ ಹೊಂದಿದ ಅಧಿಕಾರಿಗಳು/ಘಟಕಗಳನ್ನು ಹೊಂದಿದ್ದಾರೆಯೇ?
- ಸಂತ್ರಸ್ತೆಯನ್ನು ಮಹಿಳಾ ಅಧಿಕಾರಿಯು ಸಂದರ್ಶನ ಮಾಡಿದರೇ?
- ಪೊಲೀಸರು ವಿಎಡಬ್ಲ್ಯುಜಿಯ ಕುರಿತು ತನಿಖೆ ಮಾಡಲು ಯಾವುದಾದರೂ ಪೊಲೀಸ್ ನೀತಿ ಅಥವಾ ಕಾರ್ಯವಿಧಾನಗಳನ್ನು ಉಲ್ಲೇಖಿಸಿದರೇ, ಉದಾ: ಕೌಂಟುಂಬಿಕ ಹಿಂಸೆ ಕುರಿತ ನೀತಿ; ಲೈಂಗಿಕ ಹಿಂಸೆ ಕುರಿತ ನೀತಿ – ಅಂತಹದೇನಾದರೂ ಇದ್ದರೆ ಆ ನೀತಿಯ ಪ್ರತಿಯೊಂದನ್ನು ತೆಗೆದುಕೊಳ್ಳಿ
- ಅಧಿಕಾರಿಯು ಮೊದಲ ಸಂದರ್ಶನದಲ್ಲಿ ಸಂತ್ರಸ್ತೆಗೆ ಯಾವ ಪ್ರಶ್ನೆಗಳನ್ನು ಕೇಳಿದರು?
- ಸಂತ್ರಸ್ತೆಯು ಆಕ್ರಮಣ ಮಾಡಿದವರನ್ನು ದೈಹಿಕವಾಗಿ ಪ್ರತಿರೋಧಿಸಿದರೇ ಎಂದು ಅಧಿಕಾರಿಯು ಕೇಳಿದರೇ?
- ಅಧಿಕಾರಿಯು ಸಂತ್ರಸ್ತೆಗೆ ಏನೇನು ಗಾಯಗಳಾಗಿವೆ ತೋರಿಸು ಎಂದು ಕೇಳಿದರೇ? ಪೊಲೀಸರು ಸಂತ್ರಸ್ತೆಯ ಗಾಯಗಳ ಫೋಟೋ ತೆಗೆದುಕೊಂಡರೇ?
- ಪೊಲೀಸರು ಮೊದಲ ಸಂದರ್ಶನದಲ್ಲಿ ಸಂತ್ರಸ್ತೆಗೆ ಸಹಾಯ ಮಾಡಿ, ಕಾನೂನು ಪ್ರಕ್ರಿಯೆಗಳ ಕುರಿತು ವಿವರಿಸಿದರೇ?
- ಸಂತ್ರಸ್ತೆಯು ಘಟನೆಯ ಕುರಿತು ಹೇಳಿಕೆ ನೀಡಿದಾಗ, ಪೊಲೀಸರು ತನ್ನನ್ನು ನಂಬಿದರು ಎಂದು ಆಕೆಗೆ ಅನ್ನಿಸಿತೇ, ಅಂದರೆ ಪೊಲೀಸರು ಆಪಾದನೆಯು ನಿಜವಾದದ್ದು ಎಂಬ ಆಧಾರದಲ್ಲಿ ಕಾರ್ಯಪ್ರವೃತ್ತರಾದರೇ?
- ಯಾವುದಾದರೂ ಒಂದು ಹಂತದಲ್ಲಿ ಪೊಲೀಸರು ಘಟನೆಯ ಮೊದಲು, ಘಟನೆ ನಡೆಯುವಾಗ ಅಥವಾ ನಂತರ ಸಂತ್ರಸ್ತೆಗೆ ಆಕೆಯ ವರ್ತನೆಗಾಗಿ ಟೀಕಿಸಿದರೇ?
- ಪೊಲೀಸರು ಸಂತ್ರಸ್ತೆಯ ಹೇಳಿಕೆ ಅಥವಾ ಹಿಂಸಾತ್ಮಕ ಘಟನೆಯನ್ನು ಪುನಾನೆನಪಿಸಿಕೊಂಡಿದ್ದರ ಕುರಿತು ಸವಾಲು ಹಾಕಿದರೇ?
- ಪೊಲೀಸ್ ಅಧಿಕಾರಿಯು ಸಂತ್ರಸ್ತೆಗೆ ಸಹಿ ಹಾಕಲಿಕ್ಕಾಗಿ ಹೇಳಿಕೆಯನ್ನು ಬರೆದರೇ?
- ಸಂತ್ರಸ್ತೆಯು ಮೊದಲ ಸಂದರ್ಶನದಲ್ಲಿ ಹೇಳಿದ ಎಲ್ಲ ದೂರುಗಳು ಮತ್ತು ಮಾಹಿತಿಯನ್ನು ದಾಖಲಿಸಿಕೊಂಡರೇ/ರೆಕಾರ್ಡ್ ಮಾಡಿಕೊಂಡರೇ? ಇಲ್ಲವಾದಲ್ಲಿ, ಯಾವ ಮಾಹಿತಿಯನ್ನು ಕೈಬಿಟ್ಟರು?
- ಪೊಲೀಸರು ಐಪಿಸಿ ಮತ್ತು/ಅಥವಾ ಬೇರೆ ಕಾಯಿದೆ ಉದಾ: ಪಿಒಎ, ಎಸ್‌ಎಚ್‌ಎಯ ಉಲ್ಲೇಖಗಳನ್ನು ಒಳಗೊಂಡಿದ್ದಾರೆಯೇ?
- ಹೇಳಿಕೆಯು ಸಂತ್ರಸ್ತೆಯು ತೆಗೆದುಕೊಂಡ ಕ್ರಮಗಳಿಗೆ ಪ್ರೇರಣೆಗಳು ಮತ್ತು ವಿವರಣೆಗಳನ್ನು ಒಳಗೊಂಡಿದೆಯೇ?



[redacted]

- ಪೊಲೀಸರು ಸಂತ್ರಸ್ತೆಯ ಹೇಳಿಕೆಯಲ್ಲಿರುವ ಅಂತರಗಳು ಅಥವಾ ಅಸಮಂಜಸ ಅಂಶಗಳನ್ನು ಚರ್ಚಿಸಲು ಇನ್ನೊಂದು ಸಂದರ್ಶನ ಮಾಡಿ, ಅನುಪಾಲನೆ ಮಾಡಿದರೇ?
- ಪೊಲೀಸರು ಸಂತ್ರಸ್ತೆಯ ಸುರಕ್ಷತೆ ಕುರಿತು ಪರಿಶೀಲನೆ ಮಾಡಿದರೇ/ಯಾವುದಾದರೂ ಮುಂದುವರೆದ ಅಪಾಯಗಳಿಂದ ಆಕೆಯನ್ನು ರಕ್ಷಿಸಲು ಏನಾದರೂ ಕ್ರಮ ತೆಗೆದುಕೊಂಡರೇ?

2. ಆರೋಪಿ ದುಷ್ಕರ್ಮಿಯ ಸಂದರ್ಶನ ಮತ್ತು ತನಿಖೆ

- ಪೊಲೀಸರು ತನಿಖೆಯ ಮೊದಲಹಂತವಾಗಿ ಆರೋಪಿ ದುಷ್ಕರ್ಮಿಯ ಸಂದರ್ಶನ ಮಾಡಿದರೇ?
- ತನಿಖೆ ಮುಂದುವರೆದಂತೆ ಪೊಲೀಸರು ಆರೋಪಿ ದುಷ್ಕರ್ಮಿಯ ಜೊತೆ ಮತ್ತೆ ಸಂದರ್ಶನವನ್ನು (ಗಳನ್ನು) ನಡೆಸಿದರೇ?
- ಆರೋಪಿ ದುಷ್ಕರ್ಮಿಯು ಈ ಹಿಂದೆ (ಅ) ಸಂತ್ರಸ್ತೆಯ ಅಥವಾ (ಆ) ಬೇರೆ ಮಹಿಳೆಯ ವಿರುದ್ಧ ಹಿಂಸಾಚಾರ ಎಸಗಿದ ವರದಿಗಳು ಇತ್ತೇ?
- ಸಂತ್ರಸ್ತೆಯು ಎಂದಾದರೂ ದುಷ್ಕರ್ಮಿಯ ವಿರುದ್ಧ ರಕ್ಷಣೆ ಬೇಕೆಂದು ಕೋರಿ ನಾಗರಿಕ ಆದೇಶಕ್ಕಾಗಿ ಅರ್ಜಿ ಸಲ್ಲಿಸಿದ್ದರೇ?
- ಬೇರೆ ಯಾವುದಾದರೂ ಮಹಿಳೆಗೆ ಸಂಬಂಧಿಸಿದಂತೆ ಆರೋಪಿ ದುಷ್ಕರ್ಮಿಯ ವಿರುದ್ಧ ಏನಾದರೂ ನಾಗರಿಕ ಆದೇಶ ಹೊರಬಿದ್ದಿತ್ತೇ?

3. ಅಪರಾಧ ಸನ್ನಿವೇಶ

- ಘಟನೆಯನ್ನು ವರದಿ ಮಾಡಿದ ಸಮಯದಲ್ಲಿ ತರಬೇತಿ ಹೊಂದಿದ ಅಧಿಕಾರಿಗಳು ಬಂದು ಭೌತಿಕ ತನಿಖೆ ನಡೆಸಿದರೇ?
- ತರಬೇತಿ ಹೊಂದಿದ ಅಧಿಕಾರಿಗಳು ಅಪರಾಧ ಸನ್ನಿವೇಶದ ಫೋಟೋ ತೆಗೆದುಕೊಂಡರೇ?
- ಅಪರಾಧ ಸನ್ನಿವೇಶದ ವಿಧಿವಿಜ್ಞಾನ ವಿಶ್ಲೇಷಣೆಯನ್ನು ಅಂದರೆ ಅಪರಾಧ ಸನ್ನಿವೇಶದಲ್ಲಿ ಭೌತಿಕ ಪುರಾವೆಗಳ ವೈಜ್ಞಾನಿಕ ಸಂಗ್ರಹಣೆ ಮತ್ತು ವಿಶ್ಲೇಷಣೆ ನಡೆಸಲಾಯಿತೇ?

4. ವೈದ್ಯಕೀಯ ಸಾಕ್ಷ್ಯಗಳು

- ಮಾನಸಿಕ ಆಘಾತ ಮತ್ತು ದೈಹಿಕ ಗಾಯಗಳ ಪುರಾವೆಯನ್ನು ಪಡೆದುಕೊಳ್ಳಲು ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಲಾಯಿತೇ? ಘಟನೆ ನಡೆದ ಎಷ್ಟು ಸಮಯದ ತರುವಾಯ ನಡೆಸಲಾಯಿತು?
- ಗಾಯಗಳ ನಿಖರ ದಾಖಲೆ ಮತ್ತು ವೈದ್ಯಕೀಯ ಫಲಿತಾಂಶಗಳ ವಸ್ತುನಿಷ್ಠ ವಿಶ್ಲೇಷಣೆಯನ್ನು ಒದಗಿಸಲು ವೈದ್ಯಕೀಯ ವರದಿಯ(ಗಳ)ನ್ನು ಪಡೆಯಲಾಯಿತೇ?
- ಏನಾದರೂ ವೈದ್ಯಕೀಯ ಸಾಕ್ಷ್ಯಗಳನ್ನು ಸಂಗ್ರಹಿಸಲಾಯಿತೇ?
- ಸಂತ್ರಸ್ತೆಯು ಒಪ್ಪಿಗೆ ನಮೂನೆಗೆ ಸಹಿ ಹಾಕಿದರೇ?

5. ವಿಧಿವಿಜ್ಞಾನ ಸಾಕ್ಷ್ಯಗಳು

- ಎಲ್ಲ ವಿಧಿವಿಜ್ಞಾನ ಸಾಕ್ಷ್ಯಗಳನ್ನು ಸಂಗ್ರಹಿಸಿ, ಉಳಿಸಿಕೊಳ್ಳಲಾಗಿದೆಯೇ, ಉದಾ: ಅಪರಾಧ ಸನ್ನಿವೇಶದ ಭೌತಿಕ ಸಾಕ್ಷ್ಯಗಳು
- ಪೊಲೀಸರು ಸುಪರ್ದಿಗೆ ತೆಗೆದುಕೊಂಡ ವಸ್ತುಗಳ ಕುರಿತು ಏನಾದರೂ ಲಿಖಿತ ದಾಖಲೆ ಇದೆಯೇ, ಅಂದರೆ ಸಾಕ್ಷ್ಯದ ವಸ್ತುಗಳ ಮೇಲೆ ಪೊಲೀಸರು ಅನಿಯಂತ್ರಿತ ನಿಯಂತ್ರಣವನ್ನು ಹೊಂದಿದ್ದಾರೆ ಎಂದು ಸಾಕ್ಷಿಸಮೇತ ಲಿಖಿತ ದಾಖಲೆ (ಇದು ಅಪರಾಧ ಸನ್ನಿವೇಶದಲ್ಲಿ ಸಂಗ್ರಹಿಸಿದ ಸಾಕ್ಷ್ಯಗಳು ಮತ್ತು ನ್ಯಾಯಾಲಯದಲ್ಲಿ ಪ್ರಸ್ತುತಪಡಿಸಿದ ಸಾಕ್ಷ್ಯಗಳು ಒಂದೇ ಎಂದು ರುಜುವಾತು ಪಡಿಸುತ್ತದೆ) ಇದೆಯೇ?



[redacted]

6. ಸಾಕ್ಷಿಗಳು

- ಪೊಲೀಸರು ಬೇರೆ ಸಾಕ್ಷಿಗಳನ್ನು ಗುರುತಿಸಿದ್ದಾರೆಯೇ, ಉದಾ: ಘಟನೆಯನ್ನು ನೋಡಿದ ವ್ಯಕ್ತಿಗಳು; ಬೇರೆ ವ್ಯಕ್ತಿಗಳು?
- ಪೊಲೀಸರು ಎಲ್ಲ ಸಂಬಂಧಿತ ಸಾಕ್ಷಿಗಳ ಸಂದರ್ಶನ ಮಾಡಿದರೇ?

7. ವಿಡಿಯೋ ಮತ್ತು ಮೌಖಿಕ ಸಾಕ್ಷಿಗಳು

- ಪೊಲೀಸರು ಯಾವುದಾದರೂ ಸಿಸಿಟಿವಿ/ವಿಡಿಯೋ ಫೂಟೇಜ್‌ಗಳನ್ನು ಸಂಗ್ರಹಿಸಿ, ತಮ್ಮಲ್ಲಿ ಸರಿಯಾಗಿ ಉಳಿಸಿಕೊಂಡಿದ್ದಾರೆಯೇ?
- ಪೊಲೀಸರು ಸಂತ್ರಸ್ತೆ ಮತ್ತು ದುಷ್ಕರ್ಮಿಯ ನಡುವೆ ವಿನಿಮಯವಾದ ಮೊಬೈಲ್ ಫೋನಿನ ರೆಕಾರ್ಡ್, ಮೆಸೇಜುಗಳು ಮತ್ತು ಇ-ಮೇಲ್ ಇತ್ಯಾದಿಗಳ ಪರಿಶೀಲನೆ ಮಾಡಿದ್ದಾರೆಯೇ (ಅಗತ್ಯವಿದೆ ಎನ್ನಿಸಿದ್ದರೆ)?

8. ತನಿಖೆಯ ಅವಧಿ

- ತನಿಖೆಯು ಎಷ್ಟು ಸಮಯ ತೆಗೆದುಕೊಂಡಿತು?
- ಪೊಲೀಸರು ವಿಳಂಬ ಮಾಡಿದರೇ? ಯಾವ ಕಾರಣಗಳಿಗಾಗಿ?
- ತನಿಖೆ ಆರಂಭವಾದ ನಂತರ ಅಪರಾಧ ಸನ್ನಿವೇಶ ಸ್ಥಳಕ್ಕೆ ಭೇಟಿ ನೀಡಲು ಪೋಲೀಸರಿಗೆ ಎಷ್ಟು ಸಮಯ ಹಿಡಿಯಿತು?
- ತನಿಖೆ ಆರಂಭವಾದ ನಂತರ ಸಾಕ್ಷಿಗಳ ಸಂದರ್ಶನ ಮಾಡಲು ಪೋಲೀಸರಿಗೆ ಎಷ್ಟು ಸಮಯ ಹಿಡಿಯಿತು?

9. ಸಂತ್ರಸ್ತೆ ಮತ್ತು ಆಕೆಯ ಕುಟುಂಬದ ಒಳಗೊಳ್ಳುವಿಕೆ

- ಸಂತ್ರಸ್ತೆ ಮತ್ತು/ಅಥವಾ ಆಕೆಯ ಕುಟುಂಬದವರು ತನಿಖೆ ನಡೆಸುತ್ತಿರುವ ಪೋಲೀಸ್ ಅಧಿಕಾರಿಯಿಂದ ತನಿಖೆಯ ಪ್ರಗತಿ ಕುರಿತು ನಿಯಮಿತವಾಗಿ ವರದಿಗಳನ್ನು ಪಡೆಯುತ್ತಿದ್ದಾರೆಯೇ?

10. ದುಷ್ಕರ್ಮಿಯ ಬಂಧನ ಮತ್ತು ವಿಚಾರಣೆ

- ಪೊಲೀಸರು ದುಷ್ಕರ್ಮಿಯನ್ನು ಬಂಧಿಸಿದರೇ?
- ಪೊಲೀಸರು ಪ್ರಕರಣವನ್ನು ಖುಲಾಸೆ ಮಾಡಿದರೇ ಅಥವಾ ವಿಚಾರಣೆಗಾಗಿ ಪ್ರಾಸಿಕ್ಯೂಟರ್‌ಗೆ ಒಪ್ಪಿಸಿದರೇ?
- ಪ್ರಕರಣವು ವಿಚಾರಣೆಗೆ ಹೋಯಿತೇ?



[redacted]